ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

42

ಮಾರ್ಚ್ 29 ಮಂಗಳವಾರ 2022

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523,
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 339 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

₹4



ಕೆಎಸ್‌ಒಯು: ವೇಳಾಪಟ್ಟಿ ಪ್ರಕಟ

ಮೈಸೂರು,ಮಾ.28–ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಾರ್ಷಿಕ ಹಾಗೂ ಸೆಮಿಸ್ಟರ್ ಪರೀಕ್ಷೆಗಳು ಏ.4ರಿಂದ ರಾಜ್ಯದ 22 ಪರೀಕ್ಷಾ ಕೇಂದ್ರಗಳಲ್ಲಿ ಪ್ರಾರಂಭವಾಗುತ್ತಿದ್ದು, ವೇಳಾಪಟ್ಟಿಗಳನ್ನು ವಿವಿ ಅಂತರ್ಜಾಲದಲ್ಲಿ ಪ್ರಕಟಿಸಿದೆ. 2001–02ರಿಂದ 2014–15 ಹಾಗೂ 2018–19, 2019–20ರ ಸಾಲಿನ ಸ್ನಾತಕ ಪದವಿ(ಯುಜಿ) ಪೂರಕ ಪರೀಕ್ಷೆಗಳು ಮತ್ತು 2020–21ನೇ ಶೈಕ್ಷಣಿಕ ಸಾಲಿನಲ್ಲಿ (ಜನವರಿ ಆವೃತ್ತಿ) ಪ್ರವೇಶಾತಿ ಪಡೆದ ತೃತೀಯ ವರ್ಷದ ಸ್ನಾತಕ ಪದವಿ ಹಾಗೂ ಸ್ನಾತಕೋತ್ತರ ಪದವಿ ದ್ವಿತೀಯ ವರ್ಷ/ದ್ವಿತೀಯ ಮತ್ತು 4ನೇ ಸೆಮಿಸ್ಟರ್ ಪರೀಕ್ಷೆಗಳು ಹಾಗೂ ಎಲ್ಲಾ ಸ್ನಾತಕ ಹಾಗೂ ಸ್ನಾತಕೋತ್ತರ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕಾರ್ಯಕ್ರಮಗಳ ವಿದ್ಯಾರ್ಥಿಗಳಿಗೆ ಪರೀಕ್ಷಾ ವೇಳಪಟ್ಟಿ ಪ್ರಕಟಿಸಿದೆ. ಮಾಹಿತಿಗೆ www.ksoumysuru.ac.in ಅಥವಾ ಸಹಾಯವಾಣಿ ಸಂಖ್ಯೆ: 8800335638 ಸಂಪರ್ಕಿಸಿ.

ಭಾರತೀಯ ಪರಿವರ್ತನಾ ಸಂಘದಿಂದ ಏ.14ರಂದು

'ಸಮಾನತೆಗಾಗಿ ಓಟ'



ಮೈಸೂರು, ಮಾ.28(ಆರ್‌ಕೆಬಿ)– ಭಾರತೀಯ ಪರಿವರ್ತನಾ ಸಂಘದ (ಬಿಪಿಎಸ್) ವತಿಯಿಂದ ಡಾ. ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ಏಪ್ರಿಲ್ 14ರಂದು ರಾಜ್ಯ ಮಟ್ಟದ 'ಸಮಾನತೆಗಾಗಿ ಓಟ' ಆಯೋಜಿಸಲಾಗಿದೆ ಎಂದು ಬಿಪಿಎಸ್ ಸಂಚಾಲಕ ಸೋಸಲೆ ಸಿದ್ದರಾಜು ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು 15 ಕಿ.ಮೀ ಅಂತರದ ಈ ಓಟ ಅಂದು ಬೆಳಗ್ಗೆ 6.30ಕ್ಕೆ ಮೈಸೂರಿನ ಪುರಭವನದಿಂದ ಹೊರಟು ಜಯಚಾಮರಾಜ ಒಡೆಯರ್ ವೃತ್ತ (ಹಾರ್ಡಿಂಜ್ ವೃತ್ತ), ಸಂಸ್ಕೃತ ಪಾಠಶಾಲೆ, ಅಗ್ರಹಾರ ವೃತ್ತ, ಸಿದ್ದಪ್ಪ ವೃತ್ತ, ಆರ್‌ಟಿಓ, ಅಶೋಕ ವೃತ್ತ, ನ್ಯಾಯಾಲಯದ ಮುಂಭಾಗದಿಂದ ಕ್ರಾಫರ್ಡ್ ಹಾಲ್ ಮುಂಭಾಗ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರಿಯಪ್ಪ ವೃತ್ತ (ಮೆಟ್ರೊಪೋಲ್ ವೃತ್ತ), ಡಾ.ಜಗಜೀವನರಾಂ ವೃತ್ತ (ರೈಲ್ವೆ ಸ್ಟೇಷನ್ ಬಳಿ), ಕೆ.ಆರ್.ಆಸ್ಪತ್ರೆ ಬಳಿಯಿಂದ ಲಷ್ಕರ್ ಪೊಲೀಸ್ ಠಾಣೆ, ಅಶೋಕ ರಸ್ತೆ ಮೂಲಕ ಮತ್ತೆ ಪುರಭವನಕ್ಕೆ ವಾಪಸಾಗಲಿದೆ ಎಂದು ಹೇಳಿದರು.

ಮೊದಲ ಬಹುಮಾನವಾಗಿ 10 ಸಾವಿರ, ಎರಡನೇ ಬಹುಮಾನವಾಗಿ 5 ಸಾವಿರ ಹಾಗೂ ಮೂರನೇ ಬಹುಮಾನವಾಗಿ 3 ಸಾವಿರ ರೂ. ನೀಡಲಾಗುತ್ತದೆ. ಜೊತೆಗೆ ಟ್ರೋಫಿ ನೀಡಲಾಗುತ್ತದೆ. ಓಟಗಾರರಿಗೆ ಬಿಳಿ ಬಣ್ಣದ ಟೀ ಶರ್ಟ್ ನೀಡಲಾಗುವುದು. ಐದು ಹಾಗೂ ಮೂರನೇ ಬಹುಮಾನವಾಗಿ ಮೂರು ಸಾವಿರ ರೂ. ನೀಡಲಾಗುತ್ತದೆ. ನೋಂದಣಿ ಶುಲ್ಕ 100 ರೂ.ಗಳಾಗಿದೆ. ರಾಜ್ಯದಾದ್ಯಂತ ಸುಮಾರು 200 ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಈಗಾಗಲೇ ಚಿತ್ರದುರ್ಗ, ಬೆಂಗಳೂರು, ಬಳ್ಳಾರಿ ಸೇರಿದಂತೆ ವಿವಿಧ ಜಿಲ್ಲೆಗಳ ಆಸಕ್ತರು ಹೆಸರು ನೋಂದಾಯಿಸಿಕೊಂಡಿದ್ದಾರೆ ಎಂದು ತಿಳಿಸಿದರು.

ಬಹುಸಂಸ್ಕೃತಿಯ ದೇಶ ನಮ್ಮದು. ವಿವಿಧತೆಯಲ್ಲಿ ಏಕತೆ ಕಾಣುವ ದೇಶ. ಆದರೆ ಇತ್ತೀಚಿನ ಕೆಲವು ಬೆಳವಣಿಗೆಗಳು ಮಾರಕವಾಗುತ್ತಿದೆ. ಹಾಗಾಗಿ ನಮ್ಮ ಸಂಘಟನೆ ಜನಜಾಗೃತಿ ಹಿನ್ನೆಲೆಯಲ್ಲಿ ಸಮಾನತೆಗಾಗಿ ಓಟ ಆಯೋಜಿಸಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಬಿಪಿಎಸ್ ಕಾರ್ಯದರ್ಶಿ ಪ್ರಭುಸ್ವಾಮಿ, ಉಪಾಧ್ಯಕ್ಷ ಮಹದೇವು, ದಿನಕರ್, ಶ್ರೀನಿವಾಸ್ ಪಡುವಾರಹಳ್ಳಿ, ಪ್ರತಾಪ್ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಸಹಕಾರ ಸಂಘಗಳ ಜಂಟಿ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡ ಉಮೇಶ್ ಹಾಗೂ ವರ್ಗಾವಣೆಗೊಂಡ ಪ್ರಕಾಶ್‌ರಾವ್ ಅವರನ್ನು ಮೈಸೂರು ಜಿಲ್ಲಾ ಹಾಪ್‌ಕಾಮ್ಸ್ ಸಂಘದ ಅಧ್ಯಕ್ಷ ಎಂ.ಟಿ.ಅಣ್ಣೇಗೌಡ ನೇತೃತ್ವದಲ್ಲಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರಾದ ಬಿ.ಪಿ.ಬೋರೇಗೌಡ, ಬನ್ನೂರು ಡಿ.ಪದ್ಮನಾಭ್, ರಘು, ವೈ.ಜಿ.ಮಹೇಂದ್ರ, ಎಸ್.ಆರ್.ಶ್ರೀನಿವಾಸ್, ಟಿ.ರಾಮೇಗೌಡ, ಸೋಮಶೇಖರ್, ಚಂದ್ರೇಗೌಡ, ತೋಟಗಾರಿಕೆ ಉಪನಿರ್ದೇಶಕ ರುದ್ರೇಶ್, ಎಂಸಿಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಜನಾರ್ಧನ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಮೂರನೇ ಕಣ್ಣನ್ನು ಜಾಗೃತಗೊಳಿಸುವ ಯೋಗಿಕ್ ವಿಧಾನ

ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಚಿತ್ರಗಳನ್ನು ಗುರುತಿಸಿದ ಮಕ್ಕಳು

ಮೈಸೂರು, ಮಾ.28 (ಆರ್‌ಕೆಬಿ)– ಮೈಸೂರಿನ ಪತ್ರಕರ್ತರ ಭವನದಲ್ಲಿ ಅಂತರ್ ಚಕ್ಷು ಮಿಡ್ ಬ್ರೈನ್ ಆಕ್ಟಿವೇಷನ್ ಅಕಾಡೆಮಿ ಹಾಗೂ ಪರಮಹಂಸ ಯೋಗ ಮಹಾ ವಿದ್ಯಾಲಯದಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಹಲವಾರು ಮಕ್ಕಳು ಕಣ್ಣಿಗೆ ಬಟ್ಟೆ ಕಟ್ಟಿಕೊಂಡೇ ಹಲವಾರು ಕೌಶಲ್ಯಗಳನ್ನು ಪ್ರದರ್ಶಿಸಿದರು.

ಈ ವೇಳೆ ಕಣ್ಣಿಗೆ ಬಟ್ಟೆ ಕಟ್ಟಿಕೊಂಡೇ ಕೈಗೆ ನೀಡಿದ ವಸ್ತುವಿನ ಬಣ್ಣ ಗುರುತಿಸುವುದು, ಪತ್ರಿಕೆ ಓದುವುದು, ಚಿತ್ರಗಳನ್ನು ಗುರುತಿಸುವುದು ಮೊದಲಾದ ಚಾಕಚಕ್ಯತೆ ಪ್ರದರ್ಶಿಸಿದರು. ಈ ವೇಳೆ ಮಹಾ ವಿದ್ಯಾಲಯದ ಅಧ್ಯಕ್ಷರಾದ ಶಿವಪ್ರಕಾಶ್ ಮಾತನಾಡಿ, ಈ ಅಭ್ಯಾಸದಿಂದ ಮೂರನೇ ಕಣ್ಣು ಜಾಗೃತಗೊಳ್ಳುತ್ತದೆ. ಅಲ್ಲದೆ, ಜ್ಞಾಪಕಶಕ್ತಿ, ಏಕಾಗ್ರತೆ, ಆತ್ಮವಿಶ್ವಾಸ, ಮನಸ್ಸಿನ ನಿಯಂತ್ರಣ ಸಾಧ್ಯವಾಗುತ್ತದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ತೇಜಸ್ವಿ, ಸತೀಶ್, ಅಶ್ವಿನಿ, ಕವಿತಾ ಉಪಸ್ಥಿತರಿದ್ದರು.



ಮೈಸೂರಿನ ಕೃಷ್ಣರಾಜ ಸಹಕಾರ ಬ್ಯಾಂಕ್‌ನ ನೂತನ ಅಧ್ಯಕ್ಷ ಪ್ರತಿಧ್ವನಿ ಪ್ರಸಾದ್ ಹಾಗೂ ಉಪಾಧ್ಯಕ್ಷ ಬಸವರಾಜ್ ಬಸಪ್ಪ ಅವರನ್ನು ಅಗ್ರಹಾರದ ಕುಂದೂರು ಮಠದಲ್ಲಿ ಸನ್ಮಾನಿಸಲಾಯಿತು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಡಾ.ಶರತ್‌ಚಂದ್ರ ಸ್ವಾಮೀಜಿ, ಶ್ರೀ ಸಿದ್ದಮಲ್ಲ ಸ್ವಾಮೀಜಿ, ಶ್ರೀಕಂಠಸ್ವಾಮೀಜಿ, ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಶ್ರೀ ಗುರುಬಸವಲಿಂಗ ಸ್ವಾಮೀಜಿ, ಮುಖಂಡರಾದ ರವಿ, ಸುಬ್ಬಣ್ಣ, ಗುರುಸ್ವಾಮಿ, ಸೋಮಣ್ಣ, ಬ್ಯಾಂಕ್‌ನ ನಿರ್ದೇಶಕರು ಉಪಸ್ಥಿತರಿದ್ದರು.



ಮೈಸೂರಿನಲ್ಲಿ ನಡೆದ ಕೃತಿ ಬಿಡುಗಡೆ ಹಾಗೂ ಸನ್ಮಾನ ಸಮಾರಂಭದಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರನ್ನು ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ವತಿಯಿಂದ ಸನ್ಮಾನಿಸಲಾಯಿತು. ಪರಿಷತ್ ಸದಸ್ಯ ತಿಮ್ಮಯ್ಯ, ಕೆಎಸ್ ಭಗವಾನ್, ವೇದಿಕೆ ಅಧ್ಯಕ್ಷ ಕೆಎಸ್.ಶಿವರಾಮ್, ಲೋಕೇಶ್‌ಕುಮಾರ್ ಮಾದಾಪುರ, ದಲಿತ ಸಾಹಿತ್ಯ ಅಕಾಡೆಮಿ ರಾಜ್ಯಾಧ್ಯಕ್ಷ ವೆಂಕಟೇಶ್, ಜಿಲ್ಲಾ ಉಪ್ಪಾರ ಸಮಾಜದ ಅಧ್ಯಕ್ಷ ಯೋಗೇಶ್, ನಗರ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ನಾಗೇಶ್, ಮಹೇಶ್ ಸೋಸಲೆ ಉಪಸ್ಥಿತರಿದ್ದರು.

ಬಲ್ಲಾಳ್ ವೃತ್ತ ಸೇರಿದಂತೆ ಮೈಸೂರಿನ ಮೂರು ಕಡೆ ಬೀದಿಬದಿ ವ್ಯಾಪಾರಿಗಳಿಗೆ ಮಾರಾಟ ವಲಯ ನಿರ್ಮಾಣ

ಬೀದಿಬದಿ ವ್ಯಾಪಾರಿಗಳಿಗೆ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮದಲ್ಲಿ ನಗರಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ ಮಾಹಿತಿ





ಮೈಸೂರಿನಲ್ಲಿ ಬೀದಿಬದಿ ವ್ಯಾಪಾರಿಗಳಿಗೆ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಕ್ಕೆ ಮೇಯರ್ ಸುನಂದಾ ಪಾಲನೇತ್ರ ಚಾಲನೆ ನೀಡಿದರು. ಚಿತ್ರದಲ್ಲಿ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಹಿರಿಯ ಸಿವಿಲ್ ನ್ಯಾಯಾಧೀಶ ದೇವರಾಜ ಭೂತೆ, ಪಾಲಿಕೆ ಹೆಚ್ಚುವರಿ ಆಯುಕ್ತೆ ಎಂ.ಜೆ.ರೂಪಾ ಇನ್ನಿತರರು ಕಾಣಬಹುದು. ಬಲಚಿತ್ರದಲ್ಲಿ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಬೀದಿಬದಿ ವ್ಯಾಪಾರಿಗಳು.

ಮೈಸೂರು,ಮಾ.28(ಆರ್‌ಕೆಬಿ)–ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೀದಿಬದಿ ವ್ಯಾಪಾರಿಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಮೂರು ಕಡೆಗಳಲ್ಲಿ ಮಾರಾಟ ವಲಯ ತೆರೆಯಲಾಗುತ್ತಿದೆ. ಅದಕ್ಕಾಗಿ ಸರ್ಕಾರದಿಂದ 2.97 ಕೋಟಿ ರೂ. ಅನುದಾನ ಮಂಜೂರಾಗಿದ್ದು, ಅರ್ಧದಷ್ಟು ಹಣ ಬಿಡುಗಡೆ ಆಗಿದೆ ಎಂದು ಮೈಸೂರು ಮಹಾನಗರಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು.

ಮೈಸೂರಿನ ವಿದ್ಯಾಶಂಕರ ಕಲ್ಯಾಣ ಮಂದಿರದಲ್ಲಿ ಡೇ ನಲ್ಮ್ ಅಭಿಯಾನದ ನಗರದ ಬೀದಿಬದಿ ವ್ಯಾಪಾರಿಗಳ ಬೆಂಬಲ ಉಪಘಟಕದಡಿ ಬೀದಿಬದಿ ವ್ಯಾಪಾರಿಗಳಿಗೆ ಅಧಿನಿಯಮ, ನಿಯಮ ಮತ್ತು ಯೋಜನೆಗಳ ಕುರಿತು ಎರಡು ದಿನಗಳ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಗರಪಾಲಿಕೆಯ 9 ವಲಯಗಳಲ್ಲೂ ಬೀದಿಬದಿ ವ್ಯಾಪಾರಿಗಳಿಗೆ ಮಾರಾಟ ವಲಯ ಮಾಡಲಿದ್ದು, ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಕಳಿಸಲಾಗಿತ್ತು. ಸರ್ಕಾರ ಈ ವರ್ಷಕ್ಕೆ ಮೂರು ಮಾರಾಟ ವಲಯಕ್ಕೆ ಮಂಜೂರಾತಿ ನೀಡಿದೆ. ಹಣ ಬಿಡುಗಡೆ ಮಾಡಿದೆ. ಹಾಗಾಗಿ ಮೈಸೂರಿನ ಬಲ್ಲಾಳ್ ವೃತ್ತ ಸೇರಿದಂತೆ ಮೂರು ಕಡೆಗಳಲ್ಲಿ ಮಾರಾಟ ವಲಯ ನಿರ್ಮಿಸಲು ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುತ್ತಿದ್ದಂತೆಯೇ ಮಾರಾಟ ವಲಯ ನಿರ್ಮಾಣ ಕೈಗೊಳ್ಳಲಾಗುವುದು ಎಂದು ಹೇಳಿದರು.

ಮೇಯರ್ ಸುನಂದಾ ಪಾಲನೇತ್ರ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಬೀದಿಬದಿ ವ್ಯಾಪಾರಿಗಳಿಗೆ ಅನುಕೂಲ ಕಲ್ಪಿಸಿಕೊಡುವ ಉದ್ದೇಶದಿಂದ ಈ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದೆ. ಬೀದಿಬದಿ ವ್ಯಾಪಾರಿಗಳು ಪಾಲಿಕೆಯ ನೀತಿ, ನಿಯಮಗಳನ್ನು ಅನುಸರಿಸಿ, ಪಾಲಿಕೆಯೊಂದಿಗೆ ಸಹಕರಿಸಿ ತಮ್ಮ ಅಭಿವೃದ್ಧಿ ಕಂಡುಕೊಳ್ಳುವಂತೆ ತಿಳಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಹಿರಿಯ ಸಿವಿಲ್ ನ್ಯಾಯಾಧೀಶರೂ ಆಗಿರುವ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಮಾತನಾಡಿ, ಬೀದಿಬದಿ ವ್ಯಾಪಾರಿಗಳ ಜೀವನೋಪಾಯಕ್ಕೆ ಕಾನೂನು ರಚನೆ ಆಗಬೇಕು ಎಂಬ ಸುಪ್ರೀಂಕೋರ್ಟ್ ಸೂಚನೆ ಮೇರೆಗೆ ಈ ಕಾನೂನು ಬಂದಿದೆ. ಅದರ ಸಮರ್ಪಕ ಜಾರಿಗೆ ನಗರಪಾಲಿಕೆ ಮುಂದಾಗಿದೆ ಎಂದು ಹೇಳಿದರು.

ಬೀದಿ ವ್ಯಾಪಾರಿಗಳನ್ನು ಸರ್ವೆ ಮೂಲಕ ತಳ್ಳುಗಾಡಿಗಳು, ಸಣ್ಣ ಪುಟ್ಟ ಹೋಟೆಲ್‌ಗಳು ಇನ್ನಿತರೆ ಬೀದಿ ವ್ಯಾಪಾರಿಗಳನ್ನು ಗುರುತಿಸಿ, ಷರತ್ತುಗಳಿಗೆ ಒಳಪಟ್ಟು ವ್ಯಾಪಾರ ಮಾಡಲು ಅವಕಾಶ ಮಾಡಿಕೊಡಬೇಕಾಗುತ್ತದೆ. ಅದಕ್ಕೆ ಪಾಲಿಕೆಯಿಂದ ಅಧಿಕೃತ ಅನುಮೋದನೆ ಪಡೆದು, ವ್ಯಾಪಾರ ನಡೆಸಬೇಕಾಗುತ್ತದೆ. ಅಲ್ಲದೆ ಪಾಲಿಕೆಯಿಂದ ವ್ಯಾಪಾರಿಗಳಿಗೆ ಸೌಲಭ್ಯಗಳು ಇವೆ. ಅವೆಲ್ಲವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ, ಬೀದಿ ವ್ಯಾಪಾರಿಗಳ ಯೋಗಕ್ಷೇಮವನ್ನು ಪಾಲಿಕೆ ನೋಡಿಕೊಳ್ಳುತ್ತದೆ ಎಂದರು.

ಕಾರ್ಯಕ್ರಮದಲ್ಲಿ ನಗರಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಹೆಚ್ಚುವರಿ ಆಯುಕ್ತರಾದ ಎಂ.ಜೆ.ರೂಪ, ವ್ಯಾಪಾರ ಸಮಿತಿ ಸದಸ್ಯರು ಭಾಗವಹಿಸಿದ್ದರು.



ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಕ್ರಾಫರ್ಡ್ ಭವನದಲ್ಲಿ ಸೋಮವಾರ ತಮ್ಮ ಕೊಠಡಿಯಲ್ಲಿ 'ಪ್ರವಾಸೋದ್ಯಮ ಭೂಗೋಳಶಾಸ್ತ್ರ' ಕೃತಿ ಬಿಡುಗಡೆ ಮಾಡಿದರು. ಈ ವೇಳೆ ಕುಲಸಚಿವ ಪ್ರೊ.ಆರ್.ಶಿವಪ್ಪ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಭೂಗೋಳಶಾಸ್ತ್ರ ವಿಭಾಗದ ಅಧ್ಯಕ್ಷೆ ಪ್ರೊ.ಪಿ.ಜಯಶ್ರೀ, ವಿವಿ ಸಂಜೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಚ್.ಸಿ.ದೇವರಾಜೇಗೌಡ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಆರ್.ನಿಂಗರಾಜು, ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ನಿಂಗರಾಜು, ಕನ್ನಡ ವಿಭಾಗದ ಸಹ ಪ್ರಾಧ್ಯಾಪಕ ಡಾ.ಸಿ.ಡಿ.ಪರಶುರಾಮ, ಕೆ.ವಿ.ಮಾನಸ ಶೆಲ್ವರಾಜು, ಕೃತಿ ಲೇಖಕ, ವಿವಿ ಸಂಜೆ ಕಾಲೇಜಿನ ಉಪನ್ಯಾಸಕ ಡಾ.ಆರ್.ಶೆಲ್ವರಾಜು, ಜೆಎಸ್‌ಎಸ್ ಕಾಲೇಜು ನಿವೃತ್ತ ಪ್ರಾಧ್ಯಾಪಕ ಪಿ.ಮಲ್ಲಪ್ಪ ಉಪಸ್ಥಿತರಿದ್ದರು.

ಮೃಗಾಲಯದ ಬೇಸಿಗೆ ಶಿಬಿರಕ್ಕೆ ಅರ್ಜಿ ವಿತರಣೆ

ಮೈಸೂರು,ಮಾ.28(ಎಂಟಿವೈ)– ಮೈಸೂರು ಮೃಗಾಲಯದ ವತಿಯಿಂದ ಪ್ರತಿವರ್ಷ ನಡೆಯುವ ಪ್ರತಿಷ್ಠಿತ ಬೇಸಿಗೆ ಶಿಬಿರವನ್ನು 2 ಬ್ಯಾಚ್‌ಗಳಲ್ಲಿ ಏಪ್ರಿಲ್ 25ರಿಂದ ನಡೆಸಲು ನಿರ್ಧರಿಸಲಾಗಿದ್ದು, 12ರಿಂದ 18 ವರ್ಷದ ಆಸಕ್ತ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಕಳೆದ ಎರಡು ವರ್ಷದಿಂದ ಕೋವಿಡ್ ಹಿನ್ನೆಲೆಯಲ್ಲಿ ಆನ್‌ಲೈನ್ ಸ್ವರೂಪ ಪಡೆದಿದ್ದ ಬೇಸಿಗೆ ಶಿಬಿರ ಈ ಬಾರಿ ಆಫ್‌ಲೈನ್‌ನಲ್ಲಿ ನಡೆಸಲಾಗುತ್ತಿದ್ದು, ಒಂದು ಬ್ಯಾಚ್‌ನಲ್ಲಿ 60 ಮಂದಿ ವಿದ್ಯಾರ್ಥಿಗಳಿಗೆ ಅವಕಾಶ ನೀಡಲು ಉದ್ದೇಶಿಸಲಾಗಿದೆ. ಏ.15ರಿಂದ 24ರವರೆಗೆ ಮೊದಲ ಬ್ಯಾಚ್, ಮೇ 1ರಿಂದ 10ರವರೆಗೆ ಎರಡನೇ ಬ್ಯಾಚ್‌ನಲ್ಲಿ ಬೇಸಿಗೆ ಶಿಬಿರ ನಡೆಸಲಾಗುತ್ತದೆ.

ಈ ಶಿಬಿರದಲ್ಲಿ ಪಾಲ್ಗೊಳ್ಳಲು ಇಚ್ಛಿಸುವ 12ರಿಂದ 18 ವರ್ಷದೊಳಗಿನ ವಿದ್ಯಾರ್ಥಿಗಳು ಏಪ್ರಿಲ್ 10ರೊಳಗೆ ಮೃಗಾಲಯದ ಕಚೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ, ಒಂದು ಸ್ಟಾಂಪ್

ಎರಡು ಬ್ಯಾಚ್‌ನಲ್ಲಿ ಶಿಬಿರ ನಡೆಸಲು ನಿರ್ಧಾರ



ಸೈಜ್ ಕಲರ್ ಭಾವಚಿತ್ರ, ಆಧಾರ್ ಕಾರ್ಡ್ ಅಥವಾ ಜನನ ಪ್ರಮಾಣ ಪತ್ರದ ಪ್ರತಿಯೊಂದಿಗೆ ಸಲ್ಲಿಸಬಹುದಾಗಿದೆ ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಎಂ. ಕುಲಕರ್ಣಿ ತಿಳಿಸಿದ್ದಾರೆ.

ಶಿಬಿರವು ಪ್ರತಿದಿನ ಬೆಳಗ್ಗೆ 10ರಿಂದ ಸಂಜೆ 4ರವರೆಗೆ ಮೃಗಾಲಯದಲ್ಲಿರುವ ಪ್ರಾಣಿಗಳ ನಿರ್ವಹಣೆ, ಪಾಲನೆ, ಅವುಗಳ ಜೀವನ ಕ್ರಮ ಅಧ್ಯಯನ, ಅವುಗಳ ಆಹಾರ ಪದ್ಧತಿ, ಅರಣ್ಯ ಹಾಗೂ ವನ್ಯಜೀವಿಗಳ ಸಂರಕ್ಷಣೆ ಕುರಿತಂತೆ ಜಾಗೃತಿ ಮೂಡಿಸಲಾಗುತ್ತದೆ. ಮೊದಲು ಅರ್ಜಿ ಸಲ್ಲಿಸಿದವರಿಗೆ ಆದ್ಯತೆ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ 9686668899 ಅಥವಾ edumysore99@gmail.com ಗೆ ಮೇಲ್ ಕಳಿಸಬಹುದಾಗಿದೆ.

ಇಂದು ಮೃಗಾಲಯ, ಕಾರಂಜಿಕೆರೆ ಮುಕ್ತ

ಶಾಲಾ–ಕಾಲೇಜುಗಳಿಗೆ ಬೇಸಿಗೆ ರಜೆ ಇರುವ ಹಿನ್ನೆಲೆಯಲ್ಲಿ ಹೊರ ರಾಜ್ಯಗಳಿಂದ ಮೈಸೂರಿಗೆ ಪ್ರವಾಸಿಗರು ಬರುತ್ತಿರುವುದರಿಂದ ಮೈಸೂರು ಮೃಗಾಲಯ ಹಾಗೂ ಕಾರಂಜಿಕೆರೆಗೆ ಮಂಗಳವಾರ ಇದ್ದ ವಾರದ ರಜೆ ರದ್ದು ಮಾಡಿ, ಮಂಗಳವಾರ ಪ್ರವಾಸಿಗರ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ. ನಾಳೆ(ಮಾ.29)ರಂದು ಪ್ರವಾಸಿಗರು ಬೆಳಗ್ಗೆ 8.30ರಿಂದ ಸಂಜೆ 5 ಗಂಟೆವರೆಗೆ ಮೃಗಾಲಯ ಮತ್ತು ಕಾರಂಜಿಕೆರೆ ವೀಕ್ಷಣೆಗೆ ಅವಕಾಶ ನೀಡಲಾಗಿದೆ ಎಂದು ಮೃಗಾಲಯದ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಲ್ಲ ಕ್ಷೇತ್ರದಲ್ಲೂ ಹಿಂದುಳಿದಿರುವ ಪ್ರವರ್ಗ–1 ಜಾತಿಗಳ ಅಭಿವೃದ್ಧಿಗೆ ಆಗ್ರಹ

ಮೈಸೂರು,ಮಾ.28(ಆರ್‌ಕೆಬಿ)–ಪ್ರವರ್ಗ–1ಕ್ಕೆ ಸೇರಿದ ಜಾತಿಗಳ ಜನರು ಸಾಮಾಜಿಕ, ಶೈಕ್ಷಣಿಕ, ರಾಜಕೀಯವಾಗಿ ಅತಿ ಹಿಂದುಳಿದಿದ್ದಾರೆ. ಹೀಗಾಗಿ ಇವರ ಅಭಿವೃದ್ಧಿಗೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ರಾಜ್ಯ ಪ್ರವರ್ಗ–1ರ ಜಾತಿಗಳ ಒಕ್ಕೂಟ ಆಗ್ರಹಿಸಿದೆ.

ಸಂಘದ ಪ್ರಧಾನ ಕಾರ್ಯದರ್ಶಿ ಎ.ವಿ.ಲೋಕೇಶಪ್ಪ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ವರ್ಗದಲ್ಲಿ 46 ಅಲೆಮಾರಿ ಮತ್ತು ಅರೆ ಅಲೆಮಾರಿ ಜಾತಿಗಳು ಸೇರಿದಂತೆ 95 ಮುಖ್ಯ ಜಾತಿಗಳಿದ್ದು, ಒಟ್ಟು 376 ಉಪ ಜಾತಿಗಳಿವೆ. ಆದರೆ ಇವರಿಗೆ ನೀಡುತ್ತಿದ್ದ ಸೌಲಭ್ಯಗಳಿಗೆ ಕಡಿತ ಬಿದ್ದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇವರ ಅಭಿವೃದ್ಧಿಗೆ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಹೀಗಾಗಿ ಇವರಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಸಮಾನಾಂತರವಾಗಿ ಶೈಕ್ಷಣಿಕ ಸೌಲಭ್ಯ ನೀಡಿ, ಈ ಹಿಂದಿನಂತೆಯೇ ಮುಂದುವರಿಸಬೇಕು. ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸಲು ಪ್ರತ್ಯೇಕವಾಗಿ ಮೀಸಲಾತಿ ಸೌಲಭ್ಯ ನೀಡಬೇಕು. ಈ ವರ್ಗದ ಇಬ್ಬರು ಶಾಸಕರಿಗೆ ಮುಂದಿನ ಸಚಿವ ಸಂಪುಟ ಪುನರ್‌ರಚನೆ ಸಂದರ್ಭದಲ್ಲಿ ಸಂಪುಟದಲ್ಲಿ ಆದ್ಯತೆ ನೀಡಬೇಕು ಇತ್ಯಾದಿ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿದರು.

ಒಕ್ಕೂಟದ ಪದಾಧಿಕಾರಿಗಳಾದ ಎನ್.ನರಸಿಂಹಮೂರ್ತಿ, ಡಿ.ಟಿ.ಶ್ರೀನಿವಾಸ್, ಸೂರ್ಯಪ್ರಕಾಶ್ ಕೋಲಿ, ಮೈಸೂರು ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಯೋಗೀಶ್ ಉಪ್ಪಾರ, ನಾಗಶೆಟ್ಟಿ ಹಾಗೂ ಪ್ರೊ. ವಸಂತಮ್ಮ ಇನ್ನಿತರರು ಉಪಸ್ಥಿತರಿದ್ದರು.

ಕಸಾಯಿಖಾನೆಗೆ ಜಾನುವಾರುಗಳ ಸಾಗಾಟ: ಒಬ್ಬನ ಸೆರೆ

ವಾಹನ ವಶ, 2 ಹಸು, 2 ಕರುಗಳ ರಕ್ಷಣೆ

ಮೈಸೂರು,ಮಾ.28(ಆರ್‌ಕೆ)–ಅಕ್ರಮವಾಗಿ ಜಾನುವಾರುಗಳನ್ನು ಕಸಾಯಿಖಾನೆಗೆ ಸಾಗಿಸುತ್ತಿದ್ದ ವ್ಯಕ್ತಿಯನ್ನು ಬಂಧಿಸಿರುವ ಸಿಸಿಬಿ ಪೊಲೀಸರು, ಅಪೇ ಆಟೋವನ್ನು ವಶಕ್ಕೆ ಪಡೆದಿದ್ದಾರೆ. ಮಾ.25ರಂದು ಬೆಂಗಳೂರಿನಿಂದ ಮೈಸೂರಿನ ಕೆಸರೆಯಲ್ಲಿರುವ ಕಸಾಯಿಖಾನೆಗೆ ಅಪೇ ಆಟೋ(ಕೆಎ 09, ಡಿ0850)ದಲ್ಲಿ ಸಾಗಿಸುತ್ತಿದ್ದಾಗ ದಂಡಿ ಮಾರಮ್ಮನ ದೇವಸ್ಥಾನದ ಬಳಿ ಕಾರ್ಯಾಚರಣೆ ನಡೆಸಿದ ಪೊಲೀಸರು, ಆರೋಪಿಯನ್ನು ಬಂಧಿಸಿ, ವಾಹನವನ್ನು ವಶಕ್ಕೆ ಪಡೆದು 2 ಹಸು ಮತ್ತು 2 ಕರುಗಳನ್ನು ರಕ್ಷಿಸಿ ಪಿಂಜರಾಪೋಲ್ ಸೊಸೈಟಿ ವಶಕ್ಕೆ ಒಪ್ಪಿಸಿದ್ದಾರೆ. ಸಿಸಿಬಿ ಎಸಿಪಿ ಸಿ.ಕೆ.ಅಶ್ವತ್ ನಾರಾಯಣ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇನ್ಸ್‌ಪೆಕ್ಟರ್ ಎ.ಮಲ್ಲೇಶ್, ಸಿಸಿಬಿ ಸಿಬ್ಬಂದಿಗಳಾದ ರಾಜು, ಜೋಸೆಫ್ ಸೊಲೋನ್, ಸುಭಾನಲ್ಲಾ ಪಾಲ್ಗೊಂಡಿದ್ದರು.

ನಾಳೆ ವೈಚಾರಿಕ ಪ್ರಬಂಧ ಮಂಡನೆ

ಮೈಸೂರು,ಮಾ.28–ಮೈಸೂರಿನ ವಿವೇಕಾನಂದ ನಗರದ ಬಿಡುಗಡೆ ತಂಡದಿಂದ ತಿಳಿಹಾಸ್ಯದ ಎಳೆಗಳಿಂದ ಕೂಡಿದ 'ಜಾತಿ' ಕುರಿತ ವೈಚಾರಿಕ ಪ್ರಬಂಧ ಮಂಡನೆ ಕಾರ್ಯಕ್ರಮ ಮಾ.30ರ ಸಂಜೆ 4.30ರಿಂದ 6ರವರೆಗೆ ರಾಮಕೃಷ್ಣನಗರದ ಚಿಂತನಕಟ್ಟೆ ನೃಪತುಂಗ ಶಾಲಾ ಆವರಣದಲ್ಲಿ ನಡೆಯಲಿದೆ. ಲೇಖಕ ಹೊರೆಯಾಲ ದೊರೆಸ್ವಾಮಿ ಅವರು ಪ್ರಬಂಧ ಮಂಡಿಸಲಿದ್ದು ಸ್ವರಾಜ್ ಇಂಡಿಯಾ ಮೈಸೂರು ಘಟಕದ ಅಧ್ಯಕ್ಷ ಉಗ್ರನರಸಿಂಹೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ನೀಟ್ ಪರೀಕ್ಷೆಗೆ ಉಚಿತ ತರಬೇತಿ

ಮೈಸೂರು,ಮಾ.28–ಕೋವಿಡ್‌ನಿಂದ ತಂದೆ ಅಥವಾ ತಾಯಿಯನ್ನು ಕಳೆದುಕೊಂಡಿರುವ ವಿದ್ಯಾರ್ಥಿಗಳಿಗೆ ಪ್ರಾಣೇಶ್ ಎಜುಕೇಷನ್ ಟ್ರಸ್ಟ್ ವತಿಯಿಂದ ನೀಟ್ ಪರೀಕ್ಷೆಗೆ ಸಂಬಂಧಿಸಿದಂತೆ ಉಚಿತ ತರಬೇತಿಯನ್ನು ನೀಡಲಾಗುವುದು. ಅರ್ಹರು ಏಪ್ರಿಲ್ 10ರೊಳಗೆ ಹೆಸರನ್ನು ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಮೊ: 9611012411 ಸಂಪರ್ಕಿಸಬಹುದು ಎಂದು ಟ್ರಸ್ಟ್‌ನ ಪ್ರಕಟಣೆ ತಿಳಿಸಿದೆ.

ಉಚಿತ ಕಂಪ್ಯೂಟರ್ ತರಬೇತಿ


ಮೈಸೂರು,ಮಾ.28(ಆರ್‌ಕೆ)–ಮೈಸೂರಿನ ಮಂಡಿಮೊಹಲ್ಲಾದ ರಾಘವೇಂದ್ರ ಕಂಪ್ಯೂಟರ್ ಟ್ರೈನಿಂಗ್ ಸೆಂಟರ್‌ನಲ್ಲಿ ಕಂಪ್ಯೂಟರ್ ಸಾಕ್ಷರತಾ ಯೋಜನೆಯಡಿಯಲ್ಲಿ 'ಎಂಎಸ್ ಆಫೀಸ್, ಟ್ಯಾಲಿ ಜಿಎಸ್‌ಟಿ, ಫೋಟೋಶಾಪ್, ಕೋರಲ್ ಡ್ರಾ, ಹಾರ್ಡ್‌ವೇರ್ ಮತ್ತು ನೆಟ್‌ವರ್ಕಿಂಗ್, ಡಿಜಿಟಲ್ ಮಾರ್ಕೆಟಿಂಗ್ ಟೈಪಿಂಗ್ ಕ್ಲಾಸ್' ಹಾಗೂ ಇನ್ನಿತರ ಉಚಿತ ತರಬೇತಿ ನೀಡಲಾಗುತ್ತಿದ್ದು, ಮಾಹಿತಿಗೆ ಶ್ರೀ ಗುರುರಾಘವೇಂದ್ರ ಕಂಪ್ಯೂಟರ್ ಮೊ.7760240575ಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ನಂದಿನಿಗೆ ಪಿಎಚ್.ಡಿ ಪದವಿ

ಮೈಸೂರು,ಮಾ.28–ಡಾ.ರುಬಿ ಸಲೆಸ್ಟಿನಾ ಅವರ ಮಾರ್ಗದರ್ಶನದಲ್ಲಿ ಪಿ.ನಂದಿನಿ ಗಣಿತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.03.2022 ಮಂಗಳವಾರ, ಮಳೆ ನಕ್ಷತ್ರ: ಉಭಾ 18.03.2022 ರಿಂದ 30.03.2022
ಶ್ರೀ ಪ್ಲವನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ
ತಿಥಿ: ದ್ವಾದಶಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಮೈಸೂರು ಕನ್ನಡ ವೇದಿಕೆ :** ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹಿಳಾ ಸಾಧಕರಿಗೆ ರಾಜಮಾತೆ ಕೆಂಪನಂಜಮ್ಮಣ್ಣಿ ಪ್ರಶಸ್ತಿ ಪ್ರದಾನ, ಉದ್ಘಾಟನೆ : ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀಮತಿ ಮಂಜುಳ, ಸನ್ಮಾನಿಸುವವರು : ಪಾಲಿಕೆ ಉಪ ಆಯುಕ್ತೆ ಎಂ.ಕೆ. ಸವಿತಾ, ಮುಖ್ಯ ಅತಿಥಿಗಳು : ಸಾಹಿತಿ ಬನ್ನೂರು ಕೆ. ರಾಜು, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ಅಧ್ಯಕ್ಷತೆ : ಅರಣ್ಯ ಸಂರಕ್ಷಣಾಧಿಕಾರಿ ಡಾ. ಮಾಲತಿ ಪ್ರಿಯಾ, ಸನ್ಮಾನಿತರು : ಭವಾನಿ ಹೆಚ್.ಆರ್., ಕಮಲಾ ನಟರಾಜು, ಜ್ಯೋತಿರೆಡ್ಡಿ, ಜ್ಯೋತಿ ಬಿ.ಡಿ., ಉಮಾಜಾದವ್, ಪಿ. ಶಿಲ್ಪ, ಶಿವಲೀಲಾ ವಿ. ಹಿರೇಮಠ್, ರೂಜ್ಞಾನ್ಸಿ ಮುತ್ತಪ್ಪ, ಶಶಿಕಲಾ, ಪಲ್ಲಮ್ಮ, ಸ್ಥಳ: ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12ಕ್ಕೆ.

■ **ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ:** ತಾಲೂಕಿನ ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮ, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಅಧ್ಯಕ್ಷತೆ: ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ವಿ.ರಾಜೀವ್, ಮುಖ್ಯ ಅತಿಥಿಗಳು: ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಅಧ್ಯಕ್ಷ ಪಿ.ಎಂ.ಪ್ರಸನ್ನ, ನಿರ್ದೇಶಕರಾದ ಕೆ.ಎಸ್.ಕುಮಾರ್, ಬಿ.ಎನ್.ಸದಾನಂದ, ಕೆ. ಈರೇಗೌಡ, ಕೆ. ಉಮಾಶಂಕರ್, ಲೀಲಾ ಬಿ.ಕೆ.ನಾಗರಾಜು, ಎಸ್.ಸಿ. ಅಶೋಕ್, ಸ್ಥಳ: ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಮತ್ತು 5.00 ಅಕ್ಷರ ಮೈಸೂರು ಅನ್ನದ ಸೂರು–ಮೈಸೂರಿನ ಪರಂಪರೆಯಲ್ಲಿ ಅನ್ನ ಅಕ್ಷರಗಳ ನೆನಪು –ಪ್ರಸ್ತುತಿ– ಡಾ.ವಿ.ರಂಗನಾಥ್, 6.40 ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಎಸ್.ಸಂಗೀತಾ, ಎಂ.ಆರ್.ಸುಧಾ, ಎಂ.ಎ.ಶೋಭಾ, ವ್ಯಾಖ್ಯಾನ– ಡಾ.ಜಿ.ಆರ್.ತಿಪ್ಪೇಸ್ವಾಮಿ, 7.15 ಭಾವಗೀತೆಗಳು–ವೈ.ಕೆ.ಮುದ್ದುಕೃಷ್ಣ, 7.45 ನಿತ್ಯ ವಿಜ್ಞಾನ–ಪ್ರಾಯೋಜಿತ ಕಾರ್ಯಕ್ರಮ, 10.00 ಶ್ರೀರಾಮ್ ಭಟ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪ ದೂರ ಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ–ಎಂ.ವಾಣಿ ಸತೀಶ್, 3.00 ಬಿ.ದೇವೇಂದ್ರಪ್ಪ–ಜಲತರಂಗ, 4.00 ಕಥಾಕಾಲಕ್ಷೇಪ, ಸತ್ಸಂಗದ ಮಹಿಮೆ, ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ–ಕೃಷಿಲೋಕ, 9.30 ಎಂ.ಎ.ಜ್ಯೋತಿ –ಹಾಡುಗಾರಿಕೆ, 10.00 ಗಮಕ ವ್ಯಾಖ್ಯಾನ– ವಾಚನ–ಕೆ.ಸುಬ್ರಹ್ಮಣ್ಯ, ವ್ಯಾಖ್ಯಾನ–ಕೆ.ರಾಮಚಂದ್ರ

■ **ವಿಶ್ವ ವಿಕಾಸ ಟ್ರಸ್ಟ್:** ವೈದಿಕ ವಿದ್ಯಾಭೂಷಣ ಮ.ಗಂಗಾಧರಮೂರ್ತಿ ಅವರ ಸಮಗ್ರ ಸಾಹಿತ್ಯ ಸಂಪುಟ ಭಾಗ–1 ಮತ್ತು 2 ಗ್ರಂಥಗಳ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ವಿಭೂಷಿತ ಶಿವಸುಜ್ಞಾನತೀರ್ಥ ಸ್ವಾಮೀಜಿ, ಅಧ್ಯಕ್ಷತೆ: ನಿವೃತ್ತ ಅಧಿಕಾರಿ ಕೆ.ಎಸ್. ಪ್ರಭಾಕರ, ಅತಿಥಿಗಳು: ಬಿ.ಎಲ್.ವೇದಮೂರ್ತಿ, ವಿಶ್ವ ವಿಕಾಸ ಟ್ರಸ್ಟ್ ಅಧ್ಯಕ್ಷ ಮಂಟೇಲಿಂಗಾಚಾರ್ಯ, ನಿವೃತ್ತ ಉಪನ್ಯಾಸ ಡಾ.ಸಿ.ನಾಗಣ್ಣ, ನಿವೃತ್ತ ಇಂಜಿನಿಯರ್ ಎನ್.ಸಿ. ಛಾಯಾಪತಿ, ಗ್ರಂಥ ಪರಿಚಯ: ಡಾ.ಶೆಲ್ವಪಿಳ್ಳೈ ಐಯ್ಯಂಗಾರ್, ಸ್ಥಳ: ಗಾನಭಾರತೀ, ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 4.30ಕ್ಕೆ.

■ **ರಂಗವಲ್ಲಿ:** 'ಭೂಮಿಕಾ' ಶ್ರೀ ಜಯತೀರ್ಥ ಜೋಶಿ ನೆನಪಿನ ವಾರ್ಷಿಕ ತರಬೇತಿ ಶಿಬಿರದ ಸಮಾರೋಪ ಸಮಾರಂಭ, ಉಪಸ್ಥಿತರು : ಶ್ರೀಮತಿ ಕರುಣಾ ಜೋಶಿ, ಎನ್‌ಎಸ್‌ಡಿ ನಿಕಟಪೂರ್ವ ನಿರ್ದೇಶಕ ಬಸವಲಿಂಗಯ್ಯ, ರಂಗಾಯಣದ ಹೆಚ್.ಕೆ. ದ್ವಾರಕಾನಾಥ್, ವಿಜಯ ವಿಠ್ಠಲ ಪಿಯು ಕಾಲೇಜು ಪ್ರಾಂಶುಪಾಲ ಹೆಚ್. ಸತ್ಯಪ್ರಸಾದ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಹನೂರು ಚನ್ನಪ್ಪ, ಭೂಮಿಕಾದ ಜೀವನ್‌ಕುಮಾರ್ ಹೆಗ್ಗೋಡು, ಶಿಬಿರದ ಸಂಚಾಲಕ ರವಿಪ್ರಸಾದ್ ಹೆಚ್.ಆರ್., ಸ್ಥಳ: ಕಿರು ರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 6ಕ್ಕೆ.

ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿಂದು

■ **ಶ್ರೀ ಹಿಮವದ್ ಗೋಪಾಲಸ್ವಾಮಿ ದೇವಸ್ಥಾನ :** ಬೆಳಗ್ಗೆ ಉತ್ಸವ ಕೈಂಕರ್ಯ ಮತ್ತು ಬೆಳ್ಳಿ ಗರುಡೋತ್ಸವ, ಸ್ಥಳ: ದೇವಸ್ಥಾನ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 29 ಮಂಗಳವಾರ 2022

ಸಂಪುಟ: 43 | ಸಂಚಿಕೆ: 339 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಕಟ್ಟಡ, ರಸ್ತೆ ನಿರ್ಮಾಣಕ್ಕೆ ರಾಜ್ಯದಲ್ಲಿ ಏಕರೂಪ ದರಪಟ್ಟಿ

- ಲೋಕೋಪಯೋಗಿ ಸಚಿವ ಸಿಸಿ ಪಾಟೀಲ್ ಪ್ರಕಟ
- ಅವಶ್ಯಕತೆ ಇದ್ದೆಡೆ ಮಾತ್ರ ಅತಿಥಿ ಗೃಹದ ನಿರ್ಮಾಣ
- ಕಾಮಗಾರಿಗೆ ಕಡಿಮೆ ಮೊತ್ತ ನಮೂದಿಸುವವರ ಮೇಲೆ ನಿಗಾ

ಬೆಂಗಳೂರು, ಮಾ. 28(ಕೆಎಂಶಿ)– ಕಟ್ಟಡ ಮತ್ತು ರಸ್ತೆ ನಿರ್ಮಾಣಕ್ಕೆ ರಾಜ್ಯಾದ್ಯಂತ ಏಕರೂಪ ದರಪಟ್ಟಿ ಜಾರಿ ಮಾಡಲಾಗಿದೆ ಎಂದು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ್ ವಿಧಾನಸಭೆಗೆ ಇಂದು ತಿಳಿಸಿದರು.



2022–23ನೇ ಸಾಲಿನ ಲೋಕೋಪಯೋಗಿ ಇಲಾಖೆ ಅನುದಾನ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರಿಸಿದ ಅವರು, ವಿವಿಧ ಇಂಜಿನಿಯರ್ ವಿಭಾಗಗಳಲ್ಲಿ ಒಂದೊಂದು ರೀತಿಯ ದರಪಟ್ಟಿ ಇತ್ತು, ರಾಜ್ಯದಲ್ಲಿ 32 ದರಪಟ್ಟಿಗಳಿದ್ದವು, ಎಲ್ಲ ಎಂಜಿನಿಯರಿಂಗ್ ವಿಭಾಗದ ವ್ಯಾಪ್ತಿಯಲ್ಲಿ ಜಾರಿಯಲ್ಲಿದ್ದ ದರಪಟ್ಟಿಗೆ ಬದಲಾಗಿ ಏಕರೂಪ ದರಪಟ್ಟಿ ಜಾರಿಗೆ ತರಲಾಗಿದೆ, ಇದರಿಂದ ಹಣವೂ ಉಳಿತಾಯವಾಗಿದೆ ಎಂದರು.

ಟೋಲ್‌ಗಳಲ್ಲಿ ಸಮಸ್ಯೆ ಇರುವುದು ನಿಜ, ಸುಧಾರಣೆ ತರಲು ಸಾಕಷ್ಟು ಕ್ರಮ ಕೈಗೊಳ್ಳಲಾಗಿದೆ. ಟೋಲ್ ಏಜೆನ್ಸಿಗಳ ಜೊತೆ ಸಭೆ ನಡೆಸಿದರೂ ಪೂರ್ಣ ಪ್ರಯೋಜನವಾಗಿಲ್ಲ. ಕೇಂದ್ರ ಸರ್ಕಾರದ ಟೋಲ್ ಆಗಿದ್ದರೆ ಕೇಂದ್ರಕ್ಕೆ ಪತ್ರ ಬರೆದು ಮನವಿ ಮಾಡಲಾಗುವುದು, ರಾಜ್ಯ ಸರ್ಕಾರದ ಟೋಲ್ ಇದ್ದರೆ ರಾಜ್ಯ ಸರ್ಕಾರವೇ ಕ್ರಮ ಕೈಗೊಳ್ಳಲಿದೆ ಎಂದರು. ರೈಲ್ವೆ ಕೆಳಸೇತುವೆ–ಮೇಲ್ಸೇತುವೆ ಮಾಡಿಕೊಡುವ ಭರವಸೆ ನೀಡಿದ ಸಚಿವರು, ವಿಳಂಬವಾಗಿರುವ ಕಾಮಗಾರಿಗಳ ವೇಗ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು. 2018–19ರಲ್ಲಿ ಆಗಿರುವ ಹೊರೆ ತಗ್ಗಿಸುವ ಉದ್ದೇಶದಿಂದ ಸಾಕಷ್ಟು ಅನುದಾನ ಕೊಡಲು ಸಾಧ್ಯವಾಗಿಲ್ಲ. ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಿಸಿದರೆ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಹೆಚ್ಚುವರಿ ಅನುದಾನ ಒದಗಿಸಲಾಗುವುದು, ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ 600 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗುವುದು. ಮಲೆನಾಡು ಭಾಗದಲ್ಲಿ ಸಣ್ಣ–ಸಣ್ಣ ಹಳ್ಳ, ತೊರೆಗಳಿಗೆ ಕಾಲುಸಂಕ ಅಥವಾ ಗ್ರಾಮಬಂಧು ಸೇತುವೆ ನಿರ್ಮಾಣಕ್ಕೆ 200 ಕೋಟಿ ರೂ. ಒದಗಿಸಲಾಗಿದೆ,





ರಾಜ್ಯದ ಪ್ರಮುಖ ನಗರಗಳಿಗೆ ವರ್ತುಲ ರಸ್ತೆ ನಿರ್ಮಾಣ ಮಾಡಲಾಗುವುದು, ಉತ್ತಮ ಗುಣಮಟ್ಟದ ರಸ್ತೆ ಜಾಲ ನಿರ್ಮಾಣಕ್ಕೆ ಸರ್ಕಾರ ಬದ್ಧವಾಗಿದೆ ಎಂದರು.

ರಾಜ್ಯದಲ್ಲಿ 91,120 ಕಿ.ಮೀ ರಸ್ತೆ ಜಾಲವಿದ್ದು 7 ಸಾವಿರ ಕೋಟಿ ರೂ.ಗಳಿಗೂ ಹೆಚ್ಚಿನ ಮೊತ್ತದ ಕಾಮಗಾರಿಗಳು ವಿವಿಧ ಹಂತದಲ್ಲಿದೆ, ರಾಷ್ಟ್ರೀಯ ಹೆದ್ದಾರಿ ವಲಯಕ್ಕೆ 4 ಸಾವಿರ ಕೋಟಿ ರೂ.ಗಳಿಗೂ ಹೆಚ್ಚಿನ ಹಣವನ್ನು ಒದಗಿಸಲಾಗಿದೆ. ಟೆಂಡರ್ ಕರೆಯುವಾಗ ನಿಗದಿತ ದರಕ್ಕಿಂತ ಕಡಿಮೆ ಮೊತ್ತ ನಮೂದಿಸುವ ● 9ನೇ ಪುಟಕ್ಕೆ

ಸುಸೂತ್ರವಾಗಿ ನಡೆದ SSLC ಮೊದಲ ದಿನದ ಪರೀಕ್ಷೆ

- ಮೈಸೂರು ಜಿಲ್ಲೆಯಲ್ಲಿ 38,138ರ ಪೈಕಿ 634 ವಿದ್ಯಾರ್ಥಿಗಳು ಗೈರು
- ಗ್ರಾಮೀಣ ವಿದ್ಯಾರ್ಥಿಗಳಿಗೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಉಚಿತ ಸೇವೆ
- ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹೆಲ್ಪ್‌ಲೈನ್ 080–23310075/76

ಮೈಸೂರು, ಮಾ.28 (ಆರ್‌ಕೆ)– ರಾಜ್ಯಾದ್ಯಂತ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳು ಇಂದಿನಿಂದ ಆರಂಭಗೊಂಡಿವೆ.

ಮೈಸೂರು ನಗರದ 57 ಸೇರಿದಂತೆ ಜಿಲ್ಲೆಯಾದ್ಯಂತ ಒಟ್ಟು 149 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಮೊದಲ ದಿನವಾದ ಸೋಮವಾರ ನಡೆದ ಪ್ರಥಮ ಭಾಷೆ ಪರೀಕ್ಷೆಗೆ ನೋಂದಣಿಯಾಗಿದ್ದ 38,138ರ ಪೈಕಿ 634 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದು, ಉಳಿದವರು ಯಾವುದೇ ಗೊಂದಲವಿಲ್ಲದೇ ಸುಸೂತ್ರವಾಗಿ ಪರೀಕ್ಷೆ ಬರೆದರು.

ಮೈಸೂರಿನ ಕೆ.ಆರ್. ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್, ತಮ್ಮ ಕ್ಷೇತ್ರ ವ್ಯಾಪ್ತಿಯ ಸೇಂಟ್ ಮೇರಿಸ್ ಶಾಲೆ ಕೇಂದ್ರದಲ್ಲಿ ಗುಲಾಬಿ ಹೂ ನೀಡುವ ಮೂಲಕ ವಿದ್ಯಾರ್ಥಿಗಳನ್ನು ಆತ್ಮೀಯವಾಗಿ ಬರಮಾಡಿಕೊಂಡು ಪೆನ್, ಚಾಕೊಲೇಟ್ ನೀಡಿ ನಿರಾತಂಕವಾಗಿ ಪರೀಕ್ಷೆ ಬರೆಯುವಂತೆ ಸ್ಥೈರ್ಯ ತುಂಬಿದರು.

ಕೊರೊನಾ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾರ್ಥಿಗಳಿಗೆ ಥರ್ಮಲ್ ಸ್ಕ್ಯಾನಿಂಗ್ ಮಾಡಿ ಸ್ಯಾನಿಟೈಸರ್‌ನಿಂದ ಕೈ ಸ್ವಚ್ಛಗೊಳಿಸಿ, ಮಾಸ್ಕ್ ಧರಿಸುವಂತೆ ಸೂಚನೆ ನೀಡಲಾಯಿತಲ್ಲದೇ ಮಾಸ್ಕ್ ತರದವರಿಗೆ ಶಿಕ್ಷಣ ಇಲಾಖೆಯಿಂದಲೇ ಮಾಸ್ಕ್ ವಿತರಿಸಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ಸಲಹೆ ನೀಡಲಾಯಿತು. ಪ್ರತೀ ಕೇಂದ್ರದಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿ ಹಾಜರಿದ್ದು, ವಿದ್ಯಾರ್ಥಿಗಳ ಆರೋಗ್ಯದ ಮೇಲೆ ನಿಗಾ ವಹಿಸಲಾಗುತ್ತಿದೆ. ಹಾಗೂ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆಯಲ್ಲದೇ, ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ವ್ಯಾಪ್ತಿ ಪ್ರದೇಶದಲ್ಲಿ ಸೆಕ್ಷನ್ 144 ರೀತ್ಯ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು. ಅದೇ ರೀತಿ ಸುತ್ತಲಿನ ಜೆರಾಕ್ಸ್ ಅಂಗಡಿಗಳನ್ನು ಬಂದ್ ಮಾಡಲಾಗಿದ್ದು, ವಿದ್ಯಾರ್ಥಿಗಳು, ಪರೀಕ್ಷಾ ಕರ್ತವ್ಯ ನಿರತರನ್ನು ಹೊರತುಪಡಿಸಿ ಅನ್ಯ ವ್ಯಕ್ತಿಗಳು ಅತ್ತ ಸುಳಿಯದಂತೆ ● 5ನೇ ಪುಟಕ್ಕೆ




ಪರೀಕ್ಷಾ ಕೇಂದ್ರದ ಗೊಂದಲದ ಆಘಾತ

ಕುಸಿದು ಬಿದ್ದು ವಿದ್ಯಾರ್ಥಿನಿ ಸಾವು

- ತಿ.ನರಸೀಪುರ ವಿದ್ಯೋದಯ ಕಾಲೇಜಲ್ಲಿ ಘಟನೆ
- ಬೇರೆ ಕೇಂದ್ರದಲ್ಲಿ ಪರೀಕ್ಷೆ ಬರೆಯುತ್ತಿದ್ದಳು: ವಾಸ್ತವ ಸಂಗತಿ ಅರಿತು ಅಲ್ಲಿಂದ ಮತ್ತೊಂದು ಕೇಂದ್ರಕ್ಕೆ ಬರುವುದರೊಳಗೆ ಅನಾಹುತ

ತಿ.ನರಸೀಪುರ, ಮಾ.28(ಎಸ್‌ಕೆ)–ಪರೀಕ್ಷೆ ಬರೆಯಲು ಬಂದ ವಿದ್ಯಾರ್ಥಿನಿಯೊಬ್ಬಳು ಕುಸಿದು ಬಿದ್ದು ಸಾವನ್ನಪ್ಪಿರುವ ಘಟನೆ ಪಟ್ಟಣದ ವಿದ್ಯೋದಯ ಕಾಲೇಜು ಪರೀಕ್ಷಾ ಕೇಂದ್ರದಲ್ಲಿ ಸೋಮವಾರ ಬೆಳಗ್ಗೆ ಸಂಭವಿಸಿದೆ. ತಾಲೂಕಿನ ಅಕ್ಕೂರು ಗ್ರಾಮದ ಕೆಂಪರಾಜು ಎಂಬುವರ ಪುತ್ರಿ ಅನುಶ್ರೀ(16), ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ಬಂದು ಸಾವನ್ನಪ್ಪಿದ ವಿದ್ಯಾರ್ಥಿನಿ.

ವಿವರ: ತಾಲೂಕಿನ ಮಾದಾಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಅನುಶ್ರೀ ಸೋಮವಾರ ಪಟ್ಟಣದ ವಿದ್ಯೋದಯ ಪದವಿ ಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆಗೆ ಹಾಜರಾಗಬೇಕಿತ್ತು. ಆದರೆ ಆಕೆ ಗೊಂದಲ ಮಾಡಿಕೊಂಡು ಪಕ್ಕದಲ್ಲೇ ಇದ್ದ ಶಿವಾನಂದ ಶರ್ಮಾ ಆಂಗ್ಲ ಮಾಧ್ಯಮ ಶಾಲೆಯ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಮುಂದಾಗಿದ್ದಾಳೆ. ಸುಮಾರು 15 ನಿಮಿಷಗಳ ಕಾಲ ಪರೀಕ್ಷೆಯನ್ನು ಬರೆದೂ ಇದ್ದಾಳೆ. ಆದರೆ ಆ ಸ್ಥಳ ಬೇರೆಯದ್ದೇ ವಿದ್ಯಾರ್ಥಿಯದ್ದಾಗಿತ್ತು. ● 5ನೇ ಪುಟಕ್ಕೆ


ಅನುಶ್ರೀ

ಇಸ್ರೇಲ್ ಪ್ರಧಾನಿಗೆ ಕೋವಿಡ್: ಮೋದಿ ಕರ್ನಾಟಕ ಪ್ರವಾಸ ರದ್ದು

ಬೆಂಗಳೂರು, ಮಾ. 28– ಪ್ರಧಾನಿ ನರೇಂದ್ರ ಮೋದಿ ಅವರ ಏಪ್ರಿಲ್ 5ರ ಕರ್ನಾಟಕ ಪ್ರವಾಸ ದಿಢೀರ್ ರದ್ದುಗೊಂಡಿದೆ.



ನರೇಂದ್ರ ಮೋದಿ ಅವರು ಏಪ್ರಿಲ್ 5ರಂದು ಬೆಂಗಳೂರಿಗೆ ಆಗಮಿಸಬೇಕಿತ್ತು. ಆದರೆ ಇಸ್ರೇಲ್ ಪ್ರಧಾನಿ ನಫ್ತಾಲಿ ಬೆನೆಟ್‌ಗೆ ಕೋವಿಡ್ ಕಾಣಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಮೋದಿ ಅವರ ರಾಜ್ಯ ಪ್ರವಾಸ ರದ್ದು ಮಾಡಲಾಗಿದೆ. ಏಪ್ರಿಲ್ 5ರಂದು ಮೂರು ಕಾರ್ಯಕ್ರಮಗಳ ಉದ್ಘಾಟನೆಗಾಗಿ ಪ್ರಧಾನಿ ಮೋದಿ ಅವರು ಇಸ್ರೇಲ್ ಪ್ರಧಾನಿ ನಫ್ತಾಲಿ ಬೆನೆಟ್ ಜೊತೆ ಕರ್ನಾಟಕಕ್ಕೆ ಆಗಮಿಸಬೇಕಿತ್ತು. ಆದರೆ ನಫ್ತಾಲಿಗೆ ಕೊರೋನಾ ಕಾಣಿಸಿಕೊಂಡಿದ್ದರಿಂದ ಅವರನ್ನು ಕ್ವಾರಂಟೈನ್ ಮಾಡಲಾಗಿದೆ. ಹೀಗಾಗಿ ಅವರ ಭಾರತ ಪ್ರವಾಸ ರದ್ದುಗೊಂಡಿತ್ತು.

ಪ್ರಧಾನಿ ಮೋದಿ ಅವರು ರಾಜ್ಯದಲ್ಲಿ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಲೋಕಾರ್ಪಣೆ, ಮೇಲ್ದರ್ಜೆಗೇರಿಸಿದ 150 ಐಟಿಐ ಉದ್ಘಾಟನೆ ಕಾರ್ಯಕ್ರಮ, ಬೆಂಗಳೂರು ಸಬ್ ಅರ್ಬನ್ ರೈಲು ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಬೇಕಿತ್ತು.

ಜೂ.16ರಿಂದ 3 ದಿನ ಸಿಇಟಿ

ಬೆಂಗಳೂರು,ಮಾ.28(ಕೆಎಂಶಿ)–ವೃತ್ತಿ ಶಿಕ್ಷಣಕ್ಕೆ ಪ್ರವೇಶಾವಕಾಶ ಕಲ್ಪಿಸುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ)ಯನ್ನು ಜೂನ್ 16, 17 ಮತ್ತು 18ರಂದು ನಡೆಸಲು ಉದ್ದೇಶಿಸಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ತಿಳಿಸಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿದ ಅವರು, ಇತರೆ ರಾಜ್ಯಗಳಲ್ಲಿ ಸಿಇಟಿಯಂತಹ ಪರೀಕ್ಷೆಗೆ ಗೊತ್ತುಪಡಿಸಿಕೊಂಡಿರುವ ಸಂಭವನೀಯ ದಿನಾಂಕಗಳ ಬಗ್ಗೆ ಮಾಹಿತಿ ಪಡೆದ ನಂತರ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದರು.

ಜೂನ್ 16ರಂದು ಬೆಳಗ್ಗೆ ಜೀವಶಾಸ್ತ್ರ, ಮಧ್ಯಾಹ್ನ ಗಣಿತ, 17ರಂದು ಬೆಳಗ್ಗೆ ಭೌತಶಾಸ್ತ್ರ ಮತ್ತು ಮಧ್ಯಾಹ್ನ ರಸಾಯನಶಾಸ್ತ್ರ ಹಾಗೂ 18ರಂದು ಹೊರನಾಡು ಮತ್ತು ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ ಸಿಇಟಿ ನಡೆಸಲು ಉದ್ದೇಶಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ಏಪ್ರಿಲ್ 5ರಿಂದ 20ರವರೆಗೆ ಸಿಇಟಿಯಲ್ಲಿ ಹೆಸರು ನೋಂದಾಯಿಸಿ, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಆನ್‌ಲೈನ್ ಮೂಲಕವೇ ನಿಗದಿತ ಶುಲ್ಕ ಸಲ್ಲಿಸಲು ಏ.22ರವರೆಗೆ ಸಮಯಾವಕಾಶವಿದೆ. ಶುಲ್ಕ ಪಾವತಿ ನಂತರ, ಅರ್ಜಿಯಲ್ಲಿನ ಮಾಹಿತಿ ಪರಿಷ್ಕರಿಸುವುದಾದರೆ, ಅದಕ್ಕೆ ಮೇ 2ರಿಂದ 6ವರೆಗೆ ಕಾಲಾವಕಾಶ ಇರಲಿದೆ, ನಂತರ ವಿದ್ಯಾರ್ಥಿಗಳು ಮೇ 30ರಿಂದ ಪ್ರವೇಶಪತ್ರಗಳನ್ನು ಡೌನ್ಲೋಡ್ ಮಾಡಿಕೊಳ್ಳಬಹುದಾಗಿದೆ ಎಂದರು.













ದಸರಾಗೆ ಬೆಂಗಳೂರು–ಮೈಸೂರು ದಶಪಥ ರಸ್ತೆ ಸಂಚಾರಕ್ಕೆ ಮುಕ್ತ



ಕೇಂದ್ರ ಭೂ ಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಮತ್ತೆ ಟ್ವೀಟ್

ಬೆಂಗಳೂರು, ಮಾ. 28(ಕೆಎಂಶಿ)– ಪ್ರವಾಸೋದ್ಯಮ ಹಾಗೂ ಆರ್ಥಿಕ ಚಟುವಟಿಕೆಗಳಿಗೆ ಒತ್ತು ಕೊಡುವ ವಿಶ್ವ ದರ್ಜೆಯ ಬೆಂಗಳೂರು–ಮೈಸೂರು ದಶಪಥ ರಸ್ತೆ ದಸರಾ ವೇಳೆಗೆ ಲೋಕಾರ್ಪಣೆಯಾಗಲಿದೆ ಎಂದು ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಮೊದಲ ಹಂತದಲ್ಲಿ ಬೆಂಗಳೂರು–ನಿಡಘಟ್ಟ ರಸ್ತೆ ಪೂರ್ಣಗೊಳ್ಳಲಿದೆ, ಎರಡನೇ ಹಂತದಲ್ಲಿ ನಿಡಘಟ್ಟ–ಮೈಸೂರು ಮಾರ್ಗದ ರಸ್ತೆ ನಿರ್ಮಾಣಗೊಳ್ಳುತ್ತಿದೆ ಎಂದಿದ್ದಾರೆ. ಒಟ್ಟು 8,350 ಕೋಟಿ ರೂ. ವೆಚ್ಚದ ದಶಪಥ ರಸ್ತೆಯ ಬಹುತೇಕ ಕಾಮಗಾರಿಗಳು ಪೂರ್ಣಗೊಳ್ಳುತ್ತಿದ್ದು, ಮೊದಲ ಭಾಗ ನಿಗದಿತ ಸಮಯಕ್ಕಿಂತ ಮೊದಲೇ ಲೋಕಾರ್ಪಣೆಗೊಳ್ಳಲಿದೆ. ● 5ನೇ ಪುಟಕ್ಕೆ

ಹುಲಿಗೆ ಕಾಫಿ ತೋಟದ ಕಾರ್ಮಿಕ ಬಲಿ

ವಿರಾಜಪೇಟೆ ಬಳಿ ಘಟನೆ

ವಿರಾಜಪೇಟೆ,ಮಾ.28–ಹುಲಿ ದಾಳಿಗೆ ತೋಟದ ಕಾರ್ಮಿಕನೋರ್ವ ಬಲಿಯಾಗಿರುವ ಘಟನೆ ವಿರಾಜಪೇಟೆ ತಾಲೂಕಿನ 1ನೇ ರುದ್ರುಗುಪ್ಪೆ ಗ್ರಾಮದಲ್ಲಿ ಸೋಮವಾರ ಸಂಜೆ ನಡೆದಿದೆ.


ಗಣೇಶ್ ಪುಟ್ಟು

ಮೂಲತಃ ಗೋಣಿಕೊಪ್ಪ ಅತ್ತೂರು ಗ್ರಾಮದ ಗದ್ದೆಮನೆ ನಿವಾಸಿ ಎರವರ ಗಣೇಶ್ ಪುಟ್ಟು (29) ಹುಲಿ ದಾಳಿಗೆ ಬಲಿಯಾದವನಾಗಿದ್ದು, ಘಟನೆಯಿಂದ ಕೊಡಗು ಜಿಲ್ಲೆ ಮತ್ತೊಮ್ಮೆ ಬೆಚ್ಚಿ ಬಿದ್ದಿದೆ.

ಘಟನೆ ವಿವರ: ವಿರಾಜಪೇಟೆ 1ನೇ ರುದ್ರುಗುಪ್ಪೆ ಗ್ರಾಮ ನಿವಾಸಿ ಕೊಂಗಂಡ ಅಯ್ಯಪ್ಪ ಅವರ ತೋಟದಲ್ಲಿ ಗಣೇಶ್‌ಪುಟ್ಟು ಅವರು ಕರಿಮೆಣಸು ಕುಯ್ಯುವ ಕೆಲಸ ಮಾಡುತ್ತಿದ್ದರು. ಸೋಮವಾರ ಸಂಜೆ 4 ಗಂಟೆಯ ಸಮಯದಲ್ಲಿ ತೋಟದೊಳಗಿದ್ದ ಹುಲಿ ಏಕಾಏಕಿ ಗಣೇಶ್ ಮೇಲೆ ದಾಳಿ ಮಾಡಿ ತಲೆಯ ಭಾಗಕ್ಕೆ ಕಚ್ಚಿದ್ದು, ಗಣೇಶ್ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ವಿರಾಜಪೇಟೆ ವಲಯ ಅರಣ್ಯಾಧಿಕಾರಿಗಳು, ಗ್ರಾಮಾಂತರ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು. ಹುಲಿ ದಾಳಿಗೆ ವ್ಯಕ್ತಿ ಬಲಿಯಾದ ಸುದ್ದಿ ತಿಳಿದು ಸುತ್ತಮುತ್ತಲಿನ ಗ್ರಾಮಗಳ ಜನರು ಮತ್ತು ರೈತ ಸಂಘದ ಪ್ರಮುಖರು ಸ್ಥಳದಲ್ಲಿ ಜಮಾಯಿಸಿ ಅರಣ್ಯ ಇಲಾಖೆ ಅಧಿಕಾರಿಗಳ ● 9ನೇ ಪುಟಕ್ಕೆ



ಕೇಂದ್ರ ಕಾರ್ಮಿಕ ಸಂಘಟನೆಗಳ ದೇಶವ್ಯಾಪಿ ಮುಷ್ಕರ

ಮೈಸೂರಲ್ಲೂ ಮೊದಲ ದಿನ ಉತ್ತಮ ಪ್ರತಿಕ್ರಿಯೆ

- ವಿವಿಧ ಕಾರ್ಮಿಕರು, ವಿಮಾ, ಅಂಚೆ, ಬ್ಯಾಂಕ್ ನೌಕರರು ಭಾಗಿ
- ಕೇಂದ್ರ, ರಾಜ್ಯ ಸರ್ಕಾರದ ನೀತಿ ಖಂಡಿಸಿ ಪ್ರತಿಭಟನೆ; ಆಕ್ರೋಶ


ಮೈಸೂರು ಡಿಸಿ ಕಚೇರಿ ಎದುರು ಕಾರ್ಮಿಕರು, ಬ್ಯಾಂಕ್, ವಿಮೆ, ಅಂಚೆ ನೌಕರರು ಭಾರೀ ಪ್ರತಿಭಟನೆ ನಡೆಸಿದರು.

ಮೈಸೂರು,ಮಾ.28(ಪಿಎಂ)– ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೀತಿಗಳನ್ನು ಖಂಡಿಸಿ ಕೇಂದ್ರ ಕಾರ್ಮಿಕ ಸಂಘಟನೆಗಳು ಕರೆ ನೀಡಿರುವ ಎರಡು ದಿನಗಳ ದೇಶವ್ಯಾಪಿ ಮುಷ್ಕರಕ್ಕೆ ಮೊದಲ ದಿನವಾದ ಸೋಮವಾರ ಮೈಸೂರು ಜಿಲ್ಲೆಯಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಜಿಲ್ಲೆಯ ಕೈಗಾರಿಕೆಗಳಲ್ಲಿ ಶೇ.80ರಷ್ಟು ಕಾರ್ಮಿಕರು ಕರ್ತವ್ಯ ಕೈಬಿಟ್ಟು ಸಾಂಕೇತಿಕ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಅಂತೆಯೇ ಬ್ಯಾಂಕ್, ವಿಮೆ ಮತ್ತು ಅಂಚೆ ಇಲಾಖೆ ನೌಕರರು ಮುಷ್ಕರದಲ್ಲಿ ಪಾಲ್ಗೊಂಡಿರುವ ಹಿನ್ನೆಲೆಯಲ್ಲಿ ● 9ನೇ ಪುಟಕ್ಕೆ

> “ ಮುಷ್ಕರ ಬೆಂಬಲಿಸಿರುವ ಸಂಘಟನೆಗಳನ್ನು (ಎಐಟಿಯುಸಿ, ಸಿಐಟಿಯು, ಐಎನ್‌ಟಿಯುಸಿ, ಎಐಯುಟಿಯುಸಿ, ಎಐಸಿಸಿಟಿಯು) ಹೊಂದಿರುವ ಎಲ್ಲಾ ಕಾರ್ಖಾನೆಗಳಲ್ಲಿ ಬಹುತೇಕ ಬಂದ್ ವಾತಾವರಣ ನಿರ್ಮಾಣವಾಗಿದೆ ಜಿಲ್ಲೆಯ ಭಾಗಶಃ ಕಾರ್ಖಾನೆಗಳಲ್ಲಿ ಈ ಸಂಘಟನೆಗಳ ಸದಸ್ಯತ್ವ ಹೊಂದಿರುವ ಕಾರ್ಮಿಕರೇ ಹೆಚ್ಚಿದ್ದು, ಒಟ್ಟಾರೆ ಇಡೀ ಜಿಲ್ಲೆಯ ಎಲ್ಲಾ ಕಾರ್ಖಾನೆಗಳಲ್ಲಿ ಶೇ.80ಕ್ಕೂ ಅಧಿಕ ಸಂಖ್ಯೆಯ ಕಾರ್ಮಿಕರು ಕರ್ತವ್ಯ ಕೈಬಿಟ್ಟು ಮುಷ್ಕರನಿರತರಾಗಿದ್ದಾರೆ. ಬ್ಯಾಂಕ್‌ಗಳು ಮತ್ತು ಎಲ್‌ಐಸಿ ಕಚೇರಿಗಳಲ್ಲೂ ಶೇ.80ರಷ್ಟು ನೌಕರರು ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ.
>
> –ಎನ್.ಕೆ.ದೇವದಾಸ್, ಜೆಸಿಟಿಯು ಸಂಚಾಲಕ

ಗ್ರಾಹಕರಿಗೆ ಮಾ.30, 31ರಂದು ಮಾತ್ರವೇ ಬ್ಯಾಂಕ್ ಸೇವೆಗಳು ಲಭ್ಯ

ಮೈಸೂರು: ಎರಡು ದಿನಗಳ ದೇಶವ್ಯಾಪಿ ಮುಷ್ಕರ ಬೆಂಬಲಿಸಿ ಹಾಗೂ ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಬ್ಯಾಂಕ್ ನೌಕರರೂ ಮುಷ್ಕರದಲ್ಲಿ ಪಾಲ್ಗೊಂಡಿರುವ ಹಿನ್ನೆಲೆಯಲ್ಲಿ ಸೋಮವಾರ ಬ್ಯಾಂಕ್ ಸೇವೆಗಳಲ್ಲಿ ವ್ಯತ್ಯಯ ಉಂಟಾಗಿತ್ತು. ಅಲ್ಲದೆ, ಈ ವಾರದಲ್ಲಿ ಎರಡು ದಿನಗಳು ಮಾತ್ರವೇ ಸಾರ್ವಜನಿಕರಿಗೆ ಬ್ಯಾಂಕ್ ಸೇವೆಗಳು ಲಭ್ಯವಾಗಲಿವೆ.

ಮಾ.28ರ ಸೋಮವಾರವಾದ ಇಂದು ಮುಷ್ಕರ ಆರಂಭವಾಗಿದ್ದು, ಮೈಸೂರು ನಗರದಲ್ಲಿ ಬಹುತೇಕ ಬ್ಯಾಂಕ್‌ಗಳಲ್ಲಿ ಸೋಮವಾರ ಭಾಗಶಃ ನೌಕರರು ಇಲ್ಲದ ಕಾರಣ ವಹಿವಾಟು ಬಹುತೇಕ ಸ್ಥಗಿತಗೊಂಡಿತ್ತು. ಜಿಲ್ಲೆಯಾದ್ಯಂತ ಬ್ಯಾಂಕ್‌ಗಳ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿರಲಿಲ್ಲ (ಖಾಸಗಿ ಮತ್ತು ಸಹಕಾರ ಬ್ಯಾಂಕ್‌ಗಳ ಹೊರತಾಗಿ). ನಾಳೆಯೂ (ಮಾ.29) ಮುಷ್ಕರ ನಡೆಯುವ ಹಿನ್ನೆಲೆಯಲ್ಲಿ ಬ್ಯಾಂಕ್ ಸೇವೆಗಳಲ್ಲಿ ವ್ಯತ್ಯಯ ಮುಂದುವರೆಯಲಿದೆ. ಮಾ.30ರ ಬುಧವಾರ ಮತ್ತು ಮಾ.31ರ ಗುರುವಾರ ಬ್ಯಾಂಕ್‌ಗಳು ಕಾರ್ಯನಿರ್ವಹಿಸಲಿವೆ. ಹಾಗಾಗಿ ಈ ಎರಡು ದಿನಗಳು ಸಾರ್ವಜನಿಕರು ಬ್ಯಾಂಕಿಗೆ ಸಂಬಂಧಿಸಿದ ● 9ನೇ ಪುಟಕ್ಕೆ



ನಕ್ಕರೆ ಅದೇ ಸ್ವರ್ಗ

ಹೆಂಡತಿ : "ರೀ, ಯುಗಾದಿ ಖರೀದಿಗೆ ಲಿಸ್ಟ್ ಮಾಡೋಣ್ವಾ?
ಗಂಡ : "ಆಯ್ತು! ಬರಿ"
ಹೆಂಡತಿ : "ಸರಿ, ಮೊದಲು ಏನು ತಗೊಳ್ಳೋಣ?"
ಗಂಡ : "ನಾವು ಸಾಲ ತಗೊಳ್ಳೋಣ!!"

ಮೈಸೂರು ಮಿತ್ರ
ಮಂಗಳವಾರ, 29 ಮಾರ್ಚ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಅಪವಾದಗಳಿಗೆ ಅತ್ಯುತ್ತಮ ಉತ್ತರವೆಂದರೆ ಮೌನ – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ತೋಟ ಮಾಡಿದವನಿಗೆ ಕೋಟಲೆಯಿಲ್ಲ

ನಿಮ್ಮ ಪತ್ರಗಳು

ನಿಮ್ಮ ಆಚರಣೆಯಲ್ಲಿ ಬದಲಾವಣೆ ತಂದುಕೊಳ್ಳಿ

ಮಾನ್ಯರೆ,

ಈಗ ಎಲ್ಲೆಲ್ಲೂ ಜಾತ್ರೆಯ ಸಂಭ್ರಮ. ಹಲವೆಡೆ ಗ್ರಾಮದೇವತೆಯ ಹಬ್ಬವನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ಆಚರಿಸುತ್ತಾರೆ. ಹಲವರು ಹಲವಾರು ರೀತಿಯ ಹರಕೆ ಹೊತ್ತು ಅದು ಈಡೇರಿದ ನಂತರ ತೀರಿಸುತ್ತಾರೆ.(ಬಾಯಿಗೆ ಬೀಗ ಹಾಕುವುದು, ಕೊಂಡ ಹಾಯುವುದು, ಮಕ್ಕಳನ್ನು ಮೇಲಿಂದ ಕೆಳಕ್ಕೆ ಎಸೆಯುವುದು ಇತ್ಯಾದಿ) ಈ ಸಮಯದಲ್ಲಿ ಅನೇಕ ಅಹಿತಕರ ಘಟನೆ ನಡೆದು ಸಾವು ನೋವು ಸಂಭವಿಸುತ್ತದೆ. ದೇವಾಲಯದ ಅರ್ಚಕರು ಉಪವಾಸವಿದ್ದು ಕೊಂಡ ಹಾಯುತ್ತಾರೆ. ನಂತರ ಹೆಣ್ಣು ಗಂಡು ಎಂಬ ಭೇದವಿಲ್ಲದೆ ಕೊಂಡ ಹಾಯಲು ಮುಂದಾಗುತ್ತಾರೆ. ಈ ವೇಳೆ ಆಕಸ್ಮಿಕವಾಗಿ ಅನೇಕ ದುರ್ಘಟನೆಗಳು ನಡೆಯುತ್ತದೆ. ಭಕ್ತಾದಿಗಳು ಉಪವಾಸ ವಿರುವುದರಿಂದ ತಲೆ ತಿರುಗಿ ಬೀಳಬಹುದು, ಎಡವಿ ಬೀಳಬಹುದು. ತಳ್ಳಾಟದಿಂದ ಕೊಂಡ ಹಾಯುವಾಗ ಪ್ರತೀ ವರ್ಷ ಹಲವರು ಬಿದ್ದು ಅಪಾಯ ತಂದುಕೊಳ್ಳುತ್ತಿದ್ದಾರೆ. ಮೊನ್ನೆ, ತಮ್ಮಡಹಳ್ಳಿಯ ಗ್ರಾಮದೇವತೆಯ ಮಾರಮ್ಮನ ದೇವರ ಹಬ್ಬದಲ್ಲಿ ಅರ್ಚಕ ಲಿಂಗರಾಜು ಕೊಂಡ ಹಾಯುವಾಗ ಬಿದ್ದು ಗಾಯಗೊಂಡು ಆಸ್ಪತ್ರೆ ಸೇರಿದ್ದಾರೆ. ಯಾವುದೇ ಗ್ರಾಮ ದೇವತೆಗಳ ಹಬ್ಬವನ್ನು ಭಕ್ತಿಯಿಂದ ಆಚರಿಸಿ ಈ ಆಚರಣೆಯಿಂದ ಯಾರಿಗೂ ತೊಂದರೆಯಾಗದಂತೆ ನೋಡಿಕೊಳ್ಳಿ, ಊರಿನ ಮುಖಂಡರು, ವಿದ್ಯಾವಂತ ಯುವಕರು, ಇದರ ಉಸ್ತುವಾರಿ ನೋಡಿಕೊಳ್ಳಲಿ. ವಿಜ್ಞಾನ ಮುಂದುವರೆದಂತೆ ನಿಮ್ಮ ಆಚರಣೆಯಲ್ಲೂ ಬದಲಾವಣೆಯಾಗಲಿ. ಇದರಿಂದ ಯಾರಿಗೂ ತೊಂದರೆಯಾಗುವುದಿಲ್ಲ. ಭಕ್ತರು ಚೆನ್ನಾಗಿದ್ದರೆ ನಿಮ್ಮ ಊರಿನ ಗ್ರಾಮದೇವತೆಗೆ ಸಂತೋಷವಾಗುತ್ತದೆ. ನಿಮ್ಮನ್ನು ಹರಸುತ್ತಾಳೆ. ದೇವರ ಹೆಸರಿನಲ್ಲಿ ಭಕ್ತಾದಿಗಳಿಗೆ ತೊಂದರೆ ಆದರೆ ಎಲ್ಲಾ ದೇವರುಗಳು ನೊಂದುಕೊಳ್ಳುತ್ತಾರೆ. ಯಾರಿಗೂ ತೊಂದರೆಯಾಗದಂತೆ ಊರಿನ ಹಬ್ಬಗಳನ್ನು ಆಚರಣೆ ಮಾಡಲಿ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಒಣ ಮರವನ್ನು ತೆರವುಗೊಳಿಸಿ



ಮಾನ್ಯರೆ,

ನಗರದ ಚಾಮರಾಜಪುರಂ ಕೃಷ್ಣರಾಜ ಬೂಲೆ ವಾರ್ಡ್ ರಸ್ತೆಯ ಟೆನ್ನಿಸ್ ಕೋರ್ಟ್ ಎದುರಿಗಿರುವ ಪಾಳ್ಯಂ ಪ್ರಿಂಟರ್ಸ್ ಬಳಿಯ ಪಾದಚಾರಿ ರಸ್ತೆಯಲ್ಲಿನ ಒಣ ಮರವೊಂದು ಈಗಲೋ ಆಗಲೋ ಬೀಳುವಂತಿದ್ದು ಪಾಳ್ಯಂ ಪ್ರಿಂಟರ್ಸ್ ಮಾಲೀಕ ಶ್ರೀನಿವಾಸ್ ಅವರು ಕಳೆದ ಜನವರಿಯಿಂದ ಈ ಬಗ್ಗೆ ಮೈಸೂರು ಮಹಾನಗರ ಪಾಲಿಕೆಗೆ ದೂರಿದ್ದರೂ ಏನೂ ಪ್ರಯೋಜನವಾಗಿಲ್ಲ.

ಪಾಲಿಕೆಯ ಸದಸ್ಯೆಯ ಗಮನಕ್ಕೂ ಇದನ್ನು ತಂದರೂ ಅವರು ಬಂದು ನೋಡಿ ಹೋದರಷ್ಟೇ. ಮರವನ್ನು ತೆರವು ಮಾಡಲು ಪಾಲಿಕೆ ಮುಂದಾಗಿಲ್ಲ. ಹತ್ತಿರದಲ್ಲೇ ಬೇಕರಿಯೊಂದಿದ್ದು ಮರವೇನಾದರೂ ಬಿದ್ದರೆ ಅದರಡಿ ನಿಲ್ಲಿಸಲಾಗುವ ವಾಹನಗಳಿಗೆ ಹಾನಿಯಾಗುವುದಲ್ಲದೇ ಅಮೂಲ್ಯ ಪ್ರಾಣ ಹಾನಿಯೂ ಸಂಭವಿಸಬಹುದು. ಪಾಲಿಕೆಯು ತುರ್ತಾಗಿ ಈ ಒಣಮರವನ್ನು ತೆರವುಗೊಳಿಸಿ ಮುಂದಾಗುವ ಅಪಾಯವನ್ನು ತಪ್ಪಿಸಲಿ.

–ಕೊ.ಸು.ನರಸಿಂಹ ಮೂರ್ತಿ, ಚಾಮರಾಜಪುರಂ, ಮೈಸೂರು.

ಅರಿಶಿನ ಕುಂಕುಮಕ್ಕೆ ಬದಲು ಕೆಮಿಕಲ್ ಮಾರಾಟ

ಮಾನ್ಯರೇ

ಮೈಸೂರಿನ ದೇವರಾಜ ಮಾರುಕಟ್ಟೆ ಸೇರಿದಂತೆ ಬಹುತೇಕ ಕಡೆ ಅರಿಶಿನ ಕುಂಕುಮ ಮಾರುವ ಬದಲು ರಾಸಾಯನಿಕ ಮಿಶ್ರಿತ ಅಪಾಯಕಾರಿ ಬಣ್ಣವನ್ನು ಮಾರಲಾಗುತ್ತಿದೆ. ಇದರಿಂದ ಚರ್ಮರೋಗ ಉಲ್ಬಣವಾಗುತ್ತಿದೆ. ಜೊತೆಗೆ ಉಸಿರಾಟಕ್ಕೆ ತೊಂದರೆಯಾಗಿ ಜೀವಕ್ಕೆ ಕಂಟಕವಾಗುತ್ತದೆ. ಪ್ರತಿನಿತ್ಯ ಮಹಿಳೆಯರು ಅರಿಶಿನ ಕುಂಕುಮ ಬಳಸುತ್ತಾರೆ. ಇನ್ನು ದೇವಸ್ಥಾನ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಅರಿಶಿನ ಕುಂಕುಮ ಇರಲೇಬೇಕು. ನಗರಪಾಲಿಕೆ ಆರೋಗ್ಯಾಧಿಕಾರಿಗಳು ಪ್ಲಾಸ್ಟಿಕ್ ನಿಷೇಧ, ಸ್ವಚ್ಛತೆ ತೆರಿಗೆ ದಂಡ ವಸೂಲಿಯ ಬಗ್ಗೆ ಅಭಿಯಾನ ಕೈಗೊಳ್ಳುವ ರೀತಿಯಲ್ಲೇ ನಾಗರಿಕ ಹಿತರಕ್ಷಣೆಯಿಂದ ನಕಲಿ ಮಾಲು, ಕಲಬೆರಕೆ ಐಟಮ್ಸ್ ಸೀಜ್ ಮಾಡಲು ಮುಂದಾಗಬೇಕು. ಅರಿಶಿನ ಕುಂಕುಮ ಬದಲು ಕೆಮಿಕಲ್ ಬಣ್ಣ ಮಾರುತ್ತಿರುವ ಅಂಗಡಿಗಳ ಮೇಲೆ ದಾಳಿ ನಡೆಸಿ ಕ್ರಮ ಜರುಗಿಸಬೇಕು. ಜೊತೆಗೆ ಸ್ಥಳಗಳ ಪರಿಶೀಲನೆ ನಡೆಸಿ, ಇಂತಹ ಹಾನಿಕಾರಕ ಪದಾರ್ಥ ಉತ್ಪಾದನೆ ಜಾಲದ ಬಗ್ಗೆ ನಗರಪಾಲಿಕೆ ಪರಿಸರ ಮತ್ತು ಆರೋಗ್ಯ ಇಲಾಖೆ ಕ್ರಮ ಕೈಗೊಂಡು ಎಚ್ಚೆತ್ತುಕೊಳ್ಳಲಿ. ಪ್ರತಿನಿತ್ಯ ಮಾರುಕಟ್ಟೆಯಲ್ಲಿ ಅರಿಶಿನ ಕುಂಕುಮ ಕೊಂಡುಕೊಳ್ಳುವ ಸಾರ್ವಜನಿಕರ ಜೀವ ರಕ್ಷಣೆಯಾಗಲಿ.

– ಅಜಯ್ ಶಾಸ್ತ್ರಿ, ಸಾಮಾಜಿಕ ಹೋರಾಟಗಾರ, ಮೈಸೂರು

ವಿದ್ಯೆ ಕಲಿಯಲು ವಯಸ್ಸಿನ ಮಿತಿಯಿಲ್ಲ

ಮಾನ್ಯರೆ,

'ವಿದ್ಯೆ ಸಾಗರದಷ್ಟು ಕಲಿತಿರುವುದು ಹನಿಯಷ್ಟು' ಎಂಬ ಗಾದೆ ಸರ್ವಕಾಲಕ್ಕೂ ಪ್ರಸ್ತುತವಾಗಿರುತ್ತದೆ. ವಿದ್ಯೆಗೆ ಯಾವುದೇ ವಯಸ್ಸಿನ ಮಿತಿಯಿಲ್ಲ. ಓದಿಗೆ ಬೇಕಾಗಿರುವುದು ಶ್ರದ್ಧೆ, ಆಸಕ್ತಿ, ಛಲ.

ಇದೇ ಹಾದಿಯಲ್ಲಿ ಬಾಗಲಕೋಟೆ ಜಿಲ್ಲೆಯ ಇಳಕಲ್ ತಾಲೂಕಿನ ಗೂಡೂರು ಗ್ರಾಮದ ನಿವಾಸಿ ನಿಂಗಯ್ಯ ಬಸಯ್ಯ ಒಡೆಯರ್ ತನ್ನ 82ನೇ ವಯಸ್ಸಿನಲ್ಲಿ ಸ್ನಾತಕೋತ್ತರ ಪದವಿ ಪಡೆಯಲು ಪರೀಕ್ಷೆ ಬರೆಯುತ್ತಿರುವುದು ಇಂದಿನ ಯುವ ಜನತೆಗೆ ಸ್ಫೂರ್ತಿಯಾಗಿದ್ದಾರೆ.


ನಿಂಗಯ್ಯ ಬಸಯ್ಯ ಒಡೆಯರ್ ಇಲ್ಲಿಯವರೆಗೆ 4 ಸ್ನಾತಕೋತ್ತರ ಪದವಿಗಳನ್ನು ಪಡೆದಿದ್ದಾರೆ ಮತ್ತು 5 ಪದವಿಗೆ ಪರೀಕ್ಷೆ ಬರೆದಿರುವುದು ಅವರ ವಿದ್ಯೆಯ ಮೇಲಿನ ಆಸಕ್ತಿಯನ್ನು ತಿಳಿಸುತ್ತದೆ. ಸರಿಯಾಗಿ ಕಿವಿ ಕೇಳದಿದ್ದರೂ ಕೈನಡುಗುವ ವಯಸ್ಸಿನಲ್ಲಿ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದ ನಿಂಗಯ್ಯರನ್ನು ಕಂಡು ಬೇರೆ ವಿದ್ಯಾರ್ಥಿಗಳು ಮತ್ತು ಕೊಠಡಿಯ ಸಿಬ್ಬಂದಿ ನಿಬ್ಬೆರಗಾಗಿದ್ದರು. ನಿಂಗಯ್ಯ ಬಸಯ್ಯ ಒಡೆಯರ್ ಅವರ ಸಾಧನೆ, ಓದಿನಲ್ಲಿ ಆಸಕ್ತಿ ಕಳೆದುಕೊಂಡಿರುವ, ಕೆಟ್ಟ ಚಟಗಳಿಗೆ ದಾಸರಾಗಿರುವ, ಮೊಬೈಲ್‌ಗೆ ಮಾರುಹೋಗಿರುವ ಇಂದಿನ ಯುವಜನತೆಗೆ ಸ್ಫೂರ್ತಿಯಾಗಲಿ.

–ರಾಸುಮಭಟ್, ಚಿಕ್ಕಮಗಳೂರು.

ಕಾವೇರಿಯ ಹಿನ್ನೀರಿನಲ್ಲಿದ್ದಾನೆ "ಅನಾಥ ಗೊಮ್ಮಟ"







27 ವರ್ಷಗಳ ನಂತರ ಬಸದಿ ಕೋಟೆಗೆ ಭೇಟಿ ನೀಡಿದೆ. ಅದೇ ವಾತಾವರಣದಲ್ಲಿ ಅನಾಥವಾಗಿರುವ ಗೊಮ್ಮಟ ಇಷ್ಟು ವರ್ಷ ಕಳೆದರೂ ಇದರ ಕಡೆ ಗಮನಹರಿಸದೇ ಇರುವ ಪುರಾತತ್ವ ಇಲಾಖೆಯವರ ನಿರ್ಲಕ್ಷ್ಯವೇ ಇದಕ್ಕೆಲ್ಲ ಕಾರಣ ಎಂದು ತಿಳಿದು ಮನಸ್ಸಿಗೆ ತುಂಬಾ ನೋವಾಯಿತು.

ಎಂ.ಆರ್.ಮಂಜುನಾಥ್

ನಮ್ಮ ನಾಡಿನ ಪ್ರಸಿದ್ಧ ಕಾವೇರಿ ನದಿಯ ಹಿನ್ನೀರಿನ ತೀರದಲ್ಲೊಂದು ತಲೆ ಎತ್ತಿ ನಿಂತಿರುವ "ಬಸದಿ" ಸುತ್ತಮುತ್ತಲಿನ ಜನರ ಆಡು ಮಾತಿನಲ್ಲಿ ಕುರುಬರ ಬಸ್ತಿ ಅಥವಾ ಬಸದಿ ಕೋಟೆ ಎಂದು ಕರೆಯುತ್ತಾರೆ. ಇಲ್ಲಿರುವ 18 ಅಡಿ ಎತ್ತರದ ಬಳಪದ ಶಿಲೆಯ ಸುಂದರವಾದ ವಿಗ್ರಹ ಬಾಹುಬಲಿ ಮೂರ್ತಿಯು ಅನಾಥವಾಗಿ ನಿಂತಿದೆ. ಪತ್ರಿಕಾ ಛಾಯಾಗ್ರಾಹಕನಾಗಿ ನಾನು 1995 ರಲ್ಲಿ ಈ ಬಸದಿ ಹೊಸಕೋಟೆಗೆ ಭೇಟಿ ನೀಡಿ ಅಲ್ಲಿಯ ವಾತಾವರಣದ ಛಾಯಾ ಚಿತ್ರಗಳನ್ನು ಕ್ಲಿಕ್ಕಿಸಿದೆ. ಅವುಗಳು ಪತ್ರಿಕೆಯಲ್ಲಿ ಪ್ರಕಟಣೆಗೊಂಡಿತ್ತು. ಬಸದಿ ಹೊಸಕೋಟೆಯನ್ನು ನೋಡಬೇಕೆಂದು ಮತ್ತೆ ನೆನೆದು 27 ವರ್ಷಗಳ ನಂತರ ಬಸದಿ ಕೋಟೆಗೆ ಭೇಟಿ ನೀಡಿದೆ. ಅದೇ ವಾತಾವರಣದಲ್ಲಿ ಅನಾಥವಾಗಿರುವ ಗೊಮ್ಮಟ ಇಷ್ಟು ವರ್ಷ ಕಳೆದರೂ ಇದರ ಕಡೆ ಗಮನಹರಿಸದೇ ಇರುವ ಪುರಾತತ್ವ ಇಲಾಖೆಯವರ ನಿರ್ಲಕ್ಷ್ಯವೇ ಇದಕ್ಕೆಲ್ಲ ಕಾರಣ ಎಂದು ತಿಳಿದು ಮನಸ್ಸಿಗೆ ತುಂಬಾ ನೋವಾಯಿತು.

ಈ ವಿಗ್ರಹದ ನಿರ್ಮಾಣದ ಕಾಲವು ಸುಮಾರು 12ನೇ ಶತಮಾನದ್ದು ಎಂದು ತಿಳಿದು ಬರುತ್ತದೆ. ವಿಷ್ಣುವರ್ಧನ ದೊರೆಯ ದಂಡಾಧಿಕಾರಿಯಾಗಿದ್ದ ಪುಣಿಸಮ್ಮಯ್ಯನಿಂದ ನಿರ್ಮಿಸಲಾಯಿತೆಂದು ಶ್ರವಣಬೆಳಗೊಳದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಅಭಿಪ್ರಾಯ ಪಟ್ಟಿದ್ದಾರೆ. ಶ್ರವಣ ಬೆಳಗೊಳದ ಬಾಹುಬಲಿಯಂತೆ ನಾಜೂಕಿನ ಕೆತ್ತನೆ ಇಲ್ಲವಾದರು ತನ್ನ ವಿಶಿಷ್ಟವಾದ ಸೌಂದರ್ಯದಿಂದ ಈ ವಿಗ್ರಹವು ನೋಡುಗರ ಮನ ಸೆಳೆಯುತ್ತದೆ. ಗುಂಗರು ಕೂದಲುಗಳುಳ್ಳ ತಲೆ, ಹಗಲವಾದ ಹಣೆ, ವಿಶಾಲವಾದ ಎದೆ, ಉದ್ದನೆಯ ಕಿವಿಗಳು, ಸಮ ಪ್ರಮಾಣದ ಕೈ ಕಾಲುಗಳ ಕೆತ್ತನೆ, ಶಾಂತ ಮುಖ ಮುದ್ರೆಯ ಈ ಗೊಮ್ಮಟ ಮೂರ್ತಿಯು 5 ಎಕರೆ ಜಾಗದಲ್ಲಿ ಪೂರ್ವಾಭಿಮುಖವಾಗಿ ನಿಂತಿದ್ದಾನೆ.

ಮಳೆ, ಗಾಳಿ, ಬಿಸಿಲಿಗೆ ಮೈಯೊಡ್ಡಿ ನಿಂತಿದ್ದ ಈ ಮೂರ್ತಿಗೆ ಸುಮಾರು 150 ವರ್ಷಗಳ ಹಿಂದೆ ಕಮಾನಿನಾಕಾರದ ಗುಡಿಯನ್ನು ಕಟ್ಟಿಸಲಾಗಿದೆ, ಈ ರೀತಿಯ ನಿರ್ಮಾಣ ರಾಜ್ಯದ ಇನ್ನಿತರೆ ಗೊಮ್ಮಟ ವಿಗ್ರಹಗಳಿಗಿಲ್ಲ ಎಂಬುದು ವಿಶೇಷ. ವಿಗ್ರಹದ ಎಡಭಾಗದಲ್ಲಿ ಗುಡಿಯ ಗೋಡೆಗೆ ಹೊಂದಿಕೊಂಡಂತೆ ಕಲ್ಲಿನ ಮೆಟ್ಟಿಲುಗಳು ವಿಗ್ರಹದ ಹಿಂಭಾಗದಲ್ಲಿ ಭುಜದವರೆಗಿವೆ. ಇದನ್ನು ಗಮನಿಸಿದರೆ ಮೂರ್ತಿಯ ಅಭಿಷೇಕದ ಕಾರ್ಯಕ್ಕಾಗಿಯೇ ಈ ರೀತಿಯ ವ್ಯವಸ್ಥೆ ಇರುವುದನ್ನು ಇಲ್ಲಿ ಗಮನಿಸಬಹುದು. ವಿಗ್ರಹದ ಬಲಭಾಗದ ಗೋಡೆಯಲ್ಲಿರುವ ಒಂದು ಸಾಲಿನಲ್ಲಿ ವಿವಿಧ ನೃತ್ಯ ಭಂಗಿಗಳಲ್ಲಿರುವ ಪುಟ್ಟ ಪುಟ್ಟ ಶಿಲಾಬಾಲಿಕೆಯರ ಕೆತ್ತನೆಗಳು ಅತ್ಯಾಕರ್ಷಕವಾಗಿವೆ.

ಹಿಂಬದಿಯಲ್ಲಿ ಕಲಾತ್ಮಕ ಕೆತ್ತನೆಯ ಕಂಬಗಳ ಎರಡು ಮಂಟಪಗಳಿವೆ. ಒಂದು ಮಂಟಪ ಅರ್ಧ ಭಾಗದಷ್ಟು ಮಣ್ಣಿನಲ್ಲಿ ಹೂತು ಹೋಗಿದೆ. ಈ ಮಂಟಪಗಳ ಛಾವಣಿಯ ಹೊರ ಭಾಗದಲ್ಲಿ ನಾಲ್ಕು ಕಡೆಯೂ ಶಿಲಾ ಬಾಲಿಕೆಯರ ಯಕ್ಷ ಯಕ್ಷಣಿಯರ ಶಿವ ತಾಂಡವ ನೃತ್ಯದ ನಯನ ಮನೋಹರವಾದ ಕೆತ್ತನೆಗಳಿವೆ. ಬಿದ್ದ ಕಂಬಗಳಲ್ಲಿ ಹಳೆಗನ್ನಡ ಲಿಪಿಯ ಶಾಸನಗಳಿವೆ. ದಿಬ್ಬದ ತುಂಬೆಲ್ಲಾ ಹಲವಾರು ಭಗ್ನ ವಿಗ್ರಹಗಳು, ಕಲ್ಲಿನ ಕಂಬಗಳು, ಅಳಿದು ಉಳಿದ ದಿಗಂಬರ ಮೂರ್ತಿಗಳು

ಅನಾಥವಾಗಿ ಅಲ್ಲಲ್ಲಿ ಬಿದ್ದಿವೆ. ಇಲ್ಲಿ ಪಂಚ ಬಸದಿಗಳಿತ್ತು ಎನ್ನುವುದಕ್ಕೆ ಶಾಂತಿನಾಥ, ಆದಿನಾಥ, ನೇಮಿನಾಥ ಸ್ವಾಮಿಗಳ ಮೂರ್ತಿಗಳ ಕುರುಹುಗಳು ಕಂಡು ಬಂದಿವೆ ಎಂದು ಕಮಿಟಿಯ ಅಧ್ಯಕ್ಷರಾದ ರೂಪೇಶ್ ಕುಮಾರ್ ತಿಳಿಸುತ್ತಾರೆ. ಇಲ್ಲಿಯವರೆಗೆ ಪುರಾತತ್ವ ಇಲಾಖೆಯವರು ಗಮನಹರಿಸಿಲ್ಲವೆಂದರೆ ಆಶ್ಚರ್ಯದ ಸಂಗತಿಯಾಗಿದೆ.

ನಮ್ಮ ಕಮಿಟಿಯಿಂದ ಧರ್ಮಸ್ಥಳದ ವೀರೇಂದ್ರ ಹೆಗಡೆಯವರಿಗೆ ಮನವಿ ಸಲ್ಲಿಸಿದ್ದೇವೆ. ಅವರು ಈ ಬಸದಿಗೆ ಪುನರ್ಜೀವ ಕೊಡುವುದಾಗಿ ತಿಳಿಸಿದ್ದಾರೆ. ಅದರೆ ಇವುಗಳಿಗೆ ಯಾವ ಸಂರಕ್ಷಣೆಯೂ ಇಲ್ಲದೆ ಅಕ್ಕಪಕ್ಕದ ಗ್ರಾಮಗಳ ದನಗಾಹಿ ಹುಡುಗರ ಆಟದ ವಸ್ತುಗಳಾಗುತ್ತಿವೆ. ಈ ಗೊಮ್ಮಟನಿಗೆ ಸುಮಾರು ವರ್ಷಗಳ ಹಿಂದೆ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರಿಂದ ಮಸ್ತಕಾಭಿಷೇಕ ಮಾಡಿದರೆಂದು ತಿಳಿಯ ಪಡಿಸುತ್ತಾರೆ ಕಮಿಟಿಯವರಾದ ಗ್ರಾಮ ಪಂಚಾಯಿತಿ ಮಾಜಿ ಛೇರ್ಮನ್ ರಾಜು.

ಇನ್ನೂ ಕಾಲ ಮಿಂಚಿಲ್ಲ. ಬೇಸಿಗೆ ಕಾಲ ಇರುವುದರಿಂದ ಹಿನ್ನೀರು ಒಣಗಿರುವುದರಿಂದ ದೇವಸ್ಥಾನದ ಕುರುಹುಗಳು ಅಲ್ಲಲ್ಲಿ ಕಂಡು ಬರುತ್ತಿವೆ. ಇನ್ನು ಮುಂದಾದರೂ ಪುರಾತತ್ವ ಇಲಾಖೆಯವರು ಗಮನಹರಿಸಿ ಉತ್ಖನನ ಮಾಡಿದರೆ ಪಂಚ ಬಸದಿಗಳು ದೊರಕಬಹುದು ಮತ್ತು ಇದೂ ಒಂದು ಯಾತ್ರಸ್ಥಳವಾಗುವುದರಲ್ಲಿ ಸಂಶಯವಿಲ್ಲ.









ನಾನಾ ಸಮಸ್ಯೆ ಗೂಡಾಗಿದೆ ಮೈಸೂರು ಜಿಲ್ಲಾಸ್ಪತ್ರೆ



● ಕನಿಷ್ಠ ಮೂಲ ಸೌಕರ್ಯವೂ ಇಲ್ಲದೆ ಚಿಕಿತ್ಸೆ ನೀಡುವುದಾರೂ ಹೇಗೆ? ● ಕೊರೊನಾ ಮೂರು ಅಲೆಯಲ್ಲಿ 10 ಸಾವಿರಕ್ಕೂ ಅಧಿಕ ಮಂದಿಗೆ ಚಿಕಿತ್ಸೆ ನೀಡಿದೆ

● ಮೋಹನ್ ಕಾಯಕ

ಮೈಸೂರು, ಮಾ.28– ಸಾವಿರಾರು ಕೊರೊನಾ ಸೋಂಕಿತರಿಗೆ ಚಿಕಿತ್ಸೆ ನೀಡಿದ ಮೈಸೂರು ಜಿಲ್ಲಾಸ್ಪತ್ರೆ ಈಗ ನಾನಾ ಸಮಸ್ಯೆಗಳಿಂದ ಬಳಲುತ್ತಿದೆ.

ಮೈಸೂರಿನ ಕೆಆರ್‌ಎಸ್ ಮುಖ್ಯರಸ್ತೆ, ಮೇಟಗಳ್ಳಿಯ ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ಆವರಣದಲ್ಲಿರುವ ನೂತನ ಜಿಲ್ಲಾಸ್ಪತ್ರೆಗೆ ತುರ್ತು ಚಿಕಿತ್ಸೆ ಅಗತ್ಯವಿದೆ. ಸುಸಜ್ಜಿತ ಕಟ್ಟಡವನ್ನು ಹೊರತುಪಡಿಸಿ, ಅಗತ್ಯ ಪೀಠೋಪಕರಣ ಹಾಗೂ ವೈದ್ಯಕೀಯ ಸಲಕರಣೆಗಳಿಲ್ಲದ ಕಾರಣದಿಂದ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡಲಾಗದ ಅಸಹಾಯಕತೆಯಿಂದ ಕೊರಗುತ್ತಿದೆ.

ನೂತನ ಜಿಲ್ಲಾ ಆಸ್ಪತ್ರೆ ಕೊರೊನಾ ಕಾಲಘಟ್ಟದಲ್ಲಿ 'ಕೋವಿಡ್ ಆಸ್ಪತ್ರೆ' ಎಂದೇ ಗುರುತಿಸಿಕೊಂಡಿತ್ತು. ನಂತರದಲ್ಲಿ ತಾಯಿ ಮತ್ತು ಮಕ್ಕಳ ಚಿಕಿತ್ಸೆ, ಹೊರ ರೋಗಿಗಳ ಚಿಕಿತ್ಸೆ, ಮೂತ್ರ ಶಾಸ್ತ್ರ, ನರ ವಿಜ್ಞಾನ, ಕಿವಿ–ಮೂಗು–ಗಂಟಲು, ತೀವ್ರನಿಗಾ ಘಟಕ, ವಿಶೇಷ ವಾರ್ಡ್, ಸಾಮಾನ್ಯ ವಾರ್ಡ್, ಡಯಾಲಿಸಿಸ್, ದಂತ, ರಕ್ತ ನಿಧಿ ಕೇಂದ್ರ, ಪ್ರಯೋಗಾಲಯ, ಸುಟ್ಟ ಗಾಯದ ರೋಗಿಗಳಿಗೆ ಚಿಕಿತ್ಸೆ, ತುರ್ತು ಚಿಕಿತ್ಸೆ ಸೇರಿದಂತೆ ಎಲ್ಲಾ ರೀತಿಯ ಚಿಕಿತ್ಸಾ ಸೇವೆ ಆರಂಭಿಸಲಾಗಿದೆ. ಅಗತ್ಯ ವೈದ್ಯಕೀಯ ಸಲಕರಣೆಗಳು ಇನ್ನಿತರ ಸೌಲಭ್ಯಗಳ ಕೊರತೆ ನಡುವೆಯೂ ಜನರಿಗೆ ಆರೋಗ್ಯ ಸೇವೆ ನೀಡುವ ಪ್ರಯತ್ನ ಇಲ್ಲಿ ನಡೆದಿದೆ.

ಈ ಆಸ್ಪತ್ರೆ 75.32 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿದ್ದು, 250 ಹಾಸಿಗೆ ಸಾಮರ್ಥ್ಯ ಹೊಂದಿದೆ. ಬೇಸ್‌ಮೆಂಟ್, ನೆಲಮಹಡಿ ಹಾಗೂ 3 ಮಹಡಿ ಸೇರಿ ಒಟ್ಟು 20,969.30 ಚದರ ಮೀಟರ್ ವಿಸ್ತೀರ್ಣವಿದೆ. ಆದರೆ ವಿಸ್ತಾರ ಕಟ್ಟಡದಲ್ಲಿ ಅಗತ್ಯದಷ್ಟು ಕುರ್ಚಿ–ಬೆಂಚುಗಳೂ ಇಲ್ಲ. ವೈದ್ಯಕೀಯ ಸಲಕರಣೆಗಳು, ಯಂತ್ರೋಪಕರಣಗಳಂತೂ ಇಲ್ಲವೇ ಇಲ್ಲ. ಆಸ್ಪತ್ರೆ ಆವರಣವೆಲ್ಲಾ ಬರಿದಾಗಿರುವಂತೆ ಭಾಸವಾಗುತ್ತದೆ. 3 ಬೋರ್‌ವೆಲ್‌ಗಳು, 3.50 ಲಕ್ಷ ರೂ. ಲೀಟರ್ ಸಾಮರ್ಥ್ಯದ ನೀರು ಸರಬರಾಜು ಟ್ಯಾಂಕ್, 4 ಲಿಫ್ಟ್‌ಗಳು, ಕೇಂದ್ರೀಕೃತ ಆಕ್ಸಿಜನ್ ಪೈಪ್‌ಲೈನ್, ಅಗ್ನಿಶಾಮಕ ಉಪಕರಣಗಳು, ಉದ್ಯಾನವನ, 100 ಕಾರು ಹಾಗೂ 500 ದ್ವಿಚಕ್ರವಾಹನ ನಿಲುಗಡೆಗೆ ಸ್ಥಳಾವಕಾಶ, ಸುತ್ತಲೂ ಕಾಂಪೌಂಡ್, ಸೋಲಾರ್ ವಾಟರ್ ಹೀಟರ್‌ಗಳ ಸೌಲಭ್ಯವಿದೆ. ಆದರೆ ಯಂತ್ರೋಪಕರಣ, ವೈದ್ಯಕೀಯ ಉಪಕರಣಗಳ ಕೊರತೆ ಇನ್ನಿತರ ಸಮಸ್ಯೆಗಳಿರುವುದರಿಂದ ಇಲ್ಲಿಗೆ ಬರುವ ರೋಗಿಗಳ ಸಂಖ್ಯೆಯೂ ವಿರಳಾತಿವಿರಳವಾಗಿದೆ.

ಸಿಬ್ಬಂದಿ ಕೊರತೆ: 300ಕ್ಕೂ ಹೆಚ್ಚು ವೈದ್ಯಕೀಯ ಸಿಬ್ಬಂದಿ ಅಗತ್ಯವಿರುವ ಜಿಲ್ಲಾ ಆಸ್ಪತ್ರೆಯಲ್ಲಿ ಅರ್ಧಕ್ಕಿಂತಲೂ ಕಡಿಮೆ ವೈದ್ಯಕೀಯ ಸಿಬ್ಬಂದಿಗಳಿದ್ದಾರೆ. 27 ಮಂದಿ ತಜ್ಞ ವೈದ್ಯರು, 60 ಮಂದಿ ಶುಶ್ರೂಷಕಿಯರು, 35 ಮಂದಿ ಸ್ವಚ್ಛತಾ ಸಿಬ್ಬಂದಿ ಸೇವೆ ಸಲ್ಲಿಸುತ್ತಿದ್ದು, ರೋಗಿಗಳ ಸಂಖ್ಯೆ ಹೆಚ್ಚಾದರೆ ಸಮಸ್ಯೆ ಎದುರಾಗುತ್ತದೆ. ವೈದ್ಯಕೀಯ ಹಾಗೂ ವೈದ್ಯಕೀಯೇತರ ಸಿಬ್ಬಂದಿಗೆ ಕಾರ್ಯದೊತ್ತಡ ಅಧಿಕವಾಗುತ್ತದೆ ಎಂದು ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ.ಹೆಚ್.ಆರ್.ರಾಜೇಶ್ವರಿ ದೇವಿ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಸೆಕ್ಯೂರಿಟಿ ಗಾರ್ಡ್‌ಗಳಿಲ್ಲ: ವೈದ್ಯಕೀಯ ಸಿಬ್ಬಂದಿಗಳ ಕೊರತೆ ಜೊತೆಗೆ ಆಸ್ಪತ್ರೆಯೊಳಗೆ ಯಾರು ಬರುತ್ತಾರೆ, ಹೋಗುತ್ತಾರೆ ಎಂಬುದನ್ನು ಗಮನಿಸಲು ಸೆಕ್ಯೂರಿಟಿ ಗಾರ್ಡ್‌ಗಳಿಲ್ಲ. ರಾತ್ರಿ ವೇಳೆ ಯಾರ್ಯಾರೋ ಬಂದು–ಹೋಗುತ್ತಾರೆಂದು ರಾತ್ರಿ ವೇಳೆ ಕರ್ತವ್ಯ ನಿರ್ವಹಿಸುವ ವೈದ್ಯಕೀಯ ಸಿಬ್ಬಂದಿ ಹೇಳುತ್ತಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಸ್ವಂತ ಉಪಕರಣಗಳ ಬಳಕೆ: ರೋಗಿಗಳಿಗೆ ಅಗತ್ಯ ಚಿಕಿತ್ಸೆ ನೀಡಲು ತಜ್ಞ ವೈದ್ಯರು ತಮ್ಮ ಸ್ವಂತ ಉಪಕರಣಗಳು ಹಾಗೂ ಕೊರೊನಾ ಸಂದರ್ಭದಲ್ಲಿ ದಾನಿಗಳು ನೀಡಿದ ಉಪಕರಣಗಳನ್ನು ಬಳಕೆ ಮಾಡಿಕೊಂಡು ಸೇವೆ ನೀಡುತ್ತಿದ್ದೇವೆ. ಇನ್ನೂ ಸಾಕಷ್ಟು ವೈದ್ಯಕೀಯ ಸಲಕರಣೆಗಳು ಬೇಕಾಗಿದ್ದು, ಸರ್ಕಾರಕ್ಕೆ ಹಲವು ಬಾರಿ ಮನವಿಗಳನ್ನು ಮಾಡಿದ್ದೇವೆ. ಕೊರೊನಾ ಸಂದರ್ಭದಲ್ಲಿ ಬಂದ ಬೆಡ್‌ಗಳು ಇರುವದರಿಂದ ಎಲ್ಲಾ ವಾರ್ಡ್‌ಗಳಲ್ಲಿಯೂ ಬೆಡ್‌ಗಳಿಗೆ ಸಮಸ್ಯೆಯಿಲ್ಲ. ಆದರೆ ತಪಾಸಣೆಗಳಿಗೆ ಮುಖ್ಯವಾಗಿ ಬೇಕಾದ ಉಪಕರಣಗಳಿಲ್ಲ. ಇರುವ ಒಂದೆರಡು ಉಪ ಕರಣಗಳಲ್ಲಿಯೇ ಚಿಕಿತ್ಸೆ ನೀಡುವಂತಾಗಿದೆ ಎಂದು ಆಸ್ಪತ್ರೆಯ ಸ್ಥಿತಿಯನ್ನು ಎಳೆ ಎಳೆಯಾಗಿ ಬಿಚ್ಚಿಟ್ಟರು.

ಶವಾಗಾರ ನಿರ್ಮಾಣಕ್ಕೆ ವಿರೋಧ: ಆಸ್ಪತ್ರೆಯ ಆವರಣದಲ್ಲಿ ಶವಾಗಾರ ನಿರ್ಮಾಣ ಮಾಡುವುದಕ್ಕೆ ಅಕ್ಕ–ಪಕ್ಕದವರು ವಿರೋಧ ವ್ಯಕ್ತಪಡಿಸಿದ್ದರಿಂದ ಶವಾಗಾರ ನಿರ್ಮಾಣಕ್ಕೆ ತೊಡಕಾಗಿದೆ. ಆಸ್ಪತ್ರೆಯ ಸುತ್ತಲಿನ ಕಾಂಪೌಂಡ್ ಒಳಗಡೆಯೇ ಶವಾಗಾರ ನಿರ್ಮಾಣವಾಗಲಿದೆ. ಇದಕ್ಕೆ ನಿವಾಸಿಗಳಿಗೆ ಯಾವುದೇ ತೊಂದರೆ ಉಂಟುಮಾಡಬಾರದು. ಆರೋಗ್ಯ ಸೇವೆ ವಿಚಾರದಲ್ಲಿ ಎಲ್ಲರೂ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.



ವೈದ್ಯಕೀಯ ಸಲಕರಣೆಗಳು ತುರ್ತು ಬೇಕಾಗಿದೆ.

ನೂತನ ಜಿಲ್ಲಾ ಆಸ್ಪತ್ರೆಯಲ್ಲಿ ಕೊರೊನಾ ಮೂರು ಅಲೆಗಳ ಸಂದರ್ಭ ಸೇರಿ ಸುಮಾರು 10 ಸಾವಿರಕ್ಕೂ ಹೆಚ್ಚು ಸೋಂಕಿತರಿಗೆ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ್ದು, ಈಗ ಸೋಂಕಿತರಿಂದ ಆಸ್ಪತ್ರೆ ಮುಕ್ತವಾಗಿದೆ. ಇತರೆ ಸಾಮಾನ್ಯ ಚಿಕಿತ್ಸೆ ಆರಂಭವಾಗಿದ್ದು, ಸದ್ಯ ಆಸ್ಪತ್ರೆಯಲ್ಲಿ ಲಭ್ಯವಿರುವ ವೈದ್ಯಕೀಯ ಸಲಕರಣೆಗಳನ್ನು ಬಳಸಿಕೊಂಡು ಸೇವೆ ನೀಡುತ್ತಿದ್ದೇವೆ. ಆಸ್ಪತ್ರೆಯ ಸುತ್ತಲೂ ಹಸಿರು ವನ ನಿರ್ಮಾಣ ಮಾಡುತ್ತಿದ್ದು, ಆಸ್ಪತ್ರೆಗೆ ಬರುವ ರೋಗಿಗಳಿಗೆ ಉತ್ತಮ ಸೇವೆ ನೀಡುವ ಪ್ರಯತ್ನ ಮಾಡುತ್ತಿದ್ದೇವೆ. 0–18 ವರ್ಷ ವಯಸ್ಸಿನ ಮಕ್ಕಳಿನಲ್ಲಿ ಕಂಡು ಬರುವ ಕಾಯಿಲೆ, ಅಂಗವಿಕಲತೆ, ಅನುವಂಶೀಯ ಕಾಯಿಲೆ, ರಕ್ತಕ್ಕೆ ಸಂಬಂಧಿಸಿದ ಕಾಯಿಲೆಗಳನ್ನು ಶೀಘ್ರವಾಗಿ ಪತ್ತೆಹಚ್ಚಿ ಚಿಕಿತ್ಸೆ ನೀಡುವುದಕ್ಕಾಗಿ ಜಿಲ್ಲಾ ಮಧ್ಯಸ್ಥಿಕೆ(interventional) ಕೇಂದ್ರವನ್ನು ಸೂಕ್ತ ಸೌಲಭ್ಯಗಳೊಂದಿಗೆ ಆರಂಭಿಸಲಾಗುತ್ತಿದೆ. ತಂಬಾಕು ಮುಕ್ತ ವರ್ಜನ ಕೇಂದ್ರವಿದೆ ಆದರೆ ಈ ಎಲ್ಲಾ ಬಗೆಯ ಚಿಕಿತ್ಸಾ ಸೌಲಭ್ಯಗಳು ಪೂರ್ಣ ಪ್ರಮಾಣದಲ್ಲಿ ದೊರಕಬೇಕಾದರೆ ಅಗತ್ಯ ವೈದ್ಯಕೀಯ ಸಲಕರಣೆಗಳು, ಪೀಠೋಪಕರಣಗಳು ತುರ್ತು ಬೇಕಾಗಿದೆ.

- ಡಾ.ಹೆಚ್.ಆರ್.ರಾಜೇಶ್ವರಿ ದೇವಿ, ಜಿಲ್ಲಾ ಶಸ್ತ್ರಚಿಕಿತ್ಸಕರು

ಸ್ವಚ್ಛತೆಯಲ್ಲಿ ನಂ.1....

ಜಿಲ್ಲಾ ಆಸ್ಪತ್ರೆಯಲ್ಲಿ ಸ್ವಚ್ಛತೆಗೆ ಮೊದಲ ಆದ್ಯತೆ ನೀಡಲಾಗಿದೆ. ಆಸ್ಪತ್ರೆಯ ಒಳ–ಹೊರ ಆವರಣದಲ್ಲಿ ಕಸ ತ್ಯಾಜ್ಯ ಸಂಗ್ರಹವಾಗದಂತೆ ನೋಡಿಕೊಳ್ಳಲಾಗುತ್ತಿದೆ. ಆಸ್ಪತ್ರೆ ಎದುರು ವಿವಿಧ ಬಗೆಯ ಹೂ ಗಿಡಗಳನ್ನು ಬೆಳೆಸಲಾಗುತ್ತಿದ್ದು, ಆಸ್ಪತ್ರೆಗೆ ಹೊಸ ರೂಪ ನೀಡುವ ಪ್ರಯತ್ನ ಮಾಡಲಾಗುತ್ತಿದೆ. ಮೈಸೂರು ಮಹಾನಗರ ಪಾಲಿಕೆ ನಡೆಸಿದ ಸ್ವಚ್ಛ ಸರ್ವೇಕ್ಷಣೆಯಲ್ಲಿ ಆಸ್ಪತ್ರೆಗಳ ವಿಭಾಗದಲ್ಲಿ ಜಿಲ್ಲಾ ಆಸ್ಪತ್ರೆಗೆ ಮೊದಲ ಸ್ಥಾನ ಲಭಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮತ್ತೆ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ

ನವದೆಹಲಿ,ಮಾ.28–ಪಂಚರಾಜ್ಯ ಚುನಾವಣೆ ವೇಳೆ ಸ್ಥಗಿತಗೊಂಡಿದ್ದ ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಇದೀಗ ಮತ್ತೆ ನಿರಂತರವಾಗಿ ಮುಂದುವರೆದಿದ್ದು,



ಸೋಮವಾರ ಕೂಡ ಲೀಟರ್‌ಗೆ ಪೆಟ್ರೋಲ್ ದರ 30 ಪೈಸೆ ಮತ್ತು ಡೀಸೆಲ್ ದರ 35 ಪೈಸೆ ಏರಿಕೆ ಕಂಡಿದೆ. ಈ ಮೂಲಕ 7 ದಿನಗಳಲ್ಲಿ 6 ಬಾರಿ ಏರಿಕೆ ಕಂಡಿದೆ. 6 ದಿನದಲ್ಲಿ ಪೆಟ್ರೋಲ್ ರೂ.3.95, ಡೀಸೆಲ್ ರೂ.4.10 ಏರಿಕೆಯಾದಂತಾಗಿದೆ. 6 ಬಾರಿ ಏರಿಕೆ ಬಳಿಕ ದೆಹಲಿಯಲ್ಲಿ 1 ಲೀಟರ್ ಪೆಟ್ರೋಲ್ ದರ ರೂ. 99.41 ರೂಪಾಯಿ, ಲೀಟರ್ ಡೀಸೆಲ್ ಬೆಲೆ 90.44 ರೂಪಾಯಿಗೆ ತಲುಪಿದೆ. ಮುಂಬೈನಲ್ಲಿ ಲೀಟರ್ ಪೆಟ್ರೋಲ್ ಬೆಲೆ 31 ಪೈಸೆ ಹೆಚ್ಚಳ ಮಾಡಲಾಗಿದ್ದು, ಲೀಟರ್ ಡೀಸೆಲ್ ಬೆಲೆ 37 ಪೈಸೆ ಹೆಚ್ಚಳವಾಗಿದೆ. ಅದರ ಅನ್ವಯ ಮುಂಬೈನಲ್ಲಿ ಲೀಟರ್ ಪೆಟ್ರೋಲ್ 114.19 ರೂಪಾಯಿ ಹಾಗೂ ಡೀಸೆಲ್ 98.50 ರೂಪಾಯಿ ಆಗಿದೆ. ಬೆಂಗಳೂರಿನಲ್ಲಿ ಲೀಟರ್ ಇಂದು ಪೆಟ್ರೋಲ್ 32 ಪೈಸೆ ಏರಿಕೆ, ಲೀಟರ್ ಡೀಸೆಲ್ 35 ಪೈಸೆ ಏರಿಕೆ ಆಗಿದೆ. ಅದರಂತೆ, ಲೀಟರ್ ಪೆಟ್ರೋಲ್ ದರ 104.78 ರೂಪಾಯಿ ಹಾಗೂ ಲೀಟರ್ ಡೀಸೆಲ್ ದರ 89.02 ರೂಪಾಯಿ ದಾಖಲಾಗಿದೆ. ಅದೇ ರೀತಿ ಚೆನ್ನೈನಲ್ಲಿ ಲೀಟರ್ ಪೆಟ್ರೋಲ್ ದರ 105.18 ರೂಪಾಯಿ ಹಾಗೂ ಲೀಟರ್ ಡೀಸೆಲ್ ದರ 95.33 ರೂಪಾಯಿ ಇದೆ. ಕೋಲ್ಕತ್ತಾದಲ್ಲಿ ಲೀಟರ್ ಪೆಟ್ರೋಲ್, ಡೀಸೆಲ್ ಬೆಲೆ ಕ್ರಮವಾಗಿ 108.85 ಮತ್ತು 93.92 ರೂಪಾಯಿ ದಾಖಲಾಗಿದೆ.

ಮೂರನೇ ಪುಟದಿಂದ

ಮೊದಲ ದಿನದ ಪರೀಕ್ಷೆ



ಎಚ್ಚರ ವಹಿಸಲಾಗಿದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರತೀ ಕೇಂದ್ರದಲ್ಲೂ ಹೆಲ್ಪ್ ಡೆಸ್ಕ್ ಸ್ಥಾಪಿಸಿ, ಕೊಠಡಿ ಸಂಖ್ಯೆ, ನೋಂದಣಿ ಸಂಖ್ಯೆ ಯಾವ ಕೊಠಡಿಯಲ್ಲಿದೆ ಎಂಬಿತ್ಯಾದಿ ಮಾಹಿತಿ ನೀಡಲಾಗುತ್ತಿದೆಯ ಲ್ಲದೇ, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಲು ವ್ಯವಸ್ಥೆ ಮಾಡಲಾಗಿತ್ತು. ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇಅರಸ್ ಸೋಮವಾರ ಹಲವು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬೆಳಗ್ಗೆ 10.30ರಿಂದ 12.45ಗಂಟೆವರೆಗೆ ನಡೆದ ಪ್ರಥಮ ಭಾಷೆ ಪರೀಕ್ಷೆಯು ಯಾವುದೇ ಗೊಂದಲ, ಸಮಸ್ಯೆಗಳಿಲ್ಲದೇ ಶಾಂತಯುತವಾಗಿ ಮುಕ್ತಾಯಗೊಂಡಿದ್ದು, ವಿದ್ಯಾರ್ಥಿಗಳು ಸಂತೋಷದಿಂದ ಪರೀಕ್ಷೆ ಬರೆದು ಮನೆಗೆ ಮರಳಿದರು ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಶೌಚಾಲಯ, ಕುಡಿಯುವ ನೀರು, ಆರೋಗ್ಯ ಸೌಲಭ್ಯಗಳನ್ನು ಪರೀಕ್ಷಾ ಕೇಂದ್ರದಲ್ಲಿ ಒದಗಿಸಲಾಗಿದ್ದು, ಮಕ್ಕಳು ಗೊಂದಲವಿಲ್ಲದೇ ಪರೀಕ್ಷೆ ಬರೆಯುವಂತೆ ಶಿಕ್ಷಕರು ಧೈರ್ಯ ಹೇಳಿ, ಅವರಿಗೆ ಅಗತ್ಯವಿರುವ ಮಾಹಿತಿಗಳನ್ನು ನೀಡಲಾಯಿತು. ತಿ.ನರಸೀಪುರ ವಿದ್ಯೋದಯ ಶಿಕ್ಷಣ ಸಂಸ್ಥೆ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿನಿಯೊಬ್ಬಳು ತೀವ್ರ ಹೃದಯಾಘಾತದಿಂದ ಕುಸಿದು ಸಾವನ್ನಪ್ಪಿರುವುದನ್ನು ಹೊರತುಪಡಿಸಿದರೆ, ಉಳಿದಂತೆ ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಯಾವುದೇ ಅಹಿತಕರ ಘಟನೆ ನಡೆದ ಬಗ್ಗೆ ವರದಿಯಾಗಿಲ್ಲ ಎಂದು ರಾಮಚಂದ್ರರಾಜೇ ಅರಸ್ ತಿಳಿಸಿದ್ದಾರೆ. ಪರೀಕ್ಷೆಗೆ ಸಂಬಂಧಿಸಿದ ಯಾವುದೇ ಮಾಹಿತಿ ಹಾಗೂ ಸಹಾಯ ಪಡೆಯಲು ಹೆಲ್ಪ್‌ಲೈನ್ ಸ್ಥಾಪಿಸಲಾಗಿದ್ದು, 080–23310075/76 ಅನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ವಿದ್ಯಾರ್ಥಿನಿ ಸಾವು

ಇದನ್ನು ಗಮನಿಸಿದ ಪರೀಕ್ಷಾ ಮೇಲ್ವಿಚಾರಕರು ಆಕೆಗೆ ಮನವರಿಕೆ ಮಾಡಿ ಪಕ್ಕದ ಸೆಂಟರ್‌ಗೆ ಕರೆದೊಯ್ಯುತ್ತಿದ್ದ ಸಂದರ್ಭ ಶಾಲೆಯ ಮೆಟ್ಟಿಲನ್ನು ಹತ್ತುವ ವೇಳೆ ಕುಸಿದು ಬಿದ್ದಳೆನ್ನಲಾಗಿದೆ. ಕೂಡಲೇ ಆಕೆಯನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಯಿತಾದರೂ ಆಕೆ ಅಷ್ಟರಲ್ಲಾಗಲೇ ಮೃತಪಟ್ಟಿದ್ದಳೆಂದು ವೈದ್ಯರು ದೃಢೀಕರಿಸಿದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಮರಿಸ್ವಾಮಿ, ಡಿಡಿಪಿಐ ರಾಮಚಂದ್ರರಾಜೇ ಅರಸ್, ಸರ್ಕಲ್ ಇನ್ಸ್‌ಪೆಕ್ಟರ್ ಕೃಷ್ಣಪ್ಪ ಮತ್ತಿತರರು ಪರಿಶೀಲಿಸಿದರು.

ಶಾಸಕ ಭೇಟಿ: ಪಟ್ಟಣದ ವಿದ್ಯೋದಯ ಕಾಲೇಜಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ಬಂದ ವಿದ್ಯಾರ್ಥಿನಿ ಅನುಶ್ರೀ ಕುಸಿದು ಬಿದ್ದು ಸಾವನ್ನಪ್ಪಿದ ವಿಷಯ ತಿಳಿದ ಶಾಸಕ ಅಶ್ವಿನ್‌ಕುಮಾರ್ ಪಟ್ಟಣದ ತಾಲೂಕು ಆಸ್ಪತ್ರೆಗೆ ತೆರಳಿ ವಿದ್ಯಾರ್ಥಿನಿ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು, ವಿದ್ಯಾರ್ಥಿನಿಯ ಪೋಷಕರಿಗೆ ಸಾಂತ್ವನ ಹೇಳಿದರು.

ದಶಪಥ ರಸ್ತೆ ಸಂಚಾರಕ್ಕೆ ಮುಕ್ತ

ಭ್ರಷ್ಟಾಚಾರ ರಹಿತ, ಪಾರದರ್ಶಕ ಹಾಗೂ ಕಾಲಮಿತಿಯೊಳಗೆ ಮೂಲಸೌಕರ್ಯ ಇಲಾಖೆ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದೆ. ನೂರಾ ಹದಿನೇಳು ಕಿಲೋ ಮೀಟರ್ ಉದ್ದದ ಬೆಂಗಳೂರು–ಮೈಸೂರು ದಶಪಥ ರಸ್ತೆಯ ನಿರ್ಮಾಣ ಕಾಮಗಾರಿ



ನಿರ್ದಿಷ್ಟ ವೇಗದಲ್ಲಿ ಸಾಗುತ್ತಿದ್ದು, ರಸ್ತೆ ಪೂರ್ಣಗೊಂಡ ನಂತರ 90 ನಿಮಿಷಗಳಲ್ಲಿ ಈ ಅಂತರವನ್ನು ಕ್ರಮಿಸಬಹುದಾಗಿದೆ. ಈ ಯೋಜನೆಯಡಿ 8 ಕಿಲೋ ಮೀಟರ್ ಉದ್ದದ ಮೇಲು ಸೇತುವೆ ಹಾಗೂ 9 ಪ್ರಮುಖ ಸೇತುವೆ ಗಳು, 42 ಸಣ್ಣ ಸೇತುವೆಗಳು, 64 ಅಂಡರ್‌ಪಾಸ್‌ಗಳು, 11 ಓವರ್‌ಪಾಸ್‌ಗಳು, 4 ಆರ್‌ಓಬಿಗಳು ಮತ್ತು 5 ಬೈಪಾಸ್‌ಗಳನ್ನು ನಿರ್ಮಿಸಲಾಗುತ್ತಿದೆ. ಈ ಮೂಲಸೌಕರ್ಯ ಗಳಿಂದ ಸಂಚಾರ ದಟ್ಟಣೆ ಇಲ್ಲದೆ ವಾಹನಗಳು ಸುಗಮವಾಗಿ ಸಾಗಲು ಅವಕಾಶ ಆಗುವುದಲ್ಲದೆ, ಈ ಯೋಜನೆ ಪರಿಸರ ಸ್ನೇಹಿಯೂ ಆಗಿರುತ್ತದೆ ಎಂದು ತಿಳಿಸಿದ್ದಾರೆ. ಪ್ರಧಾನಿ ಮೋದಿ ನೇತೃತ್ವದಲ್ಲಿ ದೇಶ ಪ್ರಗತಿಪಥದಲ್ಲಿ ಸಾಗುತ್ತಿದ್ದು ಬೆಂಗಳೂರು–ಮೈಸೂರು ದಶಪಥ ರಸ್ತೆ ಸಹ ಪ್ರಗತಿಯ ಸಂಕೇತವಾಗಿದೆ ಎಂದು ನಿತಿನ್ ಗಡ್ಕರಿ ಬಣ್ಣಿಸಿದ್ದಾರೆ.

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಬೋಗಾದಿ
web:www.bogaditown.mrc.gov.in, e-mail:itstaff_ulb_bogadi@yahoo.com
ಬೋಗಾದಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ

ಸಾರ್ವಜನಿಕ ಪ್ರಕಟಣೆ

ಕೆರೆಗಳ ಮೀನು ಪಾಶುವಾರು ಹಕ್ಕಿನ ಬಹಿರಂಗ ಹರಾಜು

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಮೈಸೂರು ಜಿಲ್ಲೆ, ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಕೆರೆ ಮೀನು ಪಾಶುವಾರು ಹಕ್ಕನ್ನು ಪಟ್ಟಣ ಪಂಚಾಯಿತಿ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 29.03.2022 ರಂದು ಬೆಳಗ್ಗೆ 11.00 ಗಂಟೆಗೆ ಮೂರು ವರ್ಷಗಳ ಅವಧಿಗೆ ಹರಾಜು ಮೂಲಕ ವಿಲೇವಾರಿ ಮಾಡಲು ದಿನಾಂಕ ನಿಗಧಿಪಡಿಸಲಾಗಿತ್ತು. ಕಾರಣಾಂತರಗಳಿಂದ ಸದರಿ ಹರಾಜನ್ನು ದಿ: 30.03.2022ರ ಬೆಳಗ್ಗೆ 11:00 ಗಂಟೆಗೆ ಮುಂದೂಡಲಾಗಿದೆ ಸಾರ್ವಜನಿಕರು ಸಹಕರಿಸಬೇಕಾಗಿ ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಬೋಗಾದಿ ಪಟ್ಟಣ ಪಂಚಾಯಿತಿ ಕಛೇರಿ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು. (ದೂ.0821–2331099)

ಸಹಿ/– **ಡಿ.ಎನ್. ವಿಜಯಕುಮಾರ್,** ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ ಬೋಗಾದಿ

ಸಾರ್ವಜನಿಕರ ಗಮನಕ್ಕಾಗಿ

ನನ್ನ ಕಕ್ಷಿದಾರರಾದ ಶ್ರೀ ಶಿವಕುಮಾರ್ ಬಿನ್ ಲೇಟ್ ವೆಂಕಟಾಚಲ, ಸುಮಾರು 52 ವರ್ಷದ ವಯಸ್ಸಿನ ಸಿ.ಹೆಚ್.1100, ದೇವಪಾರ್ಥೀವ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು ನಗರದಲ್ಲಿ ವಾಸವಾಗಿರುವ ರವರ ಇರಾದೆಯ ಮೇರೆಗೆ,

ಏನೆಂದರೆ, ಮೇಲ್ಕಂಡ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರು ಸಿಟಿ, ಸಿದ್ಧಾರ್ಥ ನಗರ ಬಡಾವಣೆ, ಎರಡನೇ ಹಂತ, 439/ಎ ನೇ ನಂಬರ್ ಮನೆಯಲ್ಲಿರುವ ಶ್ರೀ ಆರ್ ಲಕ್ಷ್ಮಣ್ ರವರ ಮಗ ಶ್ರೀ ಎಲ್ ಶಿವಣ್ಣ ರವರು ವಯಸ್ಸು ಸುಮಾರು 58 ವರ್ಷ ಹಾಗೂ ಸದರಿ ಎಲ್ ಶಿವಣ್ಣ ನವರ ಧರ್ಮಪತ್ನಿ ಸುಮಾರು 50 ವರ್ಷದ ಶ್ರೀಮತಿ ಪಾರ್ವತಿ ಹಾಗೂ ಸದರಿ ಎಲ್ ಶಿವಣ್ಣನವರ ಮಗ ಸುಮಾರು 30 ವರ್ಷದ ಎಸ್.ವಿಷ್ಣುಕುಮಾರ್ ಹಾಗೂ ಸದರಿ ಎಲ್ ಶಿವಣ್ಣ ನವರ ಮಗ ಸುಮಾರು 26 ವರ್ಷದ ಎಸ್. ಶಿವಪ್ರಸಾದ್, ರವರಿಗೂ, ನನ್ನ ಕಕ್ಷಿದಾರರಿಗೂ ಕೆಳಕಂಡ ಜಮೀನಿನ ಸಂಬಂಧ ದಿನಾಂಕ: 14/3/2022 ರ ನೋಂದಾಯಿತ ಕ್ರಯದ ಕರಾರಿನ ಮೂಲಕ ಒಡಂಬಡಿಕೆಯಾಗಿದ್ದು, ಸದರಿ ಜಮೀನನ್ನು ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು, ಮೇಲ್ಕಂಡ ಮಾಲೀಕರು ಸಹ ಕ್ರಯಪತ್ರ ಬರೆದುಕೊಡಲು ಸಿದ್ದರಿದ್ದು, ಸದರಿ ಜಮೀನಿನ ಸಂಬಂಧ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇದ್ದಲ್ಲಿ ಸಂಬಂಧ ಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 7 ದಿವಸದೊಳಗಾಗಿ ನನ್ನ ಕಕ್ಷಿದಾರರಿಗಾಗಲೀ, ನನಗಾಗಲೀ ಲಿಖಿತವಾಗಿ ಸಂಬಂಧ ಪಟ್ಟ ದಾಖಲಾತಿಗಳೊಡನೆ ನನ್ನ ಕೆಳಕಂಡ ವಿಳಾಸದ ಕಛೇರಿಯ ಸಮಯದಲ್ಲಿ ಹಾಜರಾಗಿ ತಮ್ಮ ಅಹವಾಲು ಹಾಗೂ ತಕರಾರನ್ನು ಸಲ್ಲಿಸತಕ್ಕದ್ದು. ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಕೆಳಕಂಡ ಜಮೀನಿನ ಸಂಬಂಧಪಟ್ಟ ಹಾಗೆ ನೋಂದಣಿ ಕ್ರಯಪತ್ರವನ್ನು ಪಡೆದುಕೊಂಡು ಮುಂದುವರೆಯಲು ಇಚ್ಚಿಸಿದ್ದು ಸದರಿ ಜಮೀನಿನ ಸಂಬಂಧ ಮುಂದೆ ಯಾವುದೇ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 43 (ಹೊಸ ಸರ್ವೆ ನಂ.43/1) ರಲ್ಲಿ ವಿಸ್ತೀರ್ಣ 1 ಎಕರೆ 17 ಗುಂಟೆ (ಒಂದು ಎಕರೆ ಹದಿನೇಳು ಗುಂಟೆ) ಸದರಿ ಜಮೀನು ವ್ಯವಸಾಯೇತರ ಜಮೀನಾಗಿ ಪರಿವರ್ತನೆಗೊಂಡಿದ್ದು, ಸದರಿ ಜಮೀನಿಗೆ ಚೆಕ್ ಬಂದಿ:– ಪೂರ್ವಕ್ಕೆ: ಸರ್ವೆ ನಂ.41 ಇಬ್ರಾಹಿಂ ಅವರ ಸ್ವತ್ತು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ : ಸರ್ವೆ ನಂ.43/2– ರೋಹಿಣಿರವರ ಜಮೀನು, ದಕ್ಷಿಣಕ್ಕೆ : ಸರ್ವೆ ನಂ. 43/3– ಆನಂದರವರ ಜಮೀನು.

Sd/- Palaksha, B.Sc, LL.B
Advocate, Enroll No.: KAR1146/98
Chamber : No.645, 1st Floor, Narayana Shastry Road, Behind Sitavilas Choultry, Mysore - 570024
Date: 22-03-2022

ನೈಋತ್ಯ ರೈಲ್ವೆ

ನಿರ್ಮಾಣ ಸಂಸ್ಥೆ

ನಿವರ್ಮಾಣ ಸಂಸ್ಥೆ, ನೈರುತ್ಯ ರೈಲ್ವೇಯು ಕಂದಾಯ/ಅರಣ್ಯ ಇಲಾಖೆಗಳಿಂದ ಕಂದಾಯ ನಿರೀಕ್ಷಕರಾಗಿ ಅಥವಾ ಸಮಾನವಾಗಿ ನಿವೃತ್ತಿ ಹೊಂದಿದವರುಅರ್ಹ ನಿವೃತ್ತ ರಾಜ್ಯ ಸರ್ಕಾರಿ ನೌಕರರಿಂದ ಅಥವಾ ಸಮಾನವಾದ ಅಥವಾ ಕರ್ನಾಟಕ ರಾಜ್ಯ ಸರ್ಕಾರದ ಪೇ ಬ್ಯಾಂಡ್ 27650–52650, 30350–58250 ರಲ್ಲಿ ವೇತನ ಶ್ರೇಣಿ ಹೊಂದಿದ್ದ ಅಥವಾ 7ನೇ ಸಿಪಿಸಿ ಯ ಪೇ ಲೆವೆಲ್–7 ಅಥವಾ ತತ್ಸಮಾನದಲ್ಲಿ ನಿಯಮಿತ ಗ್ರೂಪ್ 'ಸಿ' ಪೋಸ್ಟ್ ಹೊಂದಿದ್ದವರಿಂದ ಭೂ ಸ್ವಾಧೀನ ಅಸೋಸಿಯೇಟ್ ಆಗಿ ಗುತ್ತಿಗೆ ಆಧಾರದ ಮೇಲೆ ಮರು–ತೊಡಗಿಸಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸುತ್ತದೆ.

ಒಟ್ಟು ಅವಶ್ಯಕತೆ ಇರುವ ಹುದ್ದೆಗಳ ಸಂಖ್ಯೆ 10.

ಒಂದೇ ಮತ್ತು ಸ್ಪಷ್ಟವಾದ ಪಿಡಿಎಫ್ ಫೈಲ್‌ನಲ್ಲಿ ಇಮೇಲ್ recruitment.cnswr@gmail.com ಮೂಲಕ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 11/04/2022 ಆಗಿರುತ್ತದೆ.

ಹೆಚ್ಚಿನ ಸೂಚನೆಗಳು/ಅಧಿಸೂಚನೆ/ಇತರೆ ವಿವರಗಳಿಗಾಗಿ ದಯವಿಟ್ಟು www.swr.indianrailways.gov.in -> About Us -> Construction Organisation -> Recruitment ಗೆ ಭೇಟಿ ನೀಡಿ.

ಉಪ ಮುಖ್ಯ ಸಿಬ್ಬಂದಿ ಅಧಿಕಾರಿ / ನಿರ್ಮಾಣ
ಬೆಂಗಳೂರು ಕಂಟೋನ್ಮೆಂಟ್

PUB/487/AAV/PRB/SWR/2021-22

S.W.Railways SWRRLY SWRRLY

ಮೈಸೂರು ಮಿತ್ರ
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

ಮಹದೇಶ್ವರಬೆಟ್ಟದಲ್ಲಿ ಕಂಗೊಳಿಸುವ ಕಾಲದಲ್ಲಿ ಕಾಲವಾದ ಬಿದಿರು!

● ಅರಣ್ಯ ಪ್ರದೇಶದುದ್ದಕ್ಕೂ 50 ವರ್ಷಗಳಿಂದ ವನ್ಯಜೀವಿಗಳಿಗೆ ಸಮೃದ್ಧ ಆಹಾರವಾಗಿತ್ತು
● ವನ್ಯ ಸಂಪತ್ತಿಗೆ ಮರುಜೀವ ನೀಡಲು ಬಿದಿರು ಬೀಜ ಬಿತ್ತನೆಗೆ ಅರಣ್ಯ ಇಲಾಖೆ ಕ್ರಮ

ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು,ಮಾ.28– ರಾಜ್ಯದ ಆರನೇ, ಚಾಮರಾಜನಗರದ ಮೂರನೇ ಹುಲಿ ಸಂರಕ್ಷಿತ ಪ್ರದೇಶವೆಂಬ ಕೀರ್ತಿಗೆ ಪಾತ್ರವಾಗಲು ಸನಿಹದಲ್ಲಿರುವ ಮಲೆ ಮಹದೇಶ್ವರ ಬೆಟ್ಟ ವನ್ಯಧಾಮದಲ್ಲಿ ಹುಲುಸಾಗಿ ಬೆಳೆದು ನಿಂತಿದ್ದ ಸಾವಿರಾರು ಬಿದಿರು ಗುತ್ತಿ (ಮೆಳೆ) ಸುದೀರ್ಘ ಕಾಲಾನಂತರ ಹೂವು ಬಿಟ್ಟು, ಒಣಗಲಾರಂಭಿಸಿದ್ದು, ಅದಕ್ಕೆ ಪರ್ಯಾಯವಾಗಿ ಅರಣ್ಯ ಪ್ರದೇಶದಲ್ಲಿ ಒಂದು ಟನ್ ಬಿದಿರು ಬೀಜ ಬಿತ್ತನೆ ಮಾಡಲು ಅರಣ್ಯ ಇಲಾಖೆ ಸಜ್ಜಾಗಿದೆ.

ಬಿದಿರು ಬೆಳೆಯಲ್ಲಿ ಹಲವು ವಿಧಗಳಿದ್ದು, ಕೆಲವು ತಳಿ 45 ವರ್ಷಕ್ಕೆ, ಮತ್ತಷ್ಟು 50 ವರ್ಷ, ಇನ್ನಷ್ಟು 60 ವರ್ಷದ ಬಳಿಕ ಹೂವು ಬಿಟ್ಟು ಸಾಯುತ್ತವೆ. ಮಲೆ ಮಹದೇಶ್ವರ ವನ್ಯಧಾಮಕ್ಕೆ ಸೇರಿದ ಪ್ರದೇಶದಲ್ಲಿ 45 ವರ್ಷಗಳ ಹಿಂದೆ ಬಿತ್ತಿದ್ದ ಬಿದಿರು, ಇದೀಗ ಒಂದೇ ಬಾರಿಗೆ ಹೂವು ಬಿಟ್ಟು ಸಾಯಲಾರಂಭಿಸಿದೆ. ಜೀವಿತಾವಧಿಯಲ್ಲಿ ನೂರಾರು ಆನೆಗಳಿಗೆ ಆಹಾರವಾಗಿದ್ದ ಬಿದಿರು ಒಮ್ಮೆಲೆ ಒಣಗಲಾರಂಭಿಸಿರುವುದು ಅರಣ್ಯ ಇಲಾಖೆ ಜವಾಬ್ದಾರಿಯೊಂದನ್ನು ಹೆಚ್ಚಿಸಿದೆ. ಬಿದಿರು ಹೂವು ಬಿಟ್ಟು, ಒಣಗುವುದು ಸಹಜ ಪ್ರಕ್ರಿಯೆಯಾಗಿದ್ದರೂ, ಅರಣ್ಯ ಪ್ರದೇಶದಲ್ಲಿ ವನ ಸಂಪತ್ತು ಸಂಪದ್ಭರಿತಗೊಳಿಸಲು ಅರಣ್ಯ ಇಲಾಖೆ ಮುಂದಾಗುತ್ತಿದೆ.

ಭವಿಷ್ಯದ ಹುಲಿ ಸಂರಕ್ಷಿತ ಪ್ರದೇಶ: ರಾಜ್ಯದ ನೂತನ ಹುಲಿ ಸಂರಕ್ಷಿತ ಪ್ರದೇಶ ಎಂಬ ಹೆಗ್ಗಳಿಕೆಯ ಮಲೆ ಮಹದೇಶ್ವರ ವನ್ಯಧಾಮಕ್ಕೆ ಒಂದೇ ಒಂದು ಮೆಟ್ಟಿಲು ಮಾತ್ರ ಇದೆ. ಈಗಾಗಲೇ ಹುಲಿ ಸಂರಕ್ಷಿತ ಪ್ರದೇಶ ಘೋಷಣೆಗೆ ಪೂರಕವಾದ ಎಲ್ಲಾ ದಾಖಲೆಗಳನ್ನು ಸಲ್ಲಿಸಲಾಗಿದ್ದು, ಅರಣ್ಯ ಇಲಾಖೆಯೂ ಸಮ್ಮತಿಸಿದೆ. ಇದರಿಂದಾಗಿ ವಿಧಾನಸಭೆ ಅಧಿವೇಶನದಲ್ಲಿ ಪ್ರಸ್ತಾಪಿಸಿ, ಅಂಕಿತ ಹಾಕುವುದೊಂದೇ ಬಾಕಿಯಿದ್ದು, ರಾಜ್ಯದಲ್ಲಿ ಕಳೆದ ಎರಡು ತಿಂಗಳಿಂದ ನಡೆದ ಕೆಲವು ವಿವಾದದ ವಿಸ್ತೃತ ಚರ್ಚೆ ನಡೆಯುತ್ತಿರುವುದರಿಂದ ಹುಲಿ ಸಂರಕ್ಷಿತ ಪ್ರದೇಶ ಘೋಷಣೆ ಪ್ರಕ್ರಿಯೆಗೆ ಅಡಚಣೆಯಾಗಿದೆ. ಈ ಅಧಿವೇಶನದಲ್ಲಿ ಘೋಷಣೆಯಾಗದಿದ್ದರೆ, ಮುಂದಿನ ಅಧಿವೇಶನದಲ್ಲಾದರೂ ಮಲೆ ಮಹದೇಶ್ವರ ಬೆಟ್ಟ ವನ್ಯಧಾಮವನ್ನು ಹುಲಿ ಯೋಜನೆ ವ್ಯಾಪ್ತಿಗೆ ತರಲಾಗುತ್ತದೆ ಎಂಬ ವಿಶ್ವಾಸ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳಲ್ಲಿದೆ.



ಮಲೆ ಮಹದೇಶ್ವರ ಬೆಟ್ಟ ಹಾಗೂ ನಾಗಮಲೆಯ ರಸ್ತೆಯಲ್ಲಿ ಹೂವು ಬಿಟ್ಟು, ಒಣಗುತ್ತಿರುವ ಬಿದಿರು ಗುತ್ತಿ

ಚಿಗುರೊಡೆಯುವ ಕಾಲದಲ್ಲಿ ಒಣಗುತ್ತಿವೆ: ವಸಂತ ಮಾಸದ ಆಗಮನಕ್ಕೆ ಒಂದೇ ವಾರ ಬಾಕಿ ಇದೆ. ಈಗಾಗಲೇ ಮಲೆ ಮಹದೇಶ್ವರ ಬೆಟ್ಟದ ಸುತ್ತಮುತ್ತಲಿನ ಪ್ರದೇಶದಲ್ಲಿ 3ರಿಂದ 4 ಬಾರಿ ಮಳೆಯಾಗಿರುವುದರಿಂದ ಬೇಸಿಗೆಯಲ್ಲಿ ಒಣಗಿದ್ದ ಮರಗಳು ಚಿಗುರೊಡೆಯಲಾರಂಭಿಸಿವೆ. ಇಂತಹ ಸಂದರ್ಭದಲ್ಲಿ ಬಿದಿರು ಗುತ್ತಿಗಳು ಒಣಗುತ್ತಿರುವುದು ಪ್ರಕೃತಿ ವೈಶಿಷ್ಟ್ಯತೆಯ ಸಂಕೇತವಾಗಿದೆ. ಒಣಗುವ ಬಿದಿರು ಗುತ್ತಿಗಳನ್ನು ಮರೆಮಾಚಲು ಇನ್ನೊಂದು ವಾರದಲ್ಲಿ ಇತರೆ ಮರಗಳ ತುಂಬ ಹಸಿರುವ ಆವರಿಸುವುದರಿಂದ ಮೇಲ್ನೋಟಕ್ಕೆ ಒಣಗಿದ ಬಿದಿರು ಕಾಣದಂತಾಗುತ್ತದೆ.

ಬಿದಿರು ಬೀಜ ಬಿತ್ತನೆ: ಮಲೆ ಮಹದೇಶ್ವರ ಬೆಟ್ಟದ ತಾಳುಬೆಟ್ಟದಿಂದ ಪಾಲಾರ್‌ವರೆಗೆ, ನಾಗಮಲೆ ರಸ್ತೆಯುದ್ದಕ್ಕೂ ಬೆಳೆದಿದ್ದ ಬಿದಿರು ಹೂವು ಬಿಟ್ಟು ಒಣಗಲಾರಂಭಿಸಿವೆ. ಇದರಿಂದ ಬಿದಿರಿನ ಕೆಳಗೆ ಬಿದಿರಕ್ಕಿ ರಾಶಿಯೇ ಇದೆ. ಈ ಹಿಂದೆ ಬುಡಕಟ್ಟು ಜನರು ಬಿದಿರು ಹೂವು ಬಿಡುವ ಸಮಯದಲ್ಲಿ ಬಿದಿರಕ್ಕಿ ಸಂಗ್ರಹಿಸುತ್ತಿದ್ದರು. ಆದರೆ ಇದೀಗ ವನ್ಯಜೀವಿ ಸಂರಕ್ಷಣಾ ಕಾಯ್ದೆ ನಿಯಮಗಳು ಕಟ್ಟುನಿಟ್ಟಾಗಿರುವುದರಿಂದ ಸಂರಕ್ಷಿತಾರಣ್ಯದಿಂದ ಏನನ್ನೂ ಸಂಗ್ರಹಿಸಲು ಅವಕಾಶ ಇಲ್ಲದ ಕಾರಣ ಬಿದಿರಕ್ಕಿ ಸಂಗ್ರಹಕ್ಕೆ ನಿರ್ಬಂಧವಿದೆ. ಈ ನಡುವೆ ಸ್ಥಳೀಯ ಅರಣ್ಯ ಪ್ರದೇಶ ವ್ಯಾಪ್ತಿಯ ವಾತಾವರಣಕ್ಕೆ ಹೊಂದಿಕೊಳ್ಳುವುದರಿಂದ ಬಿದಿರು ಗುತ್ತಿ ಕೆಳಗೆ ಬಿದ್ದಿದ್ದ ಬಿದಿರಕ್ಕಿಯನ್ನು ಅರಣ್ಯ ಇಲಾಖೆ ಸಿಬ್ಬಂದಿಯಿಂದಲೇ ಸಂಗ್ರಹಿಸಲಾಗಿದೆ. ಸಾವಿರ ಕೆಜಿಯಷ್ಟು ಬಿದಿರು ಬಿತ್ತನೆ ಬೀಜವನ್ನು ಸಂಗ್ರಹಿಸಲಾಗಿತ್ತು. ಮಳೆಗಾಲ ಆರಂಭವಾದೊಡನೆ ಅರಣ್ಯ ಪ್ರದೇಶದಲ್ಲಿ ಚೆಲ್ಲಲಾಗುತ್ತದೆ. ಇದರಿಂದ ಮುಂಬರುವ ದಿನಗಳಲ್ಲಿ ಮಲೆ ಮಹದೇಶ್ವರ ಬೆಟ್ಟದ ವನ್ಯಧಾಮ ಬಿದಿರಿನಿಂದ ಕಂಗೊಳಿಸಲು ನೆರವಾಗಲಿದೆ.

23ರಿಂದ 25 ಹುಲಿ, 500ಕ್ಕೂ ಆನೆಗಳಿವೆ: ಮಲೆ ಮಹದೇಶ್ವರ ಬೆಟ್ಟ ವನ್ಯಧಾಮವೂ 920 ಚ.ಕಿ.ಮಿ ವಿಸ್ತೀರ್ಣ ಹೊಂದಿದೆ. ಬೆಟ್ಟ ಗುಡ್ಡಗಳಿಂದ ಕೂಡಿದ ಅರಣ್ಯ ಪ್ರದೇಶವಾಗಿದೆ. ಹನೂರು, ರಾಮಾಪುರ, ಹೂಗ್ಯಂ, ಪಿ.ಜಿ.ಪಾಳ್ಯ, ಕೊಳ್ಳೇಗಾಲ, ಮಲೆ ಮಹದೇಶ್ವರ ಬೆಟ್ಟ ಹಾಗೂ ಪಾಲಾರ್ ವಲಯ(7 ರೇಂಜ್), 3 ಉಪವಿಭಾಗ ಹಾಗೂ 2 ಬಫರ್ ವಲಯ ಹೊಂದಿದೆ.

ಬಿದಿರು ಹೂವು ಬಿಟ್ಟು ಸಾಯುವುದು ಸಹಜ ಪ್ರಕ್ರಿಯೆ


"ಮಲೆ ಮಹದೇಶ್ವರ ವನ್ಯಧಾಮ ವ್ಯಾಪ್ತಿಯಲ್ಲಿ ಬೆಳೆದಿದ್ದ ಬಿದಿರು ಗುತ್ತಿಗಳು ಒಂದೇ ಬಾರಿಗೆ ಹೂವು ಬಿಟ್ಟು, ಒಣಗುತ್ತಿವೆ. ಕೆಲವು ದಿನಗಳ ಬಳಿಕ ಅವುಗಳ ಬೇರು ಕೊಳೆತು ನೆಲಕ್ಕುರುಳಲಿವೆ. ಸುಮಾರು 42 ರಿಂದ 45 ವರ್ಷ ಹಿಂದೆ ಬಿತ್ತನೆ ಮಾಡಿದ್ದ ಬಿದಿರು ಇದಾಗಿವೆ. ಈಗ ಹೂವು ಬಿಟ್ಟಿವೆ. ಈಗಾಗಲೇ ಸ್ಥಳೀಯವಾಗಿ ಬೆಳೆದಿದ್ದ ಬಿದಿರಿನಿಂದ ಬಿತ್ತನೆ ಬೀಜ ಸಂಗ್ರಹಿಸಲಾಗಿದೆ. ಒಂದು ಟನ್ ಬೀಜ ಸಂಗ್ರಹಿಸಲಾಗಿದ್ದು, ಮಳೆ ಬಿದ್ದೊಡನೆ ಬಿತ್ತನೆ ಮಾಡಲಾಗುತ್ತದೆ. ಸಾವಿರಾರು ಬೀಜ ಬಿತ್ತುವುದರಿಂದ ಮುಂಬರುವ ದಿನಗಳಲ್ಲಿ ಮಲೆ ಮಹದೇಶ್ವರ ಬೆಟ್ಟದ ವನ್ಯಧಾಮದಲ್ಲಿ ಸೊಗಸಾಗಿ ಬಿದಿರು ಗುತ್ತಿಯನ್ನು ನೋಡಬಹುದಾಗಿದೆ. ಮುಂಬರುವ ವರ್ಷಗಳಲ್ಲಿ ಪ್ರಾಣಿಗಳಿಗೆ ಆಹಾರದ ಕೊರತೆಯುಂಟಾಗದಂತೆ ನೋಡಿಕೊಳ್ಳಲು ಬಿದಿರಿನ ಬೀಗ ಹಾಕಲಾಗುತ್ತದೆ.

– ವಿ.ಏಡುಕೊಂಡಲು, ಡಿಸಿಎಫ್, ಮಲೆ ಮಹದೇಶ್ವರಬೆಟ್ಟ ವನ್ಯಧಾಮ

ರಾಜ್ಯದ ಪ್ರಮುಖ ಧಾರ್ಮಿಕ ಕೇಂದ್ರವೂ ಮಾತ್ರವಲ್ಲದೆ ಹಳೆ ಮೈಸೂರು ಪ್ರಾಂತ್ಯದ ಜನರಲ್ಲಿ ಜಾನಪದ ನೆಲೆಗಟ್ಟಿನಲ್ಲಿ ಮಲೆ ಮಹದೇಶ್ವರ ಬೆಟ್ಟ ಪ್ರಾಮುಖ್ಯತೆ ಪಡೆದಿದೆ. ಇದರೊಂದಿಗೆ ತಮಿಳುನಾಡಿನಿಂದಲೂ ಅಪಾರ ಸಂಖ್ಯೆ ಭಕ್ತರು ಬೆಟ್ಟಕ್ಕೆ ಆಗಮಿಸುವ ಪರಂಪರೆ ಹೊಂದಿದ್ದಾರೆ. ದಟ್ಟಾರಣ್ಯದ ನಡುವೆ 25 ಗ್ರಾಮ, ಕಾಡಂಚಿನಲ್ಲಿರುವ 25 ಗ್ರಾಮ ಸೇರಿದಂತೆ ಮಲೆ ಮಹದೇಶ್ವರ ವನ್ಯಧಾಮದ ವ್ಯಾಪ್ತಿಗೆ 150 ಗ್ರಾಮ ಬರಲಿದ್ದು, ಅಂದಾಜು 90 ಸಾವಿರ ಜನಸಂಖ್ಯೆ ಇದೆ ಎನ್ನಲಾಗಿದೆ. ಆದರೆ 1.50 ಲಕ್ಷ ಜಾನುವಾರುಗಳನ್ನು ಗ್ರಾಮಸ್ಥರು ಸಾಕಿದ್ದಾರೆ.

ಶ್ರೀ ಸತ್ಯ ಸಂತುಷ್ಟ ತೀರ್ಥರ ಆರಾಧನಾ ಮಹೋತ್ಸವ

ಶ್ರೀ ಸತ್ಯಾತ್ಮತೀರ್ಥರ ವರ್ಧಂತಿ, ಮೈಸೂರು ದಿಗ್ವಿಜಯ ಉತ್ತರಾದಿಮಠದಲ್ಲಿ ಆಯೋಜನೆ



ಮೈಸೂರು: ಅಗ್ರಹಾರದಲ್ಲಿರುವ ಉತ್ತರಾದಿ ಮಠದಲ್ಲಿ ಶ್ರೀಸತ್ಯ ಸಂತುಷ್ಟ ತೀರ್ಥರ ಆರಾಧನಾ ಮಹೋತ್ಸವ ಮತ್ತು ಶ್ರೀಮನ್ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಉತ್ತರಾದಿ ಮಠಾಧೀಶ ಶ್ರೀ ಸತ್ಯಾತ್ಮತೀರ್ಥ ಸ್ವಾಮೀಜಿ 50ನೇ ವರ್ಷದ ವರ್ಧಂತಿ ಉತ್ಸವದ ಅಂಗವಾಗಿ ಮಾ. 31ರಿಂದ ಏ. 4ರವರೆಗೆ 'ಮೈಸೂರು ದಿಗ್ವಿಜಯ' ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ.

ಮಾ. 31ರ ಸಂಜೆ 5ಕ್ಕೆ ಶ್ರೀ ಸತ್ಯಾತ್ಮತೀರ್ಥರಿಗೆ ಪೂರ್ಣಕುಂಭ ಸ್ವಾಗತ, 6ಕ್ಕೆ ಪಂಡಿತರಿಂದ ಉಪನ್ಯಾಸ ಹಮ್ಮಿಕೊಳ್ಳಲಾಗಿದೆ.

ಏ.1ರಂದು ಶ್ರೀಸತ್ಯ ಸಂತುಷ್ಟ ತೀರ್ಥರ ಆರಾಧನೆ ಅಂಗವಾಗಿ ಮೂಲ ವೃಂದಾವನಕ್ಕೆ ಪಂಚಾಮೃತ ಅಭಿಷೇಕ, ವಿಶೇಷ ಪೂಜೆ, ಶ್ರೀಗಳಿಂದ ಸಂಸ್ಥಾನ ಪೂಜೆ ಆಯೋಜಿಸಲಾಗಿದೆ. 2ರಂದು ಯುಗಾದಿ ಅಂಗವಾಗಿ ಬೆಳಗ್ಗೆ 5ಕ್ಕೆ ಶ್ರೀ ಮೂಲ ರಾಮದೇವರು ಮತ್ತು ಗುರುಗಳಿಗೆ ತೈಲ ಸಮರ್ಪಣೆ, 6.30ಕ್ಕೆ ಶ್ರೀಗಳಿಂದ ಭಕ್ತರಿಗೆ ತೈಲ ಪ್ರದಾನ, 8.30ಕ್ಕೆ ಧನ್ವಂತರಿ ದೇವರಿಗೆ ಫಲ ಪಂಚಾಮೃತ ಅಭಿಷೇಕ, ಶ್ರೀ ಧನ್ವಂತರಿ ಮಹಾಯಾಗ, ಸಂಸ್ಥಾನ ಪೂಜೆ ನೆರವೇರಲಿದೆ. ಇದೇ ಸಂದರ್ಭ ಧನ್ವಂತರಿ ದೇವರಿಗೆ ಸುವರ್ಣ ನೇತ್ರ ಸಮರ್ಪಣೆ, ವೃಂದಾವನಗಳಿಗೆ ರಜತ ನಾಮಗಳ ಸಮರ್ಪಣೆಗೊಳ್ಳಲಿದೆ.

ಮಾ.31ರಿಂದ ಏ.4ರವರೆಗೆ ನಿತ್ಯ ಬೆಳಗ್ಗೆ 8ರಿಂದ 9ರವರೆಗೆ ಭಕ್ತರಿಗೆ ತಪ್ತ ಮುದ್ರಾ ಧಾರಣೆ, ಸಂಜೆ 6ಕ್ಕೆ ವಿವಿಧ ಕಲಾವಿದರಿಂದ ದಾಸವಾಣಿ, ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ, ಪಂಡಿತರಿಂದ ಪ್ರವಚನ, ಸಂಜೆ 7ಕ್ಕೆ ಶ್ರೀ ಸತ್ಯಾತ್ಮತೀರ್ಥರಿಂದ ವಿಶೇಷ ಅಮೃತೋಪದೇಶ ಆಯೋಜಿಸಲಾಗಿದೆ ಎಂದು ವ್ಯವಸ್ಥಾಪಕ ವಿದ್ವಾನ್ ಅನಿರುದ್ಧಾಚಾರ್ಯ ಪಾಂಡುರಂಗಿ ತಿಳಿಸಿದ್ದಾರೆ. ಮಾಹಿತಿಗೆ 9448147459 ಸಂಪರ್ಕಿಸಬಹುದು.

ಜಿಪಂ, ತಾಪಂನಲ್ಲಿ ಹಿಂದುಳಿದವರಿಗೆ ಮೀಸಲು ವಿಚಾರ

ಮಾ.31ಕ್ಕೆ ಸರ್ವಪಕ್ಷ ಸಭೆ



ಬೆಂಗಳೂರು, ಮಾ. 28(ಕೆಎಂಶಿ)– ಜಿಲ್ಲಾ ಹಾಗೂ ತಾಲೂಕು ಪಂಚಾಯತ್ ಚುನಾವಣೆಗಳಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಾತಿ ಕಲ್ಪಿಸುವ ಸಂಬಂಧ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಲು ಈ ತಿಂಗಳ 31ರಂದು ಸರ್ವ ಪಕ್ಷ ಸಭೆ ಕರೆಯುವುದಾಗಿ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ವಿಧಾನಸಭೆಗೆ ಇಂದು ತಿಳಿಸಿದರು.

ಯಾವುದೇ ಕಾರಣಕ್ಕೂ ಜಿಲ್ಲಾ ಹಾಗೂ ತಾಲೂಕು ಪಂಚಾಯತ್ ಚುನಾವಣೆ ವೇಳೆ ಹಿಂದುಳಿದ ವರ್ಗಗಳಿಗೆ ಅನ್ಯಾಯವಾಗಲು ಬಿಡುವುದಿಲ್ಲ, ಈ ಎಲ್ಲ ಅಂಶಗಳ ಬಗ್ಗೆ ಎದ್ದಿರುವ ಗೊಂದಲಗಳ ಬಗ್ಗೆ ಚರ್ಚಿಸಲು ಸರ್ವಪಕ್ಷ ಕರೆದಿರುವುದಾಗಿ ತಿಳಿಸಿದರು. ಅಂದಿನ ಸಭೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಜೆ.ಸಿ.ಮಾಧುಸ್ವಾಮಿ, ಅಡ್ವೋಕೇಟ್ ಜನರಲ್, ಕಾನೂನು ತಜ್ಞರು, ಪ್ರತಿಪಕ್ಷಗಳ ನಾಯಕರು ಸೇರಿದಂತೆ ಸಂಬಂಧಪಟ್ಟ ಎಲ್ಲರೂ ಭಾಗವಹಿಸಿ ಅಭಿಪ್ರಾಯಗಳನ್ನು ತಿಳಿಸಿದ ನಂತರ ಅಂತಿಮವಾಗಿ ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಳ್ಳಲಿದೆ ಎಂದರು. ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಸೇರಿದಂತೆ ಯಾವುದೇ ಪಕ್ಷ ಅಧಿಕಾರದಲ್ಲಿ ಇರಲಿ, ಹಿಂದುಳಿದ ವರ್ಗದವರಿಗೆ ಅನ್ಯಾಯ ಮಾಡಿ ಚುನಾವಣೆಗೆ ಹೋಗುವುದಿಲ್ಲ, ಈ ಸಮುದಾಯಕ್ಕೆ ಎಷ್ಟು ಪ್ರಮಾಣದಲ್ಲಿ ಮೀಸಲಾತಿ ನೀಡಬೇಕು ಎಂಬ ವಿಚಾರ ಸುಪ್ರೀಂಕೋರ್ಟ್ ಮುಂದಿದೆ, ಸರ್ವಪಕ್ಷಗಳ ಸಭೆಯಲ್ಲಿ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳೋಣ, ಇದಕ್ಕೆ ಎಲ್ಲರೂ ಸಹಕರಿಸಬೇಕೆಂದು ಈಶ್ವರಪ್ಪ ಮನವಿ ಮಾಡಿದರು.

ಗೌರವ ಶಿಕ್ಷಕರ ಮುಂದುವರಿಕೆ



ಬೆಂಗಳೂರು,ಮಾ.28(ಕೆಎಂಶಿ)– ಮಕ್ಕಳ ಮನೆ ತರಗತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗೌರವ ಶಿಕ್ಷಕರನ್ನು ಹೊಸ ಶಿಕ್ಷಣ ನೀತಿಯಡಿ ಗೌರವಧನದೊಂದಿಗೆ ಮುಂದುವರೆಸುವ ಕುರಿತು ಪರಿಶೀಲಿಸಲಾಗುವುದಾಗಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿಂದು ಪ್ರಶ್ನೋತ್ತರ ವೇಳೆಯಲ್ಲಿ ಕೆ.ಟಿ. ಶ್ರೀಕಂಠೇಗೌಡ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಮಂಡ್ಯ ಹಾಗೂ ಇತರ ಜಿಲ್ಲೆಗಳಲ್ಲಿ ಮಕ್ಕಳ ಮನೆ ಕಾರ್ಯಕ್ರಮವನ್ನು ಸ್ಥಳೀಯ ಶಾಲಾಭಿವೃದ್ಧಿ ಸಮಿತಿಗಳು ಜಾರಿಗೊಳಿಸಿವೆ ಎಂದರು.

ಪ್ರಾಥಮಿಕ ಪೂರ್ವ ಶಿಕ್ಷಣ ವ್ಯವಸ್ಥೆಗಾಗಿ ಸ್ಥಳೀಯವಾಗಿ ಗೌರವಧನದ ಮೇಲೆ ಶಿಕ್ಷಕರನ್ನು ನಿಯೋಜಿಸಿಕೊಳ್ಳಲಾಗಿದೆ. ಹೊಸ ಶಿಕ್ಷಣ ನೀತಿಯಡಿ ಮೂರನೇ ವಯಸ್ಸಿನಿಂದಲೇ ಶಿಕ್ಷಣ ಆರಂಭವಾಗಲಿದೆ. ಇದಕ್ಕಾಗಿ ರಾಜ್ಯದಲ್ಲಿನ 4 ಸಾವಿರಕ್ಕೂ ಹೆಚ್ಚಿನ ಅಂಗನವಾಡಿಗಳನ್ನು ಪ್ರಾಥಮಿಕ ಪೂರ್ವ ಶಿಕ್ಷಣ ವ್ಯಾಪ್ತಿಗೆ ಸೇರ್ಪಡೆಗೊಳಿಸಲು ಚಿಂತನೆ ನಡೆದಿದೆ. ನೂತನ ನೀತಿ ಪ್ರಕಾರ ಶಾಲಾ ಆವರಣದಲ್ಲೇ ಅಂಗನವಾಡಿ ಅಥವಾ ಪ್ರಾಥಮಿಕ ಶಿಕ್ಷಣ ಆರಂಭಿಸಬೇಕಿದ್ದು, ಆ ವೇಳೆ ಮಕ್ಕಳ ಮನೆಯ ಗೌರವ ಶಿಕ್ಷಕರನ್ನು ಪರಿಗಣಿಸಲಾಗುವುದು ಎಂದು ಸಚಿವ ನಾಗೇಶ್ ಭರವಸೆ ನೀಡಿದರು.

ಉಚಿತ ಕೌಶಲ್ಯ ಅಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು,ಮಾ.28–ಮೈಸೂರಿನ ಫುಡ್ ಕ್ರಾಫ್ಟ್ ಇನ್‌ಸ್ಟಿಟ್ಯೂಟ್ ಹಾಗೂ ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿ ಯೋಜನೆಯಡಿ ಬೇಕರಿ ಅಂಡ್ ಕನ್‌ಫೆಕ್ಷನರಿ ಕ್ಷೇತ್ರದಲ್ಲಿ ಉದ್ಯೋಗ ಪ್ರಾರಂಭಿಸಲು ಇಚ್ಛಿಸುವ ಅಭ್ಯರ್ಥಿಗಳಿಗೆ ಅಲ್ಪಾವಧಿ ತರಬೇತಿಯನ್ನು ನೀಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ವಯೋಮಿತಿ 18ರಿಂದ 35 ವರ್ಷದೊಳಗಿರಬೇಕು. ಕನಿಷ್ಠ ವಿದ್ಯಾರ್ಹತೆ 8ನೇ ತರಗತಿ ಉತ್ತೀರ್ಣರಾಗಿರಬೇಕು. ತರಬೇತಿ ಅವಧಿ 6 ವಾರಗಳು. ಪ್ರಶಿಕ್ಷಣಾರ್ಥಿಗೊಳಪಟ್ಟು 2000 ರೂ.ಗಳ ಸ್ಟೈಫಂಡ್ ನೀಡಲಾಗುತ್ತದೆ. ತರಬೇತಿಯ ಅವಧಿಯಲ್ಲಿ ಮಧ್ಯಾಹ್ನದ ಊಟ, ಸಮವಸ್ತ್ರ ಹಾಗೂ ಕಲಿಕಾ ಸಾಮಗ್ರಿಗಳನ್ನು ಉಚಿತವಾಗಿ ನೀಡಲಾಗುವುದು. ಯಶಸ್ವಿಯಾಗಿ ತರಬೇತಿಯನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ ಇಲಾಖೆ ಫುಡ್ ಕ್ರಾಫ್ಟ್ ಇನ್‌ಸ್ಟಿಟ್ಯೂಟ್ ಸಂಸ್ಥೆಯಿಂದ ಜಂಟಿಯಾಗಿ ಪ್ರಮಾಣಪತ್ರ ನೀಡಲಾಗುವುದು ಮತ್ತು ಪ್ರತಿಷ್ಠಿತ ಹೋಟೆಲ್‌ಗಳಲ್ಲಿ ಕೆಲಸ ಪಡೆಯಲು ಸಹಾಯ ಮಾಡಲಾಗುವುದು.

ನಿಗದಿಪಡಿಸಿದ ಅರ್ಜಿ ನಮೂನೆಯನ್ನು ಕಚೇರಿಯಲ್ಲಿ ಪಡೆದು, ಇತ್ತೀಚಿನ 5 ಭಾವಚಿತ್ರ, ಶೈಕ್ಷಣಿಕ ಅಂಕಪಟ್ಟಿ ಪ್ರತಿ, ಜಾತಿ ಪ್ರಮಾಣ ಪತ್ರ, ಬ್ಯಾಂಕ್‌ಖಾತೆಯ ವಿವರ ಮತ್ತು ಆಧಾರ್ ಕಾರ್ಡ್ ಪ್ರತಿಗಳೊಂದಿಗೆ ಅರ್ಜಿ ಸಲ್ಲಿಸಬಹುದು. ದೊಡ್ಡಕೆರೆ ಮೈದಾನದಲ್ಲಿರುವ ದಸರಾ ವಸ್ತುಪ್ರದರ್ಶನ ಆವರಣದ ಕನ್ನಡ ಕಾಲೇಜು ಕಟ್ಟಡದ 1ನೇ ಮಹಡಿಯಲ್ಲಿರುವ ಫುಡ್ ಕ್ರಾಫ್ಟ್ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತಿ ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ.: 6362018821, 0821-2445388, 2974388 ಸಂಪರ್ಕಿಸಬಹುದು ಎಂದು ಫುಡ್ ಕ್ರಾಫ್ಟ್ ಇನ್‌ಸ್ಟಿಟ್ಯೂಟ್‌ನ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ

ಕೆ.ಬೆಟ್ಟೇಗೌಡ



ಮೈಸೂರು, ಮಾ.28– ಮೈಸೂರು ಮರಿಮಲ್ಲಪ್ಪ ಜೂನಿಯರ್ ಕಾಲೇಜಿನ ನಿವೃತ್ತ ಭೂಗೋಳಶಾಸ್ತ್ರದ ಉಪನ್ಯಾಸಕ ಕೆ.ಬೆಟ್ಟೇಗೌಡ (89) ಅವರು ಸೋಮವಾರ ಬನ್ನಿಮಂಟಪ ಮುಖ್ಯ ದ್ವಾರದ ಎದುರಿನ ತಮ್ಮ ನಿವಾಸದಲ್ಲಿ ನಿಧನರಾದರು. ಇವರು ಪುತ್ರಿಯರಾದ ಕೋಕಿಲಾ ಪ್ರಸಾದ್, ಬಿಇಎಲ್‌ನ ರೂಪಾ ವಿಠಲ್ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಜೋಡಿ ತೆಂಗಿನಮರದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಜಯಲಕ್ಷ್ಮಮ್ಮ



ಮೈಸೂರು, ಮಾ.28– ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮೈಸೂರು ವಲಯ ಉಪಾಧ್ಯಕ್ಷ ಬಿ.ಆರ್.ನಟರಾಜ ಜೋಯಿಸ್ ಅವರ ತಾಯಿ ಶ್ರೀಮತಿ ಜಯಲಕ್ಷ್ಮಮ್ಮ(92) ಅವರು ಚನ್ನರಾಯಪಟ್ಟಣ ಬಾಗೂರು ಗ್ರಾಮದ ತಮ್ಮ ಸ್ವಗೃಹದಲ್ಲಿ ಸೋಮವಾರ ನಿಧನರಾದರು. ಮೃತರು ಬಿ.ಆರ್. ನಟರಾಜ ಜೋಯಿಸ್ ಸೇರಿದಂತೆ ಐದು ಮಂದಿ ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚನ್ನರಾಯಪಟ್ಟಣ ತಾಲೂಕಿನ ಬಾಗೂರು ಗ್ರಾಮದಲ್ಲಿ ಮಂಗಳವಾರ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಚಾಮುಂಡೇಶ್ವರಿ ಕ್ಷೇತ್ರದ ಬೋಗಾದಿ ಗ್ರಾಮದ ಗ್ರಾಮದೇವತೆ ಹಬ್ಬದ ಅಂಗವಾಗಿ ಬೋಗಾದಿ ಕ್ರೇಜಿ ಕ್ರಿಕೆಟರ್ಸ್ ವತಿಯಿಂದ ಆಯೋಜಿಸಲಾಗಿದ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತರಾದ ಎನ್. ಆರ್. ಟೈಗರ್ಸ್ ತಂಡದವರಿಗೆ ಪ್ರಥಮ ಬಹುಮಾನ 50000ರೂ. ಹಾಗೂ ಟ್ರೋಫಿಯನ್ನು ವಿತರಿಸಲಾಯಿತು. ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಹಾಗೂ ಗ್ರಾಮದ ಮುಖಂಡ ಎನ್. ಅರುಣ್ ಕುಮಾರ್‌ಗೌಡ, ಗ್ರಾಪಂ ಮಾಜಿ ಸದಸ್ಯ ಗ್ಯಾರೇಜ್ ರವಿ, ಮುಖಂಡರಾದ ರವಿಚಂದ್ರು, ಮಾರಿಗುಡಿ ಸ್ವಾಮಿ, ಲಾರಿ ಭರತ್, ಅಖಿಲ್, ಪಂದ್ಯಾವಳಿಯ ಸಂಘಟಕರಾದ ರವಿಕುಮಾರ್, ನಾಗೇಶ್, ಪುಟ್ಟು, ಮೋಹನ್ ಕುಮಾರ್, ಆನಂದ್ ಕುಮಾರ್, ಶಶಿ, ಪವನ್ ಕುಮಾರ್, ಸೋಮು, ಮಹೇಶ್, ಸಿದ್ದು, ಗಿರೀಶ್, ಅಶೋಕ, ಮಂಜು ಇನ್ನಿತರರು ಉಪಸ್ಥಿತರಿದ್ದಾರೆ.

ಮಾಜಿ ಪ್ರಧಾನಿ ದೇವೇಗೌಡರ ಪತ್ನಿಗೆ ಐಟಿ ನೋಟಿಸ್: ಮಾಜಿ ಸಚಿವ ಎಚ್.ಡಿ. ರೇವಣ್ಣ ಗರಂ

ಹಾಸನ, ಮಾ. 28– ಜೆಡಿಎಸ್ ವರಿಷ್ಠ ಹಾಗೂ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಪತ್ನಿ ಚೆನ್ನಮ್ಮರಿಗೆ ತೆರಿಗೆ ಇಲಾಖೆ ನೋಟೀಸ್ ನೀಡಿದ್ದು, ನಮ್ಮ ತಾಯಿಗೆ ಐಟಿ ನೋಟಿಸ್ ನೀಡಿದ್ದಾರೆ. ಒಬ್ಬ ಮಾಜಿ ಪ್ರಧಾನಿ ಪತ್ನಿಗೆ ಐಟಿ ನೋಟಿಸ್ ನೀಡಿದ್ದಾರೆ ಎಂದು ಮಾಜಿ ಸಚಿವ ಎಚ್.ಡಿ. ರೇವಣ್ಣ ಅವರು ಸೋಮವಾರ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಂದು ಮಾಧ್ಯಮಗಳೊಂದಿಗೆ ಮಾತನಾಡಿದ ರೇವಣ್ಣ ಅವರು, ನಮ್ಮ ತಾಯಿಗೆ ಆಸ್ತಿ ವಿವರದ ಬಗ್ಗೆ ಮಾಹಿತಿ ಕೇಳಿ ನೋಟಿಸ್ ನೀಡಿದ್ದಾರೆ. ನಮ್ಮಮ್ಮ, ನಮ್ಮಪ್ಪ ಕೋಟ್ಯಾಂತರ ರೂ. ಆಸ್ತಿ ಮಾಡಿದ್ದಾರಾ? ನಾನು ಆಲೂಗಡ್ಡೆ ಬೆಳೆದಿದ್ದೆ, ಈಗ ನಮ್ಮ ಜಮೀನಿನಲ್ಲಿ ಕಬ್ಬು ಬೆಳೆಯುತ್ತಿದ್ದೇವೆ. ಅದನ್ನು ನೋಡಬೇಕು, ಅದನ್ನು ನೋಡದೆ ನಮ್ಮ ತಾಯಿಗೆ ನೋಟೀಸ್ ಕೊಟ್ಟಿದ್ದಾರೆ. ಒಬ್ಬೊಬ್ಬ ಆರ್‌ಟಿಒ ನೂರು ಇನ್ನೂರು ಕೋಟಿ ಮಾಡಿದ್ದಾರಲ್ಲ ಅವರಿಗೇಕೆ ನೀವು ನೋಟೀಸ್ ನೀಡಲ್ಲ. ಒಂದು ಎಕರೆಯಲ್ಲಿ ಎಷ್ಟು ಬೆಳೆ ಬೆಳೆಯುತ್ತೇವೆ ಬಂದು ನೋಡಲಿ ಎಂದರು.

ದ್ವೇಷದ ರಾಜಕಾರಣ ಯಾವ ಮಟ್ಟಿಗೆ ಇದೆ ನೋಡಿ ಎಂದು ಕಿಡಿಕಾರಿದ ರೇವಣ್ಣ, ಜೆಡಿಎಸ್‌ನವರು ಯಾರು ಎಂದು ಆರಿಸಿ ನೋಟಿಸ್ ಕೊಡುತ್ತಿದ್ದಾರೆ. ಕಾಲ ಬರುತ್ತೆ ಎಲ್ಲದಕ್ಕೂ ಉತ್ತರ ಕೊಡುತ್ತೇವೆ ಎಂದು ಗುಡುಗಿದ್ದಾರೆ. ಅವರ ನೋಟಿಸ್‌ಗೆ ನಾವು ಉತ್ತರ ಕೊಡುತ್ತೇವೆ. ನಮಗೂ ಕಾಲ ಬರುತ್ತೆ. ಯಾವುದೂ ಶಾಶ್ವತವಾಗಿ ಇರಲ್ಲ. ಏನಾದರೂ ಕದ್ದು ವ್ಯವಸಾಯ ಮಾಡುತ್ತಿದ್ದೇವಾ ಅಂತ ಡ್ರೋಣ್ ಸರ್ವೆ ಮಾಡಲಿ. ದೊಡ್ಡಪುರ, ಪಡುವಲ ಹಿಪ್ಪೆ ಹತ್ತಿರ ನಮ್ಮ ಗದ್ದೆ ಇದೆ ಎಂದರು.

ಬೆಂಗಳೂರಿನಲ್ಲಿ 40 ಸೇರಿ ರಾಜ್ಯದಲ್ಲಿ 48 ಮಂದಿಗೆ ಕೊರೊನಾ ಪಾಸಿಟಿವ್

ಬೆಂಗಳೂರು, ಮಾ. 28– ರಾಜ್ಯದಲ್ಲಿ ಕೊರೊನಾ ಮೂರನೇ ಅಲೆಯ ಅಬ್ಬರ ಕಡಿಮೆಯಾಗುತ್ತಿದ್ದು, ಕಳೆದ 24 ಗಂಟೆಯಲ್ಲಿ ಕೇವಲ 48 ಹೊಸ ಪಾಸಿಟಿವ್ ಪ್ರಕರಣಗಳು ವರದಿಯಾಗಿವೆ. ಇದರೊಂದಿಗೆ ಸೋಂಕಿತರ ಸಂಖ್ಯೆ 39,45,359ಕ್ಕೆ ಏರಿಕೆಯಾಗಿದೆ. ಇನ್ನೂ ರಾಜ್ಯದಲ್ಲಿ ಮಹಾಮಾರಿ ಕೊರೋನಾ ದಿಂದ ಇಂದು ಒಬ್ಬರು ಮಾತ್ರ ಮೃತಪಟ್ಟಿದ್ದಾರೆ. ಇದರೊಂದಿಗೆ ಸಾವಿನ ಸಂಖ್ಯೆ 40051ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ. ಬೆಂಗಳೂರಿನಲ್ಲಿ ಇಂದು 40 ಮಂದಿಗೆ ಸೋಂಕು ದೃಢಪಟ್ಟಿದೆ. ಇದರೊಂದಿಗೆ ನಗರದಲ್ಲಿ ಸೋಂಕಿತರ ಸಂಖ್ಯೆ 17,81,512ಕ್ಕೆ ಏರಿಕೆಯಾಗಿದೆ. ಇಂದು ರಾಜಧಾನಿಯಲ್ಲಿ ಕೊರೋನಾದಿಂದ ಯಾವುದೇ ಸಾವು ವರದಿಯಾಗಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೇಳಿದೆ. ರಾಜ್ಯದಲ್ಲಿ ಇಂದು 105 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಇದರೊಂದಿಗೆ ಸೋಂಕಿನಿಂದ ಚೇತರಿಸಿಕೊಂಡವರ ಸಂಖ್ಯೆ 39,03,547ಕ್ಕೆ ಏರಿಕೆಯಾಗಿದೆ. ಇನ್ನು 1719 ಸಕ್ರಿಯ ಪ್ರಕರಣಗಳಿವೆ.



ಸೇನೆಗೆ ವಾಹನ ನೀಡುತ್ತಿರುವ ಉಕ್ರೇನ್ ನಾಗರಿಕರು

ಕೀವ್, ಮಾ. 28– ರಷ್ಯಾ ನಡೆಸಿರುವ ಆಕ್ರಮಣಕ್ಕೆ ತೀವ್ರ ಪ್ರತಿರೋಧ ಒಡ್ಡುತ್ತಿರುವ ಉಕ್ರೇನ್ ಹೋರಾಟಕ್ಕೆ ನಾಗರಿಕರು ತಮ್ಮ ಕೈಲಾದ ಸಹಾಯವನ್ನು ಮಾಡುತ್ತಿರುವುದು ಬೆಳಕಿಗೆ ಬಂದಿದೆ. ಉಕ್ರೇನ್ ನಾಗರಿಕರು ತಮ್ಮ ಖಾಸಗಿ ವಾಹನಗಳನ್ನು ಸೇನೆಗೆ ದೇಣಿಗೆಯಾಗಿ ನೀಡುತ್ತಿರುವ ಬೆಳವಣಿಗೆ ನಡೆದಿದೆ ಈ ಖಾಸಗಿ ವಾಹನಗಳು ಪ್ರಯಾಣಕ್ಕೋಸ್ಕರ ಮಾಡಲಾಗಿರುವವು. ಹೀಗಾಗಿ ಯಥಾ ಸ್ಥಿತಿಯಲ್ಲಿ ಅವನ್ನು ಯುದ್ಧಭೂಮಿಯಲ್ಲಿ ಬಳಸಿಕೊಳ್ಳಲು ಆಗದು.

ಪ್ರಯಾಣಿಕ ವಾಹನವನ್ನು ಸೇನಾ ವಾಹನವನ್ನಾಗಿ ಮಾರ್ಪಾಡು ಮಾಡುವ ಪ್ರಕ್ರಿಯೆ ಭಾರೀ ಸಂಖ್ಯೆಯಲ್ಲಿ ನಡೆಯುತ್ತಿದೆ. ಈ ಕೆಲಸದಲ್ಲಿ ಉಕ್ರೇನಿನ ವೆಲ್ಡರ್‌ಗಳು ನೆರವಾಗುತ್ತಿದ್ದಾರೆ. ಪ್ರಯಾಣಿಕ ವಾಹನಗಳನ್ನು ಸೇನಾವಾಹನಗಳನ್ನಾಗಿ ಬದಲಾಯಿಸುತ್ತಿದ್ದಾರೆ. ಈ ವಾಹನಗಳ ಚೆಂದದ ಬಣ್ಣಗಳನ್ನು ತೆಗೆದು ಕಪ್ಪು ಅಥವಾ ಗಾಢಬಣ್ಣವನ್ನು ಬಳಿಯುತ್ತಿದ್ದಾರೆ

ಟಿಪ್ಪು ಸುಲ್ತಾನ್ 'ಮೈಸೂರು ಹುಲಿ' ಬಿರುದಿಗೆ ಪುರಾವೆ ಇಲ್ಲ

ಸರ್ಕಾರಕ್ಕೆ ರೋಹಿತ್ ಚಕ್ರತೀರ್ಥ ವರದಿ

ಬೆಂಗಳೂರು, ಮಾ. 28– ಕೇವಲ ಶಾಲಾ ಪಠ್ಯದಲ್ಲಿ ವೈಭವೀಕರಣಕ್ಕೆ ಕಂಟಕ ಮಾತ್ರವಲ್ಲ 'ಮೈಸೂರು ಹುಲಿ' ಟಿಪ್ಪು ಸುಲ್ತಾನ್ ಎಂಬ ಬಿರುದಿಗೂ ಆಕ್ಷೇಪ ವ್ಯಕ್ತವಾಗಿದೆ. ಈ ಬಿರುದನ್ನು ತೆಗೆಯುವಂತೆ ಪಠ್ಯ ಪರಿಷ್ಕರಣೆ ಸಮಿತಿ ಸಲಹೆ ನೀಡಿದೆ. ಈಗಾಗಲೇ ಸರ್ಕಾರಕ್ಕೆ ನೀಡಿರುವ ವರದಿಯಲ್ಲಿ ಈ ಅಂಶ ಉಲ್ಲೇಖಗೊಂಡಿದೆ. ಸರ್ಕಾರವು ಈ ವರದಿಯನ್ನು ಪರಿಶೀಲನೆ ಮಾಡಿ, ಪರಿಷ್ಕರಣೆಗೆ ಮುಂದಾದರೆ, ಬಿರುದನ್ನು ಕೈಬಿಡುವ ಸಾಧ್ಯತೆ ಇದೆ.

'ಮೈಸೂರು ಹುಲಿ' ಎಂಬ ಬಿರುದನ್ನು ಕೈಬಿಡುವ ಸಾಧ್ಯತೆಯಿದೆ ಎಂದು ಪಠ್ಯ ಪುಸ್ತಕ ಸಮಿತಿ ಅಧ್ಯಕ್ಷ, ಚಿಂತಕ ರೋಹಿತ್ ಚಕ್ರತೀರ್ಥ ಹೇಳಿದ್ದಾರೆ. ಟಿಪ್ಪುಗೆ 'ಮೈಸೂರು ಹುಲಿ' ಎಂದು ಬಿರುದು ಕೊಟ್ಟಿದ್ಯಾರು? ಬಿರುದು ಕೊಟ್ಟಿರುವ ಬಗ್ಗೆ ಮಾಹಿತಿ ಎಲ್ಲೂ ಅಡಕವಾಗಿಲ್ಲ ಉಲ್ಲೇಖವಾಗಿಲ್ಲ, ದಾಖಲೆಗಳೂ ಇಲ್ಲ. ಸುಖಾ ಸುಮ್ಮನೇ ಮೈಸೂರು ಹುಲಿ ಎಂದು ವೈಭವೀಕರಣ ಮಾಡಲಾಗುತ್ತಿದೆ. ಜಾತಿ ಮತಗಳ ಬಗ್ಗೆ ಟಿಪ್ಪು ಬೇಕಾಬಿಟ್ಟಿಯಾಗಿ ಮಾತನಾಡಿದ್ದಾರೆ ಎಂದು ಪಠ್ಯ ಪುಸ್ತಕ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಹೇಳಿದ್ದಾರೆ.

ಈ ಹಿಂದೆ, ಬರಗೂರು ರಾಮಚಂದ್ರಪ್ಪ ಪರಿಷ್ಕರಣೆ ಮಾಡಿದ್ದಾರೆ. ಟಿಪ್ಪುವಿನ ಬಗ್ಗೆ ಬರಗೂರು ರಾಮಚಂದ್ರಪ್ಪಗೆ ಸ್ಪಷ್ಟ ಮಾಹಿತಿ ಇಲ್ಲ. ಮನಸ್ಸಿಗೆ ಬಂದಂತೆ ಟಿಪ್ಪುವಿನ ವೈಭವೀಕರಣ ಮಾಡಲಾಗಿದೆ. ಮುಖ್ಯವಾಗಿ ಈಗ ಟಿಪ್ಪು ಬಿರುದು ತೆಗೆಯುವಂತೆ ವರದಿ ನೀಡಿದ್ದೇವೆ ಎಂದು ರೋಹಿತ್ ಚಕ್ರತೀರ್ಥ ಹೇಳಿದ್ದಾರೆ. ಜಾತಿ ಮತಗಳ ಬಗ್ಗೆ ಟಿಪ್ಪುವಿನ ಮಾತನ್ನೂ ಪಠ್ಯದಿಂದ ತೆಗೆಯಬೇಕು. ಮುಖ್ಯವಾಗಿ 2 ವಿಚಾರಗಳ ಬಗ್ಗೆ ಸರ್ಕಾರಕ್ಕೆ ವರದಿ ನೀಡಿದ್ದೇವೆ ಎಂದು ಪಠ್ಯ ಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಖಾಸಗಿ ವಾಹಿನಿ ಜೊತೆ ಮಾತನಾಡುತ್ತಾ ತಿಳಿಸಿದರು.

ಗಮಕ ಕಲಾವಿದ ಹೆಚ್ ಆರ್ ಕೇಶವಮೂರ್ತಿ ಸೇರಿ 74 ಗಣ್ಯರಿಗೆ ಪದ್ಮ ಪ್ರಶಸ್ತಿ ಪ್ರದಾನ

ನವದೆಹಲಿ, ಮಾ.28–ರಾಜ್ಯದ ಗಮಕ ಕಲಾವಿದ ಹೆಚ್.ಆರ್.ಕೇಶವಮೂರ್ತಿ, ಒಲಿಂಪಿಕ್‌ನಲ್ಲಿ ಭಾರತಕ್ಕೆ ಚಿನ್ನದ ಪದಕ ತಂದುಕೊಟ್ಟ ನೀರಜ್ ಚೋಪ್ರಾ, ಬಿಜೆಪಿ ಹಿರಿಯ ಮುಖಂಡ ದಿವಂಗತ ಕಲ್ಯಾಣ್ ಸಿಂಗ್ ಸೇರಿದಂತೆ ವಿವಿಧ ಕ್ಷೇತ್ರದ ಹಲವು ಗಣ್ಯರಿಗೆ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಇಂದು ಪದ್ಮ ಪ್ರಶಸ್ತಿ ಪ್ರದಾನ ಮಾಡಿದರು.

ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದ 74 ಸಾಧಕರಿಗೆ ಪದ್ಮ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವರ್ಷ 128 ಪದ್ಮ ಪ್ರಶಸ್ತಿಗಳನ್ನು ಘೋಷಿಸಲಾಗಿತ್ತು. ಮಾರ್ಚ್ 21 ರಂದು ನಡೆದ ಸಮಾರಂಭದಲ್ಲಿ 54 ಗಣ್ಯರಿಗೆ ಪ್ರಶಸ್ತಿ ನೀಡಲಾಗಿತ್ತು.

ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಅವರಿಗೆ ಮರಣೋತ್ತರವಾಗಿ ಪದ್ಮ ವಿಭೂಷಣ ಪ್ರಶಸ್ತಿ ನೀಡಲಾಯಿತು. ನಟ ವಿಕ್ಟರ್ ಬ್ಯಾನರ್ಜಿ ಮತ್ತು ಕೋವಾಕ್ಸಿನ್ ಲಸಿಕೆ ತಯಾರಿಕಾ ಕಂಪನಿ ಭಾರತ್ ಬಯೋಟೆಕ್ ಸಂಸ್ಥಾಪಕಾರದ ಕೃಷ್ಣ ಮೂರ್ತಿ ಎಲಾ ಮತ್ತು ಸುಚಿತ್ರಾ ಕೃಷ್ಣ ಎಲಾ ಅವರಿಗೆ ಪದ್ಮ ಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ಹೆಚ್.ಆರ್.ಕೇಶವಮೂರ್ತಿ ಅವರು ರಾಷ್ಟ್ರಪತಿಗಳಿಂದ ಪದ್ಮ ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವುದು

ಅಡುಗೆ ಮಾಡದಿದ್ದಕ್ಕೆ ತಾಯಿ ಕೊಂದ ಮಗ

ಮೈಸೂರು, ಮಾ. 28(ಆರ್‌ಕೆ)– ಅಡುಗೆ ಮಾಡಲಿಲ್ಲ ಎಂಬ ಕಾರಣಕ್ಕೆ ಕಪಾಳಕ್ಕೆ ಹೊಡೆದು ಯುವಕನೋರ್ವ ತಾಯಿಯನ್ನೇ ಹತ್ಯೆಗೈದಿರುವ ಘಟನೆ ಹುಣಸೂರು ತಾಲೂಕು, ಬಿಳಿಕೆರೆ ಗ್ರಾಮದಲ್ಲಿ ಕಳೆದ ಶನಿವಾರ ಸಂಭವಿಸಿದೆ.

ಗ್ರಾಮದ ಮಹದೇವಸ್ವಾಮಿ ಅವರ ಮಗ ಹರೀಶ, ತಾಯಿ ಜಯಮ್ಮ(54)ರನ್ನು ಹತ್ಯೆಗೈದವನು. ಕಾರು ಚಾಲಕನಾದ ಹರೀಶ, ಶನಿವಾರ ಮಧ್ಯಾಹ್ನ ಊಟ ಮಾಡಲೆಂದು ಮನೆಗೆ ಬಂದಾಗ ಅಡುಗೆ ಮಾಡಿರಲಿಲ್ಲ. ಅದರಿಂದ ಕುಪಿತನಾದ ಆತ, ಜಗಳ ತೆಗೆದು ತಾಯಿ ಕಪಾಳಕ್ಕೆ ಜೋರಾಗಿ ಬಾರಿಸಿದ. ಅದರಿಂದ ಪ್ರಜ್ಞೆ ತಪ್ಪಿ ಬಿದ್ದ ಜಯಮ್ಮ ಸ್ಥಳದಲ್ಲೇ ಕೊನೆಯುಸಿರೆಳೆದರು. ಸ್ಥಳಕ್ಕೆ ಧಾವಿಸಿದ ಬಿಳಿಕೆರೆ ಠಾಣೆ ಇನ್ಸ್‌ಪೆಕ್ಟರ್ ರವಿಕುಮಾರ್ ಹಾಗೂ ಸಿಬ್ಬಂದಿ, ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡು ಹರೀಶನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು.

ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಎಂ.ಬಿ. ಪಾಟೀಲ್



ಬೆಂಗಳೂರು, ಮಾ. 28– ಕರ್ನಾಟಕ ಕಾಂಗ್ರೆಸ್ ಸಮಿತಿಯ ಪ್ರಚಾರ ಸಮಿತಿ ಅಧ್ಯಕ್ಷರಾಗಿ ಹಿರಿಯ ಶಾಸಕ ಎಂ.ಬಿ. ಪಾಟೀಲ್ ಸೋಮವಾರ ಅಧಿಕಾರ ಸ್ವೀಕರಿಸಿದರು. ಬೆಂಗಳೂರಿನ ಅರಮನೆ ಮೈದಾನದಲ್ಲಿ ಬೃಹತ್ ಸಮಾವೇಶ ಆಯೋಜನೆ ಮಾಡಲಾಗಿತ್ತು. ಈ ವೇಳೆ ಪ್ರಚಾರ ಸಮಿತಿ ಅಧ್ಯಕ್ಷರಾಗಿ ಆಯ್ಕೆಯಾದ ತಿಂಗಳ ಬಳಿಕ ಅಧಿಕೃತವಾಗಿ ಜವಾಬ್ದಾರಿ ತೆಗೆದುಕೊಂಡರು.

ಮಾಜಿ ಸಿಎಂ ಹಾಗೂ ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಸೇರಿದಂತೆ ಕೆಪಿಸಿಸಿ ಕಾರ್ಯಾಧ್ಯಕ್ಷರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷದ ಬಾವುಟ ಸ್ವೀಕರಿಸುವ ಮೂಲಕ ಮುಂದಿನ ವರ್ಷ ನಡೆಯುವ ವಿಧಾನಸಭೆ ಚುನಾವಣೆಗೆ ಕಹಳೆ ಊದಿದರು. ಕೆಪಿಸಿಸಿ ನೂತನ ಪ್ರಚಾರ ಸಮಿತಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರ ಮಾತನಾಡಿದ ಎಂ.ಬಿ. ಪಾಟೀಲ್, "ಸ್ವಾತಂತ್ರ್ಯ ಹೋರಾಟದಲ್ಲಿ ಬಿಜೆಪಿಯವರು ಯಾರೂ ಭಾಗಿ ಆಗಿರಲಿಲ್ಲ. ಆದರೆ ಈಗ ನಮಗೇ ದೇಶಭಕ್ತಿ ಬಗ್ಗೆ ಹೇಳಿಕೊಡಲು ಬರುತ್ತಿದ್ದಾರೆ.

ಕೋವಿಡ್ ನಿರ್ವಹಣೆಯಲ್ಲಿ ಕೇಂದ್ರ, ರಾಜ್ಯ ಸರ್ಕಾರ ವಿಫಲವಾಗಿದೆ. ಕೊರೊನಾ ವೇಳೆ ಚಿಕಿತ್ಸೆ ಸಿಗದೆ ಸಾವಿರಾರು ಜನರು ಮೃತಪಟ್ಟಿದ್ದಾರೆ," ಎಂದು ಆರೋಪಿಸಿದರು. ಕೋವಿಡ್ ನಿರ್ವಹಣೆ ಹೆಸರಿನಲ್ಲಿ ಸಾವಿರಾರು ಕೋಟಿ ರೂ. ಲೂಟಿ ಆಗಿದೆ. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಉತ್ತಮ ಆಡಳಿತ ನೀಡಿತ್ತು. ರಾಜ್ಯದ ಏಕೈಕ ಮಹಿಳಾ ವಿವಿಯನ್ನು ಮುಚ್ಚಲು ಸರ್ಕಾರ ಯತ್ನಿಸುತ್ತಿದೆ. ಜನ ವಿರೋಧಿಯಾಗಿರುವ ರಾಜ್ಯ ಸರ್ಕಾರವನ್ನು ಕಿತ್ತೊಗೆಯಬೇಕಿದೆ. 150 ಸೀಟ್ ಗೆದ್ದು ಕಾಂಗ್ರೆಸ್‌ನ್ನು ಮತ್ತೆ ಅಧಿಕಾರಕ್ಕೆ ತರುತ್ತೇವೆ ಎಂದು ಎಂ.ಬಿ. ಪಾಟೀಲ್ ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಸರ್ಕಾರ ಅತ್ಯಂತ ಭ್ರಷ್ಟ ಸರ್ಕಾರ: ರಣದೀಪ್ ಸುರ್ಜೇವಾಲಾ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಅತ್ಯಂತ ಭ್ರಷ್ಟ ಸರ್ಕಾರ ಎಂದು ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬಿಜೆಪಿ ಸರ್ಕಾರ 40 ಪರ್ಸೆಂಟೇಜ್ ಕಮಿಷನ್ ಸರ್ಕಾರವಾಗಿದೆ. ಪ್ರಧಾನಿ, ಬಿಜೆಪಿ ಹೈಕಮಾಂಡ್ ಈ ಬಗ್ಗೆ ಏಕೆ ಮಾತನಾಡುತ್ತಿಲ್ಲ. ಬಿಜೆಪಿ ಹೈಕಮಾಂಡ್ ಏಕೆ ಬಾಯಿ ಮುಚ್ಚಿಕೊಂಡು ಕುಳಿತಿದೆ. ಭ್ರಷ್ಟ ಸರ್ಕಾರದ ವಿರುದ್ಧ ಬಿಜೆಪಿ ವರಿಷ್ಠರು ಕ್ರಮಕೈಗೊಳ್ಳಲಿ. ಇಲ್ಲದಿದ್ದರೆ ಭ್ರಷ್ಟಾಚಾರದಲ್ಲಿ ವರಿಷ್ಠರಿಗೂ ಪಾಲಿದೆ ಎಂದರ್ಥ ಎಂದು ಸುರ್ಜೇವಾಲಾ ಆರೋಪಿಸಿದರು.

ಮುಸ್ಲಿಂ ವರ್ತಕರ ಮೇಲಿನ ನಿರ್ಬಂಧ ಅಸ್ಪೃಶ್ಯತೆ ಆಚರಣೆಯಲ್ಲದೇ ಮತ್ತೇನೂ ಅಲ್ಲ

ಬೆಳಗಾವಿ, ಮಾ. 28– ಮುಸ್ಲಿಂ ವರ್ತಕರಿಗೆ ನಿರ್ಬಂಧ ವಿಧಿಸಿರುವುದು ಅಸ್ಪೃಶ್ಯತೆ ಆಚರಣೆಯಲ್ಲದೇ ಮತ್ತೇನೂ ಅಲ್ಲ ಎಂದು ಬಿಜೆಪಿಯ ವಿಧಾನಪರಿಷತ್ ಸದಸ್ಯ ಎ.ಎಚ್. ವಿಶ್ವನಾಥ್ ಹೇಳಿದ್ದಾರೆ.

ಗೋಕಾಕದಲ್ಲಿ ಮಾಜಿ ಸಚಿವ ರಮೇಶ ಜಾರಕಿಹೊಳಿ ಅವರನ್ನು ಭೇಟಿ ಮಾಡಿ ಮಾತನಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇವಸ್ಥಾನದ ಆವರಣದಲ್ಲಿ ಮುಸ್ಲಿಮರು ವ್ಯಾಪಾರ ವಹಿವಾಟು ನಡೆಸುವುದನ್ನು ನಿಷೇಧಿಸಿರುವುದು ತರ್ಕಬದ್ಧವಲ್ಲ. ಸರಕಾರ ಮೌನ ಮುರಿದು ದೇವಸ್ಥಾನದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು, ಇಲ್ಲದಿದ್ದರೆ ಜನರೇ ಕ್ರಮಕೈಗೊಳ್ಳುತ್ತಾರೆಂದು ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು 'ಸಬ್ ಕಾ ವಿಕಾಸ್ ಮತ್ತು ಸಬ್ ಕಾ ವಿಶ್ವಾಸ್' ಎಂಬ ಸಂದೇಶ ನೀಡಿದ್ದಾರೆ. ಆದರೆ, ನಮ್ಮ ರಾಜ್ಯ ತಪ್ಪು ಹಾದಿಯಲ್ಲಿ ಸಾಗುತ್ತಿದೆ. ದೇವಸ್ಥಾನಗಳ ಬಳಿ ಹೂವು, ಹಣ್ಣು, ಪೂಜೆ ಸಾಮಗ್ರಿ ಮಾರಾಟವನ್ನೇ ನಂಬಿಕೊಂಡು ಬದುಕುತ್ತಿರುವ ಮುಸ



ಲ್ಮಾನರು ತಮ್ಮ ಜೀವನೋ ಪಾಯಕ್ಕೆ ಏನು ಮಾಡಬೇಕು. ಇದು ಅಸ್ಪೃಶ್ಯತೆಗೆ ಸಮಾನವಾಗಿದೆ. ಪಕ್ಷ, ಜಾತಿ, ಧರ್ಮ ಮೀರಿ ಸರ್ಕಾರ ಚಿಂತನೆ ನಡೆಸಬೇಕು ಎಂದು ತಿಳಿಸಿದ್ದಾರೆ.

ರಮೇಶ್ ಜಾರಕಿಹೊಳಿ ಅವರಿಗೆ ಸಚಿವ ಸ್ಥಾನ ನಿರಾಕರಿಸಿದ ಕುರಿತು ಮಾತನಾಡಿ, ಕೆಲವು ಅಪರಿಚಿತ ಕೈಗಳು ತೆರೆಮರೆಯಲ್ಲಿ ಕೆಲಸ ಮಾಡುತ್ತಿವೆ, ನನ್ನನ್ನು ಕೊನೆಗೊಳಿಸಲು ಪ್ರಯತ್ನಿಸುತ್ತಿವೆ. ಈಗಿನ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲು ನಾವೇ ಕಾರಣ. ಪಕ್ಷವು ನಮ್ಮನ್ನು ಹತ್ತಿಕ್ಕಲು ಯತ್ನಿಸಿದರೆ ನಾವು ಸಹಿಸುವುದಿಲ್ಲ. ಸಿದ್ದರಾಮಯ್ಯ, ಜಾರಕಿಹೊಳಿ ಹಾಗೂ ನನ್ನನ್ನೂ ಒಳಗೊಂಡಂತೆ ಹಿಂದುಳಿದ ನಾಯಕರ ವಿರುದ್ಧದ ವಾತಾವರಣ ಇದೀಗ ರಾಜ್ಯದಲ್ಲಿ ನಿರ್ಮಾಣವಾಗುತ್ತಿದೆ ಎಂದಿದ್ದಾರೆ.

ಜೆಎಸ್ಎಸ್ ಕಾಲೇಜಿನಲ್ಲಿ ಪದವೀಧರರ ದಿನಾಚರಣೆ

ಮೈಸೂರು, ಮಾ.28(ಎಂಕೆ)– ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಮಾ.31ರಂದು ಬೆಳಗ್ಗೆ 11.30ಕ್ಕೆ 'ಹದಿನಾಲ್ಕನೇ ಪದವೀಧರರ ದಿನಾಚರಣೆ' ನಡೆಯಲಿದೆ.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿರುವ ಬಹ್ರಾ ವಿಶ್ವ ವಿದ್ಯಾನಿಲಯದ ಕುಲಪತಿ ಡಾ.ಬಿ.ಎಸ್. ನಾಗೇಂದ್ರ ಪರಾಶರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಜೆಎಸ್ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, 2020–21ನೇ ಸಾಲಿನಲ್ಲಿ ನಡೆದ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಸ್ನಾತಕ ವಿಭಾಗದ 533 ವಿದ್ಯಾರ್ಥಿಗಳು ಹಾಗೂ ಸ್ನಾತಕೋತ್ತರ ವಿಭಾಗದ 466 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರಾಗಿ, ತೊಗರಿ ಬಗ್ಗೆ ಸಿಎಂ ಹೇಳಿಕೆ ಭರವಸೆ

ಬೆಂಗಳೂರು, ಮಾ. 28(ಕೆಎಂಶಿ)– ರಾಗಿ ಮತ್ತು ತೊಗರಿ ವಿಚಾರಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚಿಸಿ ಸ್ವಯಂ ಹೇಳಿಕೆ ಕೊಡಿಸುವ ಭರವಸೆಯನ್ನು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ನೀಡಿದರು.

ವಿಧಾನಸಭೆಯಲ್ಲಿ ರಂಗನಾಥ್ ಅವರು, ರಾಗಿ ಬೆಳೆಗಾರರ ಸಮಸ್ಯೆ ಬಗ್ಗೆ ಚರ್ಚೆಗೆ ಅವಕಾಶ ನೀಡುವಂತೆ ಪಟ್ಟು ಹಿಡಿದು ಸಭಾಧ್ಯಕ್ಷರ ಪೀಠದ ಮುಂದಿನ ಸದನ ಬಾವಿಗೆ ಧಾವಿಸಿ ಧರಣಿ ಆರಂಭಿಸಿದರು. ಸಭಾಧ್ಯಕ್ಷ ಕಾಗೇರಿ ಮಾತನಾಡಿ, ರಾಗಿ, ತೊಗರಿ ಸೇರಿದಂತೆ ರೈತರ ಸಮಸ್ಯೆಗಳ ಬಗ್ಗೆ ಚರ್ಚಿಸಿ ಉತ್ತರ ನೀಡಲಾಗಿದೆ, ಮುಖ್ಯಮಂತ್ರಿಗಳು ಸದನಕ್ಕೆ ಬಂದ ಮೇಲೆ ಹೇಳಿಕೆ ಕೊಡಿಸುವುದಾಗಿ ಭರವಸೆ ನೀಡಿದರು.

ಏ.5, 6ರಂದು ನೀರು ವ್ಯತ್ಯಯ

ಮೈಸೂರು, ಮಾ.28(ಎಂಕೆ)– ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2 ಮತ್ತು 3ನೇ ಹಂತದ ಯಂತ್ರಾಗಾರದಲ್ಲಿ ಮಾ.29 ಮತ್ತು 30 ರಂದು ಹಮ್ಮಿಕೊಂಡಿದ್ದ ಲಿಂಕಿಂಗ್ ಕಾಮಗಾರಿಯನ್ನು ಏ.5 ಮತ್ತು 6ಕ್ಕೆ ಮುಂದೂಡಲಾಗಿದ್ದು, ಅಂದು ನಗರ ಪಾಲಿಕೆಯ ವಾರ್ಡ್ ನಂ–1 ರಿಂದ 7, 20, 23, 38, 42, 42 ರಿಂದ 45, 47ರ ವ್ಯಾಪ್ತಿಯ ಬಡಾವಣೆಗಳಿಗೆ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಉತ್ಸಾಹದಿಂದ ಎಸ್ಎಸ್ಎಲ್‌ಸಿ ಪರೀಕ್ಷೆ ಬರೆದ ಮಕ್ಕಳು

ವಿದ್ಯಾರ್ಥಿಗಳ ಆದ್ಯತೆ ಭವಿಷ್ಯ ಫಸ್ಟ್ ಮಿಕ್ಕಿದ್ದೆಲ್ಲಾ ನೆಕ್ಸ್ಟ್



ಕೊಪ್ಪಳ, ಬೀದರ್ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿತ್ತು ಎಂದು ವರದಿಯಾಗಿದೆ.

ಬೆಂಗಳೂರು, ಮಾ. 28(ಕೆಎಂಶಿ)– ಧಾರ್ಮಿಕ ಪ್ರಚೋದನೆಗಳಿಗೆ ಮಹತ್ವ ನೀಡದೆ, ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಕಡೆ ಗಮನಹರಿಸಿ ಇಂದು ಆರಂಭವಾದ ಎಸ್ಎಸ್ಎಲ್‌ಸಿ ಪರೀಕ್ಷೆಗಳಿಗೆ ಉತ್ಸಾಹದಿಂದ ಹಾಜರಾದರು.

ಏಪ್ರಿಲ್ 11ರವರೆಗೆ ಈ ಪರೀಕ್ಷೆಗಳು ನಡೆಯಲಿದ್ದು, ರಾಜ್ಯಾದ್ಯಂತ 8 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಸರ್ಕಾರದ ನಿಯಮಾವಳಿ ಪಾಲಿಸುವ ಮೂಲಕ ಸಮವಸ್ತ್ರ ಧರಿಸಿ ಪರೀಕ್ಷೆ ಬರೆದರು.

ಧಾರ್ಮಿಕ ಸಂಕೇತ ಸಾರುವ ಉಡುಪು ಧರಿಸಿ ತರಗತಿಗಳಿಗೆ ಹಾಜರಾಗುವ ಸಂಬಂಧ ರಾಜ್ಯ ಹೈಕೋರ್ಟ್ ತೀರ್ಪಿನ ನಂತರ ನಡೆದ ಮೊದಲ ಸಾರ್ವತ್ರಿಕ ಪರೀಕ್ಷೆ ಇದಾಗಿದೆ. ಒಂದು ವರ್ಗದ ವಿದ್ಯಾರ್ಥಿಗಳು ಪೂರ್ಣ ಪ್ರಮಾಣದಲ್ಲಿ ಪರೀಕ್ಷೆಗೆ ಹಾಜರಾಗುವರೆ, ಇಲ್ಲವೇ ಎಂಬ ಚರ್ಚೆ ನಡೆದಿತ್ತು.

ನ್ಯಾಯಾಲಯದ ತೀರ್ಪಿನ ನಂತರ ಕೆಲವು ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳಿಗೂ ತೆರಳಿರಲಿಲ್ಲ, ಆದರೆ, ಇಂದು ಈ ವಿದ್ಯಾರ್ಥಿಗಳೂ ಸೇರಿದಂತೆ ಎಲ್ಲಾ ವರ್ಗದವರೂ ಯಾವುದೇ ಆಕ್ಷೇಪ ಇಲ್ಲದೆ ಪರೀಕ್ಷೆ ಬರೆದರು. ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳು ಧಾರ್ಮಿಕ ಸಂಕೇತ ಉಡುಪು ಧರಿಸಿ ಪರೀಕ್ಷೆಗೆ ಹಾಜರಾಗಲು ಮುಂದಾದರಾದರೂ, ಶಿಕ್ಷಣ ಇಲಾಖೆ ಅಧಿಕಾರಿಗಳು ಈ ವಿದ್ಯಾರ್ಥಿಗಳ ಮನವೊಲಿಸಿದಾಗ ನಿಯಮಾವಳಿಯಂತೆ ಪರೀಕ್ಷೆಗೆ ಹಾಜರಾಗಲು ಸಮ್ಮತಿಸಿದರು.

ಇಂತಹ ಸಣ್ಣ–ಪುಟ್ಟ ಘಟನೆಗಳನ್ನು ಹೊರತುಪಡಿಸಿ, ಎಲ್ಲಿಯೂ ಯಾವುದೇ ಗೊಂದಲ ಎದುರಾಗಲಿಲ್ಲ. ಕೋವಿಡ್–19 ನಿಯಮಾವಳಿಗಳನ್ನು ಎಲ್ಲೆಡೆ ಚಾಚೂ ತಪ್ಪದೆ ಪಾಲಿಸಿ ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ತುಂಬಿ ಪರೀಕ್ಷೆ ಬರೆಯುವಂತೆ ಮಾಡುವಲ್ಲಿ ಶಾಲಾ ಆಡಳಿತ ಮಂಡಳಿಗಳು ಶ್ರಮಿಸಿದವು. ಕಳೆದ 2 ವರ್ಷಗಳಿಂದ ಕೋವಿಡ್ ಕಾರಣ ಪೂರ್ಣ ಪ್ರಮಾಣದಲ್ಲಿ ಎಸ್ಎಸ್ಎಲ್‌ಸಿ ಪರೀಕ್ಷೆ ನಡೆಸಲು ಸಾಧ್ಯವಾಗಿರಲಿಲ್ಲ. ಈ ಬಾರಿ ಎಸ್ಎಸ್ಎಲ್‌ಸಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳು ಕೋವಿಡ್‌ನಿಂದಾಗಿ 8 ಮತ್ತು 9ನೇ ತರಗತಿಗಳ ಪರೀಕ್ಷೆ ಬರೆಯಲಾಗದೆ ಬಡ್ತಿ ಪಡೆದಿದ್ದರು. ಇದನ್ನರಿತ ಸರ್ಕಾರ ಈ ಬಾರಿ ಎಸ್ಎಸ್ಎಲ್‌ಸಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳಿಗೆ ಶಾಲಾ ಹಾಗೂ ಸಾರ್ವಜನಿಕವಾಗಿ ಪೂರ್ವಸಿದ್ಧತಾ ಪರೀಕ್ಷೆಗಳ ಮೂಲಕ ಮಾನಸಿಕವಾಗಿ ಸ್ಥೈರ್ಯ ತುಂಬುವ ಕೆಲಸ ಮಾಡಿತ್ತು.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲೂ ಪಠ್ಯಕ್ರಮಗಳನ್ನು ಪೂರ್ಣಗೊಳಿಸಲು ಸಾಧ್ಯವಾಗದ ಕಾರಣ ಶೇ.25ರಷ್ಟು ಪಠ್ಯ ಕ್ರಮವನ್ನು ಪರೀಕ್ಷೆಯಿಂದ ಕೈಬಿಡಲಾಗಿತ್ತು ಪರೀಕ್ಷೆಗಳು ಸುಗಮವಾಗಿ ಆರಂಭವಾಗಿದ್ದರಿಂದ ಸರ್ಕಾರಕ್ಕೂ ನೆಮ್ಮದಿ ತಂದಿದೆ, ಯಾವುದೇ ಗೊಂದಲಗಳಿಲ್ಲದೆ ಪರೀಕ್ಷೆಗಳು ನಡೆಯುತ್ತಿರುವುದನ್ನು ಅರಿತ ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥನಾರಾಯಣ, ವೃತ್ತಿ ಶಿಕ್ಷಣ ಪ್ರವೇಶ ಪರೀಕ್ಷೆ (ಸಿಇಟಿ)ಯ ತಾತ್ಕಾಲಿಕ ವೇಳಾಪಟ್ಟಿಯನ್ನೂ ಪ್ರಕಟಿಸಿದರು.

ಹಿಂದೂಗಳಿಗೆ ಅಲ್ಪಸಂಖ್ಯಾತ ಸ್ಥಾನಮಾನ ನೀಡಲು ರಾಜ್ಯಗಳಿಗೆ ಅಧಿಕಾರ

ನವದೆಹಲಿ:ಹಿಂದೂಗಳು ಸೇರಿದಂತೆ ಹಲವು ರಾಜ್ಯಗಳಲ್ಲಿ ಕಡಿಮೆ ಪ್ರಮಾಣದಲ್ಲಿರುವ ಸಮುದಾಯಕ್ಕೆ ಅಲ್ಪಸಂಖ್ಯಾತ ಸ್ಥಾನಮಾನ ನೀಡಲು ರಾಜ್ಯಗಳಿಗೆ ಅಧಿಕಾರ ಇದೆ ಕೇಂದ್ರ ಸರ್ಕಾರ ಹೇಳಿದೆ. ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ತಿಳಿಸಿದೆ. ಲಡಾಖ್, ಮಿಜೋರಾಂ, ಲಕ್ಷದ್ವೀಪ, ಕಾಶ್ಮೀರ, ನಾಗಾಲ್ಯಾಂಡ್, ಮೇಘಾಲಯ, ಅರುಣಾಚಲ ಪ್ರದೇಶ, ಪಂಜಾಬ್‌ನಲ್ಲಿ ಅಲ್ಪಸಂಖ್ಯಾತರಾಗಿರುವ ಜುದಾಯಿಸಂ, ಬಹಾಯಿಸಂ ಸಮುದಾಯವನ್ನು ಹಿಂದೂ ಧರ್ಮದ ಅನುಯಾಯಿಗಳು ಎಂದು ಘೋಷಿಸುವಂತೆ ಕೋರಿ ಬಿಜೆಪಿ ನಾಯಕ ಮತ್ತು ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಸಲ್ಲಿಸಿದ್ದ ಅರ್ಜಿಗೆ ಕೇಂದ್ರ ಸರ್ಕಾರ ಅಫಿಡವಿಟ್ ಮೂಲಕ ಹೀಗೆ ಉತ್ತರಿಸಿದೆ. 1992ರ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗದ ಕಾಯ್ದೆಯ ಅಡಿ ಭಾಷಾವಾರು ಅಥವಾ ಧಾರ್ಮಿಕ ಸಮುದಾಯಗಳನ್ನು 'ಅಲ್ಪಸಂಖ್ಯಾತರು' ಎಂದು ಘೋಷಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರವಿದೆ, ಈ ಅಧಿಕಾರವನ್ನು ಕೇಂದ್ರ ಕಸಿದುಕೊಳ್ಳುವುದಿಲ್ಲ. ರಾಜ್ಯ ಸರ್ಕಾರಗಳು ಈ ರಾಜ್ಯದೊಳಗೆ ಧಾರ್ಮಿಕ ಅಥವಾ ಭಾಷಾ ಸಮುದಾಯವನ್ನು 'ಅಲ್ಪಸಂಖ್ಯಾತ ಸಮುದಾಯ' ಎಂದು ಘೋಷಿಸಬಹುದು. ಲಡಾಖ್, ಮಿಜೋರಾಂ, ಲಕ್ಷದ್ವೀಪ, ಕಾಶ್ಮೀರ, ನಾಗಾಲ್ಯಾಂಡ್, ಮೇಘಾಲಯ, ಅರುಣಾಚಲ ಪ್ರದೇಶ, ಪಂಜಾಬ್, ಮಣಿಪುರಗಳು ಸದರಿ ರಾಜ್ಯದಲ್ಲಿ ತಮ್ಮ ಆಯ್ಕೆಯ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಬಹುದು. ರಾಜ್ಯಮಟ್ಟದಲ್ಲಿ ಅಲ್ಪಸಂಖ್ಯಾತರನ್ನು ಗುರುತಿಸಲು ಮಾರ್ಗಸೂಚಿಗಳನ್ನು ಸಂಬಂಧಪಟ್ಟ ರಾಜ್ಯ ಸರ್ಕಾರಗಳು ನಿರ್ಧರಿಸಬೇಕು ಎಂದು ಅಫಿಡವಿಟ್ ಹೇಳಿದೆ.

ಜೂನ್ ವೇಳೆಗೆ 8 ಲಕ್ಷ ಮಂದಿಗೆ ಬಿಪಿಎಲ್ ಕಾರ್ಡ್

ಬೆಂಗಳೂರು,ಮಾ.28– ರಾಜ್ಯದಲ್ಲಿ ಬಿಪಿಎಲ್ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿರುವವರನ್ನು ಪರಿಶೀಲನೆ ನಡೆಸಿ, ಜೂನ್ ತಿಂಗಳ ಒಳಗಾಗಿ 8 ಲಕ್ಷ ಮಂದಿಗೆ ಬಿಪಿಎಲ್ ಕಾರ್ಡ್ ನೀಡುವ ಗುರಿ ಹೊಂದಲಾಗಿದೆ ಎಂದು ಆಹಾರ ಮತ್ತು ನಾಗರಿಕ ಸಚಿವ ಉಮೇಶ್ ಕತ್ತಿ ಹೇಳಿದರು.



ವಿಧಾನಪರಿಷತ್‌ನಲ್ಲಿ ಮಾತನಾಡಿದ ಉಮೇಶ್ ಕತ್ತಿ ಅವರು, 'ಕಳೆದ 3 ವರ್ಷಗಳ ಅವಧಿಯಲ್ಲಿ 15,53,745 ಮಂದಿ ಅರ್ಜಿ ಸಲ್ಲಿಸಿದ್ದು, ಅದರಲ್ಲಿ 8,03,782 ಅರ್ಜಿದಾರರಿಗೆ ಪಡಿತರ ಚೀಟಿ ನೀಡಲಾಗಿದೆ. ಈ ಪೈಕಿ 3.24 ಲಕ್ಷ ಮಂದಿ ಅರ್ಜಿ ತಿರಸ್ಕೃತವಾಗಿದ್ದು, 4.24 ಲಕ್ಷ ಮಂದಿಗೆ ಬಿಪಿಎಲ್ ಕಾರ್ಡ್ ಅನ್ನು ಒಂದು ತಿಂಗಳ ಒಳಗಾಗಿ ನೀಡಿ, ಇನ್ನುಳಿದ 3 ಲಕ್ಷಕ್ಕೂ ಅಧಿಕ ಮಂದಿಗೆ ಜೂನ್ ತಿಂಗಳ ಒಳಗಾಗಿ ಬಿಪಿಎಲ್ ಕಾರ್ಡ್ ನೀಡಲಾಗುವುದು ಎಂದು ಹೇಳಿದ್ದಾರೆ.

ಯು.ಬಿ. ವೆಂಕಟೇಶ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಲಾಕ್‌ಡೌನ್ ಕಾರಣದಿಂದಾಗಿ ಹೊಸಪಡಿತರ ಚೀಟಿ ಕೋರಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಪರಿಶೀಲನೆ ಹಾಗೂ ಬಯೋಮೆಟ್ರಿಕ್ ತೆಗೆದುಕೊಳ್ಳಲು ಸಾಧ್ಯವಾಗಿರಲಿಲ್ಲ. ಅತಿಶೀಘ್ರದಲ್ಲೇ ಬಾಕಿ ಇರುವ ಎಲ್ಲಾ ಅರ್ಜಿಗಳನ್ನು ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಕೋವಿಡ್ ಕಾರಣದಿಂದ ಬಯೋಮೆಟ್ರಿಕ್ ಬಳಕೆಯನ್ನು ಹಿಂಪಡೆದ ಕಾರಣ, ಪಡಿತರ ಚೀಟಿಯನ್ನು ವಿತರಿಸುವ ಕಾರ್ಯ ತಾತ್ಕಾಲಿಕವಾಗಿ ಸ್ಥಗಿತವಾಗಿತ್ತು. ಪ್ರಸ್ತುತ ಹೊಸಪಡಿತರ ಚೀಟಿ ವಿತರಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದರು. ಮನೆ–ಮನೆಗೂ ತೆರಳಿ, ಪರಿಶೀಲನೆ ನಡೆಸಿ ಜೂನ್ ತಿಂಗಳ ಒಳಗಾಗಿ 8 ಲಕ್ಷ ಮಂದಿಗೆ ಬಿಪಿಎಲ್ ಕಾರ್ಡ್ ನೀಡುವ ಗುರಿ ಹೊಂದಲಾಗಿದೆ ಎಂದರು. ಪಡಿತರ ಚೀಟಿಗಾಗಿ ಹೊಸದಾಗಿ ಅರ್ಜಿ ಸಲ್ಲಿಸಿರುವವರಿಗೂ ಪಡಿತರ ಚೀಟಿ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಆಸ್ಕರ್ ಅವಾರ್ಡ್: ವಿಲ್ ಸ್ಮಿತ್, ಜೆಸ್ಸಿಕಾ ಚಸ್ಟೈನ್‌ಗೆ ಅತ್ಯುತ್ತಮ ನಟ, ಅತ್ಯುತ್ತಮ ನಟಿ 'CODA'ಗೆ ಅತ್ಯುತ್ತಮ ಚಿತ್ರ ಪ್ರಶಸ್ತಿ



ಯುನೈಟೆಡ್ ಸ್ಟೇಟ್ಸ್, ಮಾ. 28– ಅಮೆರಿಕದ ಖ್ಯಾತ ಟೆನಿಸ್ ಆಟಗಾರ್ತಿ ಸೋದರಿಯರಾದ ವೀನಸ್ ವಿಲಿಯಮ್ಸ್ ಮತ್ತು ಸೆರೆನಾ ವಿಲಿಯಮ್ಸ್ ಅವರ ತಂದೆ ರಿಚರ್ಡ್ ವಿಲಿಯಮ್ಸ್ ಅವರ ಜೀವನ ಚರಿತ್ರೆಯನ್ನಾಧರಿಸಿದ ಚಿತ್ರ 'ಕಿಂಗ್ ರಿಚರ್ಡ್' ಪಾತ್ರದ ಅಭಿನಯಕ್ಕಾಗಿ ವಿಲ್ ಸ್ಮಿತ್ ಈ ಬಾರಿಯ ಅತ್ಯುತ್ತಮ ನಟ ಆಸ್ಕರ್ ಪ್ರಶಸ್ತಿ ಪಡೆದಿದ್ದಾರೆ.

ವಿಲ್ ಸ್ಮಿತ್ ಅವರು ತಮ್ಮ ಪತ್ನಿ ಜಡಾ ಪಿಂಕೆಟ್ ಸ್ಮಿತ್ ಅವರ ಬಗ್ಗೆ ಹಾಸ್ಯ ಮಾಡಿದ ನಿರೂಪಕ ಕ್ರಿಸ್ ರಾಕ್ ಗೆ ಕಪಾಳಮೋಕ್ಷ ಮಾಡುವ ಮೂಲಕ ವಿವಾದ ಹುಟ್ಟುಹಾಕಿದ್ದಾರೆ. ಇದಾದ ಬಳಿಕ ಅತ್ಯುತ್ತಮ ನಟ ಪ್ರಶಸ್ತಿ ಸಿಕ್ಕಿದ ಕೂಡಲೇ ವೇದಿಕೆಯಲ್ಲಿ ಮಾತನಾಡುತ್ತಾ ಕಲೆ ಜೀವನವನ್ನು ಅನುಕರಿಸುತ್ತದೆ. ನಾನು ರಿಚರ್ಡ್ ವಿಲಿಯಮ್ಸ್‌ನಂತೆ ಕ್ರೇಜಿ ತಂದೆಯಾಗಿದ್ದೇನೆ, ಆಸ್ಕರ್ ಅಕಾಡೆಮಿ ನನ್ನನ್ನು ವಾಪಾಸ್ ಕರೆಸಿಕೊಳ್ಳುತ್ತದೆ ಎಂದು ಭಾವಿಸುತ್ತೇನೆ ಎಂದರು.

ವಿಲ್ ಸ್ಮಿತ್ ಜೇವಿಯರ್ ಬಾರ್ಡೆಮ್ ("ಬೀಯಿಂಗ್ ದಿ ರಿಕಾರ್ಡೋಸ್"), ಬೆನೆಡಿಕ್ಟ್ ಕಂಬರ್‌ಬ್ಯಾಚ್ ("ದ ಪವರ್ ಆಫ್ ದಿ ಡಾಗ್"), ಆಂಡ್ರೂ ಗಾರ್ಫೀಲ್ಡ್ ("ಟಿಕ್, ಟಿಕ್... ಬೂಮ್!") ಮತ್ತು ಡೆನ್ಜೆಲ್ ವಾಷಿಂಗ್ಟನ್ ("ದಿ ಟ್ರ್ಯಾಜೆಡಿ ಆಫ್ ಮ್ಯಾಕ್‌ಬೆತ್") ಅವರನ್ನು ಆಸ್ಕರ್ ರೇಸ್‌ನಲ್ಲಿ ಹಿಂದಿಕ್ಕಿ ದ್ದಾರೆ. ಕಿವುಡ ಕೌಟುಂಬಿಕ ನಾಟಕ "CODA" ಈ ಬಾರಿಯ ಆಸ್ಕರ್‌ನಲ್ಲಿ ಅತ್ಯುತ್ತಮ ಚಿತ್ರವಾಗಿ ಹೊರಹೊಮ್ಮಿದೆ. ಆಸ್ಕರ್ ಪ್ರಶಸ್ತಿ ಸಮಾರಂಭದಲ್ಲಿ ಅತ್ಯುತ್ತಮ ನಟ–ವಿಜೇತ ವಿಲ್ ಸ್ಮಿತ್ ತಮ್ಮ ಪತ್ನಿ ಬಗ್ಗೆ ಅಪಹಾಸ್ಯ ಮಾಡಿದ ಹಾಸ್ಯನಟ ಕ್ರಿಸ್ ರಾಕ್ ಅವರಿಗೆ ವೇದಿಕೆ ಮೇಲೇರಿ ಹೊಡೆದಿದ್ದು ತೀವ್ರ ಸದ್ದು ಮಾಡಿದೆ.

ಕಳೆದ ರಾತ್ರಿ ಆಸ್ಕರ್ ಪ್ರಶಸ್ತಿ ಪ್ರದಾನ ಸಮಾರಂಭ ಪಾಪ್ ಮೆಗಾಸ್ಟಾರ್ ಬೆಯೋನ್ಸ್ ಅವರ ಪ್ರದರ್ಶನದೊಂದಿಗೆ ಪ್ರಾರಂಭವಾಯಿತು. ಉಕ್ರೇನ್ ಬಿಕ್ಕಟ್ಟಿನ ಬಗ್ಗೆ ನೆರೆದಿದ್ದವರು ಒಂದು ಕ್ಷಣ ಮೌನಾಚರಣೆ ಸಲ್ಲಿಸಿದರು.

"CODA", ಕಿವುಡ ನಟರು ಪ್ರಮುಖ ಪಾತ್ರಗಳಲ್ಲಿ ನಟಿಸಿದ ಒಂದು ಉತ್ತಮ ಇಂಡೀ ನಾಟಕ, ಇತ್ತೀಚಿನವರೆಗೂ ಹಾಲಿವುಡ್‌ನ ಅತಿದೊಡ್ಡ ಬಹುಮಾನಕ್ಕಾಗಿ ದೀರ್ಘಾವಧಿಯ ಚಿತ್ರವೆಂದು ಭಾವಿಸಲಾಗಿತ್ತು, ನೆಟ್‌ಫ್ಲಿಕ್ಸ್‌ನಂತಹ ಪ್ರತಿಸ್ಪರ್ಧಿಗಳು ಪ್ರಾಬಲ್ಯ ಹೊಂದಿರುವ ಸ್ಟ್ರೀಮಿಂಗ್ ಮಾರುಕಟ್ಟೆಯಲ್ಲಿ ಹೊಸಬ Apple TV+ ಗಾಗಿ ಚಲನಚಿತ್ರವು ಐತಿಹಾಸಿಕ ಬಹುಮಾನವನ್ನು ಪಡೆದು ಕೊಂಡಿದೆ.



ಅತ್ಯುತ್ತಮ ನಟಿ: ಜೆಸ್ಸಿಕಾ ಚಸ್ಟೈನ್ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದಿದ್ದಾರೆ.

"ದಿ ಐಸ್ ಆಫ್ ಟ್ಯಾಮಿ ಫೇಯ್"ನಲ್ಲಿ ಜೀವನಕ್ಕಿಂತ ದೊಡ್ಡದಾದ US ಟೆಲಿ ವಾಂಜೆಲಿಸ್ಟ್ ಆಗಿ ಗಮನಾರ್ಹ ಅಭಿನಯ ಮಾಡಿದ್ದಾರೆ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ
ಸಾಧಕ ಮಹಿಳೆಯರಿಗೆ ಸನ್ಮಾನ



ಮೈಸೂರು, ಮಾ. 28– ನಗರದ ಹಿನಕಲ್‌ನಲ್ಲಿರುವ ವಾತ್ಸಲ್ಯ ಸೇವಾ ಫೌಂಡೇಷನ್ ಹಿರಿಯ ಜೀವಿಗಳ ಆಶ್ರಯ ತಾಣ ಹಾಗೂ ಮಹದೇಶ್ವರ ಕಲಾ ತಂಡದವರ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಸೋಮವಾರ ಸಾಧಕ ಮಹಿಳೆಯರನ್ನು ಗೌರವಿಸಲಾಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಪರಿಸರವಾದಿ ಭಾನು ಮೋಹನ್, ಪರಿಸರ ಉಳಿದರೆ ಮನುಷ್ಯ ಹೆಚ್ಚು ಕಾಲ ಆರೋಗ್ಯವಾಗಿ ಬದುಕಲು ಸಾಧ್ಯ, ಇಂದು ನಾವು ಪರಿಶುದ್ಧವಾದ ಗಾಳಿ, ಬೆಳಕು, ನೀರನ್ನು ಮಲಿನಗೊಳಿಸಿ, ಅನೇಕ ಕಾರಣಗಳಿಂದ ಸ್ವಾರ್ಥಕ್ಕಾಗಿ ಕಲುಷಿತಗೊಳಿಸುತ್ತಿದ್ದೇವೆ. ಇದು ಮುಂದಿನ ಯುವಪೀಳಿಗೆಗೆ ತುಂಬಾ ಅಪಾಯಕಾರಿ ಬೆಳವಣಿಗೆ. ಮುಂದಿನ ತಲೆಮಾರಿಗೆ ಏನಾದರೂ ಆಸ್ತಿ ಎಂದು ಬಿಟ್ಟುಹೋಗುವುದಿದ್ದರೆ ಅದು ಉತ್ತಮವಾದ ಆರೋಗ್ಯಕರವಾದ ಪರಿಸರ ಎಂದು ಅಭಿಪ್ರಾಯಪಟ್ಟರು.

ವಿದ್ಯಾರಣ್ಯಪುರಂನ ಸ್ಮಶಾನ ಕಾಯಕಯೋಗಿ ನಿಂಗಮ್ಮ ಮಾತನಾಡಿ, ಸ್ಮಶಾನ ಎಂದರೆ ಎಲ್ಲರೂ ಭಯಭೀತರಾಗುತ್ತಾರೆ. ಆದರೆ ನಾನು ಕಳೆದ 31 ವರ್ಷಗಳಿಂದ ಸ್ಮಶಾನದಲ್ಲಿಯೇ ನನ್ನ ಕಾಯಕವನ್ನು ಮಾಡುತ್ತಾ, ನನ್ನ ಕುಟುಂಬದೊಂದಿಗೆ ನಿರ್ಭಯದಿಂದ ಜೀವನ ನಿರ್ವಹಿಸುತ್ತಿದ್ದೇನೆ. ಎಲ್ಲರೂ ಸತ್ತ ಮೇಲೆ ಸ್ಮಶಾನಕ್ಕೆ ಬಂದರೆ, ನಾನು ಜೀವಂತವಾಗಿಯೇ, ಜೀವನಪರ್ಯಂತ ಸ್ಮಶಾನವಾಸಿಯಾಗಿ ನನ್ನ ಕಾರ್ಯವನ್ನು ನಿರ್ವಹಿಸುತ್ತಿರುವುದು ನನಗೆ ಹೆಮ್ಮೆ ತಂದಿದೆ ಎಂದು ತಿಳಿಸಿದರು. ಸಮಾರಂಭದಲ್ಲಿ ಸಮಾಜ ಸೇವಕಿ ಶಾಂತಕುಮಾರಿ, ಸುಮಿತ್ರಮ್ಮ, ಶಿವಮ್ಮ, ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ವೆಂಕಟೇಶ್, ಶಾರದಾ ವಿಲಾಸ ಕಾಲೇಜಿನ ಉಪನ್ಯಾಸಕ ರಾಜೇಂದ್ರಪ್ರಸಾದ್ ಹೊನ್ನಲಗೆರೆ, ಸನ್ನದು ಲೆಕ್ಕಿಗರಾದ ಎನ್.ಬಿ.ಆರಾಧ್ಯ, ಹಗಲು ಸೇವಾ ಕೇಂದ್ರದ ಪ್ರಭುಸ್ವಾಮಿ, ವಾತ್ಸಲ್ಯ ಸೇವಾ ಫೌಂಡೇಷನ್ ಅಧ್ಯಕ್ಷ ಎ.ಸಿ.ರವಿಕುಮಾರ್, ನಾಗರತ್ನ ಪ್ರೇಮ ಪ್ರಭುಸ್ವಾಮಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕೊಡಗಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ 6436 ವಿದ್ಯಾರ್ಥಿಗಳು



ಮಡಿಕೇರಿ,ಮಾ.28– ಕೊಡಗು ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆಯು ಸುಸೂತ್ರವಾಗಿ ಆರಂಭಗೊಂಡಿದ್ದು, ಜಿಲ್ಲೆಯ 37 ಪರೀಕ್ಷಾ ಕೇಂದ್ರಗಳಲ್ಲಿ ಸೋಮವಾರ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಶಾಂತಿಯುತವಾಗಿ ನಡೆದಿದೆ.

ಎಲ್ಲಿಯೂ ಗೊಂದಲಗಳಿಗೆ ಆಸ್ಪದ ಇಲ್ಲದಂತೆ ಪರೀಕ್ಷೆ ನಡೆದಿದ್ದು, ವಿದ್ಯಾರ್ಥಿಗಳು ಕೂಡ ಉತ್ಸಾಹದಿಂದಲೇ ಪರೀಕ್ಷೆ ಎದುರಿಸಿದರು. ದೂರದ ಊರುಗಳಿಂದ ಬೆಳಗ್ಗೆ 8.30ರ ವೇಳೆಗೆ ವಿದ್ಯಾರ್ಥಿಗಳು ನಿಗದಿತ ಪರೀಕ್ಷಾ ಕೇಂದ್ರಗಳಿಗೆ ಆಗಮಿಸಿ ಕೊನೆಯ ಹಂತದ ವ್ಯಾಸಂಗದಲ್ಲಿ ತೊಡಗಿದ್ದು ಕಂಡು ಬಂತು. ಇನ್ನು ಕೆಲ ಶಾಲೆಗಳ ಶಿಕ್ಷಕ ಶಿಕ್ಷಕಿಯರು ಮತ್ತು ಪೋಷಕರೇ ಮಕ್ಕಳನ್ನು ಪರೀಕ್ಷಾ ಕೇಂದ್ರಗಳಿಗೆ ಕರೆತಂದು ಮಕ್ಕಳಿಗೆ ಧೈರ್ಯದಿಂದಲೇ ಪರೀಕ್ಷೆ ಬರೆಯುವಂತೆ ಸಲಹೆ ಸೂಚನೆ ನೀಡುತ್ತಿದ್ದುದು ಸಾಮಾನ್ಯವಾಗಿತ್ತು.

ಪರೀಕ್ಷೆ ಬರೆದ 6436 ವಿದ್ಯಾರ್ಥಿಗಳು: ಜಿಲ್ಲೆಯಾದ್ಯಂತ 37 ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು 6680 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ತೆಗೆದುಕೊಂಡಿದ್ದು, ಈ ಪೈಕಿ 233 ವಿದ್ಯಾರ್ಥಿಗಳು ಪರೀಕ್ಷೆಗೆ ಗೈರಾಗಿದ್ದರು. ಇನ್ನು ವಿಶೇಷ ಕೊಠಡಿಗಳಲ್ಲಿ ಒಟ್ಟು 6 ಮಂದಿ ವಿಶೇಷಚೇತನ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಕೋವಿಡ್ ಕೇರ್ ಕೇಂದ್ರಗಳಲ್ಲಿ ಯಾವುದೇ ವಿದ್ಯಾರ್ಥಿಯೂ ಪರೀಕ್ಷೆ ಬರೆದಿಲ್ಲ ಎಂದು ಶಿಕ್ಷಣ ಇಲಾಖೆ ಪ್ರಕಟಣೆ ತಿಳಿಸಿದೆ. ಪರೀಕ್ಷೆಗಾಗಿ ಕೇಂದ್ರಗಳಿಗೆ ಆಗಮಿಸಿದ್ದ ಮಕ್ಕಳನ್ನು ಶಾಲೆಯ ಪ್ರವೇಶ ದ್ವಾರದಲ್ಲೇ ಸ್ಯಾನಿಟೈಸರ್ ಮತ್ತು ದೇಹ ತಾಪಮಾನ ತಪಾಸಣೆ ಪರೀಕ್ಷೆ ನಡೆಸಿ ಒಳಬಿಡಲಾಯಿತು. ಇದಕ್ಕಾಗಿಯೇ ಆರೋಗ್ಯ ಇಲಾಖೆಯ ಸಿಬ್ಬಂದಿಯನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು.

ಹಿಜಾಬ್ ವಿಚಾರದ ಕುರಿತು ಗೊಂದಲಗಳು ಸೃಷ್ಟಿಯಾಗಬಹುದೆನ್ನುವ ವಿಚಾರವಿದ್ದ ಕಾರಣ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಜಿಲ್ಲೆಯ ಯಾವುದೇ ಶಾಲೆಗಳ ಪರೀಕ್ಷಾ ಕೇಂದ್ರಗಳಲ್ಲೂ ಕೂಡ ಹಿಜಾಬ್ ಕುರಿತ ಗೊಂದಲ ಸೃಷ್ಠಿಯಾಗಲಿಲ್ಲ. ಎಲ್ಲಾ ವಿದ್ಯಾರ್ಥಿಗಳು ಕೂಡ ಆಯಾ ಶಾಲೆಗಳ ಸಮವಸ್ತ್ರದಲ್ಲೇ ಪರೀಕ್ಷಾ ಕೇಂದ್ರಗಳಿಗೆ ಹಾಜರಾಗಿದ್ದರು. ಜಿಲ್ಲಾಧಿಕಾರಿ ಡಾ.ಸತೀಶ್, ಮಡಿಕೇರಿ ತಹಸೀಲ್ದಾರ್ ಮಹೇಶ್ ಹಾಗೂ ಶಿಕ್ಷಣ ಇಲಾಖೆ ಸಿಬ್ಬಂದಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮಾ.31, ಜನರಲ್ ತಿಮ್ಮಯ್ಯ ಜನ್ಮ ದಿನಾಚರಣೆ

ಮಡಿಕೇರಿ, ಮಾ.28– ಜಿಲ್ಲಾಡಳಿತದಿಂದ ಪದ್ಮಭೂಷಣ ಜನರಲ್ ಕೆ.ಎಸ್.ತಿಮ್ಮಯ್ಯ ಅವರ 116ನೇ ಜನ್ಮ ದಿನಾಚರಣೆಯು



ಮಾ.31 ರಂದು ಬೆಳಗ್ಗೆ 10.30ಕ್ಕೆ ಜನರಲ್ ತಿಮ್ಮಯ್ಯ ಸ್ಮಾರಕ ಭವನ(ಸನ್ನಿಸೈಡ್)ದಲ್ಲಿ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕರ ಉಪಸ್ಥಿತಿಯಲ್ಲಿ ಜನರಲ್ ಕೆ.ಎಸ್. ತಿಮ್ಮಯ್ಯ ಅವರ ಜನ್ಮದಿನ ಆಚರಿಸಲಾಗುವುದು. ಇದೇ ವೇಳೆ ಜನರಲ್ ತಿಮ್ಮಯ್ಯ ಸ್ಮಾರಕ ಭವನ ಆವರಣದಲ್ಲಿರುವ ಅಪರೂಪದ ವಸ್ತುಗಳ ಮಾರಾಟ ಮಳಿಗೆ ಉದ್ಘಾಟಿಸಲಾಗುವುದು.

ಅಂದು ಸಾರ್ವಜನಿಕರು ಹಾಗೂ ಶಾಲಾ ಮಕ್ಕಳಿಗೆ ಸ್ಮಾರಕಕ್ಕೆ ಉಚಿತ ಪ್ರವೇಶದ ಅವಕಾಶ ಕಲ್ಪಿಸಲಾಗಿದೆ. ಇದರ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಕೋರಿದ್ದಾರೆ.

ಬೈಕ್ ಅಪಘಾತದಲ್ಲಿ ಟ್ಯಾಕ್ಸಿ ಚಾಲಕ ಸಾವು


ಮಡಿಕೇರಿ,ಮಾ.28–ಪಾದಚಾರಿಗೆ ಡಿಕ್ಕಿ ಹೊಡೆದಾಗ ಬೈಕ್‌ನಿಂದ ಬಿದ್ದು ಟ್ಯಾಕ್ಸಿ ಚಾಲಕರೊಬ್ಬರು ಮೃತಪಟ್ಟಿರುವ ಘಟನೆ ಕುಶಾಲನಗರದ ನಂಜರಾಯಪಟ್ಟಣದಲ್ಲಿ ನಡೆದಿದೆ.


ಮಡಿಕೇರಿ ನಗರದಲ್ಲಿ ಟ್ಯಾಕ್ಸಿ ಚಾಲಕರಾಗಿದ್ದ ಮರಗೋಡು ನಿವಾಸಿ ಕೊಂಪುಳಿ ದಯಾನಂದ ಬೈಕ್‌ನಲ್ಲಿ ತೆರಳುತ್ತಿದ್ದಾಗ ಬೈಕ್ ಪಾದಚಾರಿಗೆ ಡಿಕ್ಕಿ ಹೊಡೆದಿದೆ.

ಈ ವೇಳೆ ಆಯತಪ್ಪಿ ಬೈಕ್ ಚಲಾಯಿಸುತ್ತಿದ್ದ ದಯಾನಂದ ಕೆಳಗೆ ಬಿದ್ದ ಪರಿಣಾಮ ತಲೆಗೆ ಪೆಟ್ಟು ಬಿದ್ದು ಗಂಭೀರವಾಗಿ ಗಾಯಗೊಂಡರು. ಮೈಸೂರು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ಮಾರ್ಗಮಧ್ಯೆ ಅವರು ಅಸುನೀಗಿದ್ದಾರೆ. ಬೈಕ್ ಡಿಕ್ಕಿಯಾಗಿ ಗಾಯಗೊಂಡ ಪಾದಚಾರಿಯನ್ನು ಮಡಿಕೇರಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ದಯಾನಂದ ಅವರ ನಿಧನಕ್ಕೆ ಮಡಿಕೇರಿ ನಗರ ಟ್ಯಾಕ್ಸಿ ಚಾಲಕರ ಸಂಘದ ಅಧ್ಯಕ್ಷ ಜೈ ಸಂತಾಪ ಸೂಚಿಸಿದ್ದಾರೆ.

ಹೆರಿಟೇಜ್ ಸೆಂಟರ್ ಕಾಮಗಾರಿ ಜುಲೈನಲ್ಲಿ ಪೂರ್ಣ

ಎಂಎಲ್‌ಸಿ ವೀಣಾ ಅಚ್ಚಯ್ಯ ಪ್ರಶ್ನೆಗೆ ಸಚಿವ ಸುನೀಲ್‌ಕುಮಾರ್ ಉತ್ತರ





ಮಡಿಕೇರಿ, ಮಾ.28–ಮಡಿಕೇರಿಯ ಕೆ.ಬಾಡಗದಲ್ಲಿ ನಿರ್ಮಿಸುತ್ತಿರುವ ಕೊಡವ ಹೆರಿಟೇಜ್ ಸೆಂಟರ್ ಕಾಮಗಾರಿಯನ್ನು ಜುಲೈ ಅಂತ್ಯದಲ್ಲಿ ಪೂರ್ಣಗೊಳಿಸಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಪರವಾಗಿ ಇಂಧನ ಸಚಿವ ಸುನೀಲ್‌ಕುಮಾರ್ ವಿಧಾನ ಪರಿಷತ್‌ನಲ್ಲಿ ತಿಳಿಸಿದರು.

ಕಾಂಗ್ರೆಸ್ ಸದಸ್ಯೆ ವೀಣಾ ಅಚ್ಚಯ್ಯ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಹೆರಿಟೇಜ್ ಸೆಂಟರ್ ಕಾಮಗಾರಿಗೆ 27-05-2020ರಲ್ಲಿ 268 ಲಕ್ಷ ರೂ.ಗಳಿಗೆ ಅನುಮೋದನೆ ನೀಡಿರುವುದನ್ನು ಮಾರ್ಪಡಿಸಿ ಕಾಮಗಾರಿಯನ್ನು ಪರಿಷ್ಕೃತ ಅಂದಾಜು ಮೊತ್ತ 3,30,45,110 ರೂ.ಗಳಲ್ಲಿ ಕೈಗೊಳ್ಳಲು ಸಲ್ಲಿಸಿರುವ ಅಂದಾಜು ಪಟ್ಟಿಗೆ ಅನುಮೋದನೆ ನೀಡಲಾಗಿದೆ. 2020-21ರಲ್ಲಿ ಲಾಕ್‌ಡೌನ್ ಹಾಗೂ ಮಳೆಗಾಲವಿದ್ದ ಕಾರಣ ಕಾಮಗಾರಿ ವಿಳಂಬವಾಗಿದೆ. ಪ್ರಸ್ತುತ ಭೌತಿಕ ಕಾಮಗಾರಿ ಪೂರ್ಣಗೊಂಡಿರುತ್ತದೆ. ಅನುಷ್ಠಾನ ಸಂಸ್ಥೆಯಿಂದ ಕಾಮಗಾರಿ ಪೂರ್ಣಗೊಂಡ ಪ್ರಮಾಣ ಪತ್ರ ನಿರೀಕ್ಷಿಸಲಾಗುತ್ತಿದೆ. ಕೊಡಗಿನ ಬಗ್ಗೆ ಸರ್ಕಾರಕ್ಕೆ ಗೌರವವಿದೆ. ಕೊಡವ ಹೆರಿಟೇಜ್ ಸೆಂಟರ್ ಕಾಮಗಾರಿ ಜುಲೈ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು ಎಂದರು.

ಈ ಸಂದರ್ಭ ಮಧ್ಯ ಪ್ರವೇಶಿಸಿದ ವೀಣಾ ಅಚ್ಚಯ್ಯ, ಕೊಡಗಿನಲ್ಲಿ ಈಗಾಗಲೇ ಮಳೆಗಾಲ ಪ್ರಾರಂಭವಾಗಿದೆ. ಮಳೆಗಾಲದಲ್ಲಿ ಕಾಮಗಾರಿ ಪೂರೈಸುವುದು ಸಾಧ್ಯವಿಲ್ಲ. ಬೇಕಾದರೆ ಮುಂದಿನ ವರ್ಷ ಕಾಮಗಾರಿ ಪೂರೈಸುವುದಾಗಿ ಹೇಳಿ ಎಂದು ಇಂಧನ ಸಚಿವ ಸುನೀಲ್‌ಕುಮಾರ್ ಅವರಿಗೆ ಟಾಂಗ್ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸುನೀಲ್ ಕುಮಾರ್ ಇದೇ ಜುಲೈನಲ್ಲಿ ಕಾಮಗಾರಿ ಪೂರ್ಣ ಮಾಡುತ್ತೇವೆ. ಈ ಕುರಿತು ಅಧಿಕಾರಿಗಳ ಜೊತೆ ಚರ್ಚಿಸಿದ್ದೇನೆ. ಕಾಮಗಾರಿ ಉದ್ಘಾಟನೆಗೆ ನಿಮ್ಮನ್ನೂ ಆಹ್ವಾನಿಸುತ್ತೇವೆ ಎಂದರು.



ಕಳೆದ 3 ವರ್ಷಗಳಿಂದ ಇದೇ ಪ್ರಶ್ನೆಯನ್ನು ಸದನದಲ್ಲಿ ಕೇಳುತ್ತಿದ್ದೇನೆ. ಅಧಿಕಾರಿಗಳು ಅದೇ ಉತ್ತರ ನೀಡುತ್ತಿದ್ದಾರೆ. ಈ ಯೋಜನೆಯನ್ನು 2004ರಲ್ಲಿ ಕೇಂದ್ರ ಸರ್ಕಾರ ಮಂಜೂರು ಮಾಡಿದೆ. 2013ರಲ್ಲಿ ಕಾಮಗಾರಿ ಆರಂಭಿಸಿ 268 ಲಕ್ಷ ರೂ.ಯೋಜನೆಗೆ ಬಳಸಿದ್ದು, ಈ ಪೈಕಿ 170 ಲಕ್ಷ ರೂ. ಗುತ್ತಿಗೆದಾರರಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿ ಸರಿಯಾಗಿ ನಡೆಸದ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದ್ದು, ಅವರಿಂದಲೇ ಹಣ ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಆದರೆ ಈ ಯೋಜನೆಯಲ್ಲಿ 2 ಕೋಟಿ ರೂ. ಹಣ ವ್ಯರ್ಥವಾಗಿದೆ. ಏಕೆ ಹೀಗಾಗಿದೆ ಗೊತ್ತಿಲ್ಲ. ಕೊಡಗು ಪುಟ್ಟ ಜಿಲ್ಲೆ ಎಂದು ಯಾವ ಸರ್ಕಾರವೂ ದೊಡ್ಡ ಮೊತ್ತದ ಅನುದಾನ ನೀಡಿಲ್ಲ. ನೀಡಿದ ಅನುದಾನ ಕೂಡ ಸಮರ್ಪಕ ರೀತಿಯಲ್ಲಿ ವಿನಿಯೋಗ ಆಗುತ್ತಿಲ್ಲ.




–ವೀಣಾ ಅಚ್ಚಯ್ಯ, ವಿಧಾನಪರಿಷತ್ ಸದಸ್ಯೆ

ಕೊಡವ ಹೆರಿಟೇಜ್ ಸೆಂಟರ್ ಕಾಮಗಾರಿಯಲ್ಲಿ 2 ಐನ್‌ಮನೆಗಳ ಮೇಲ್ಛಾವಣಿ ಕೆಲಸ, ಪ್ರವೇಶ ದ್ವಾರ, ಅಡುಗೆ ಕೊಠಡಿ, ಮೆಟ್ಟಿಲುಗಳು, ಆಂಪಿಕ್ ಥಿಯೇಟರ್, ಗ್ರಂಥಾಲಯ, ವಿದ್ಯುದ್ದೀಕರಣ, ಕಿಟಕಿ–ಬಾಗಿಲುಗಳ ಜೋಡಣೆ ಕೆಲಸ ಪೂರ್ಣಗೊಂಡಿದೆ. ಹೊಸದಾಗಿ 25 ಕೆ.ವಿ. ಟ್ರಾನ್ಸ್‌ಫಾರ್ಮರ್ ಅಳವಡಿಕೆ ಕೆಲಸವೂ ಪೂರ್ಣವಾಗಿದೆ. ಸದರಿ ಕಾಮಗಾರಿಗೆ 47.91 ಲಕ್ಷ ರೂ. ಅನುದಾನ ಬಿಡುಗಡೆ ಮಾಡಬೇಕಿದೆ. ಕಾಮಗಾರಿಗೆ 5ನೇ ಕಂತಾಗಿ ಬಿಡುಗಡೆ ಮಾಡಿರುವ 29 ಲಕ್ಷ ರೂ.ಗಳಿಗೆ ಹಣ ಬಳಕೆ ಪ್ರಮಾಣ ಪತ್ರ, ಛಾಯಾಚಿತ್ರ, 3ನೇ ವ್ಯಕ್ತಿ ಅಥವಾ ಸಂಸ್ಥೆಯಿಂದ ಗುಣಮಟ್ಟ ಪರಿಶೀಲನಾ ವರದಿ, ಶಾಸನಬದ್ಧ ಕಟಾವಣೆಗಳ ವಿವರ ಹಾಗೂ ಕಾಮಗಾರಿ ಪೂರ್ಣಗೊಂಡಿರುವ ಪ್ರಮಾಣ ಪತ್ರದ ಪ್ರತಿ ಸಲ್ಲಿಸಿದ ನಂತರ ಬಾಕಿ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಲಾಗುವುದು.



–ಆನಂದ್ ಸಿಂಗ್, ಪ್ರವಾಸೋದ್ಯಮ ಸಚಿವರು.

ರೈಲಿಗೆ ಸಿಲುಕಿ ಕುರಿಗಾಹಿ, 32 ಕುರಿಗಳು ಸಾವು



ಶ್ರೀರಂಗಪಟ್ಟಣ, ಮಾ.28(ವಿನಯ್ ಕಾರೇಕುರ)– ಚಲಿಸುವ ರೈಲಿಗೆ ಸಿಲುಕಿ ಓರ್ವ ಕುರಿಗಾಹಿ ಹಾಗೂ 32 ಕುರಿಗಳು ಮೃತಪಟ್ಟಿರುವ ಘಟನೆ ಇಂದು ಸಂಜೆ ಸಂಭವಿಸಿದೆ.

ಮೃತಪಟ್ಟ ಕುರಿಗಾಹಿಯನ್ನು ಮಂಡ್ಯ ತಾಲೂಕಿನ ಕೆ. ಬೆಟ್ಟಹಳ್ಳಿ ಗ್ರಾಮದ ಲೇ. ಚನ್ನೇಗೌಡ ಅವರ ಪುತ್ರ ನಿಂಗೇಗೌಡ (47) ಎಂದು ಗುರುತಿಸಲಾಗಿದೆ.

ಮೃತ ನಿಂಗೇಗೌಡ ತನ್ನ ಕುರಿಮಂದೆಯನ್ನು ಶ್ರೀರಂಗಪಟ್ಟಣ ಸಮೀಪದ ಪಶ್ಚಿಮವಾಹಿನಿ–ಪಾಲಹಳ್ಳಿ ನಡುವೆ ರೈಲ್ವೆ ಹಳಿ ಬಳಿ ಮೇಯಿಸುತ್ತಿದ್ದನೆನ್ನಲಾಗಿದೆ. ಈ ವೇಳೆ ಮೈಸೂರಿನಿಂದ ಶ್ರೀರಂಗಪಟ್ಟಣ ಮಾರ್ಗವಾಗಿ ಬೆಂಗಳೂರಿಗೆ ತೆರಳುತ್ತಿದ್ದ ಗೋಲ್ ಗುಂಬಸ್ ಎಕ್ಸ್‌ಪ್ರೆಸ್ ರೈಲು ಆಗಮಿಸಿದೆ. ರೈಲು ಬರುವುದನ್ನು ಕಂಡ ನಿಂಗೇಗೌಡ ಕುರಿಗಳನ್ನು ರೈಲ್ವೆ ಹಳಿಯಿಂದ ಹೊರ ಅಟ್ಟಲು ಓಡಿದ್ದಾನೆ. ಈ ವೇಳೆ ಕುರಿಗಳೊಂದಿಗೆ ನಿಂಗೇಗೌಡ ಸಹ ಸಿಲುಕಿ ಸ್ಥಳದಲ್ಲೇ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ದುರ್ಘಟನೆಯಲ್ಲಿ 32 ಕುರಿಗಳೂ ಮೃತಪಟ್ಟಿವೆ. ಸುದ್ದಿತಿಳಿದು ಸ್ಥಳಕ್ಕೆ ಆಗಮಿಸಿದ ಮೈಸೂರು ಹಾಗೂ ಶ್ರೀರಂಗಪಟ್ಟಣ ರೈಲ್ವೆ ಪೊಲೀಸರು ಪರಿಶೀಲನೆ ನಡೆಸಿದ್ದು, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ದೇವರಾಜು ನಿಧನ



ಕೆ.ಆರ್.ಪೇಟೆ, ಮಾ.28– ತಾಲೂಕಿನ ಮಡುವಿನಕೊಡಿ ಗ್ರಾಮದ ದೇವರಾಜು (65) ಸೋಮವಾರ ನಿಧನರಾದರು. ಮೃತರು ಓರ್ವ ಪುತ್ರ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಗ್ರಾಮದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು.

ಮಲ್ಲೇಶ್‌ಗೌಡ



ಶ್ರೀರಂಗಪಟ್ಟಣ, ಮಾ.28– ತಾಲೂಕಿನ ಹಂಗರಹಳ್ಳಿ ಗ್ರಾಮದ ಜೆಡಿಎಸ್ ಮುಖಂಡ ಹೆಚ್.ಸಿ. ಮಲ್ಲೇಶ್‌ಗೌಡ (68) ನಿಧನರಾಗಿದ್ದಾರೆ. ಮೃತರು ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಮಂಗಳವಾರ) ಬೆಳಗ್ಗೆ 11 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಕ್ಷಿಣ ಪದವೀಧರ ಚುನಾವಣೆ: ಬಿಜೆಪಿ ಬಂಡಾಯ ಶಮನ

ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಗೆಲುವಿಗೆ ಸಹಕರಿಸೋಣ: ಡಾ.ಈ.ಸಿ.ನಿಂಗರಾಜ್‌ಗೌಡ



ಮಂಡ್ಯ, ಮಾ.28(ಮೋಹನ್‌ರಾಜ್)– ಬಿಜೆಪಿಯ ವರಿಷ್ಠರು ಆಯ್ಕೆ ಮಾಡಿದ ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ. ರವಿಶಂಕರ್ ಗೆಲುವಿಗೆ ಎಲ್ಲರೂ ಸಹಕರಿಸೋಣ ಎಂದು ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ಡಾ.ಈ.ಸಿ.ನಿಂಗರಾಜ್‌ಗೌಡ ಹೇಳಿದರು.

ನಗರದಲ್ಲಿರುವ ಸ್ಪೋರ್ಟ್ಸ್ ಸಂಸ್ಥೆ ಸಭಾಂಗಣದಲ್ಲಿ ಡಾ.ಈ.ಸಿ.ನಿಂಗರಾಜ್‌ಗೌಡ ಸ್ನೇಹ ಬಳಗ ಆಯೋಜಿಸಿದ್ದ ದಕ್ಷಿಣ ಪದವೀಧರ ಕ್ಷೇತ್ರದ ಮತದಾರರ ನೋಂದಣಿ ಕಾರ್ಯಕ್ರಮದ ಕೃತಜ್ಞತಾ ಸಭೆಯಲ್ಲಿ ಮಾತನಾಡಿದರು. ನಾವು ವಿದ್ಯಾರ್ಥಿ ದಿಸೆಯಿಂದ ಎಬಿವಿಪಿಯ ಚಳುವಳಿಯಿಂದ ಬೆಳೆದು, ಬಿಜೆಪಿ ಪಕ್ಷದ ತತ್ವ ಮತ್ತು ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಬರುತ್ತಿದ್ದೇವೆ, ನಮ್ಮ ಕುಟುಂಬ ನಮಗೆ ಸಂಪೂರ್ಣ ಸಹಕಾರ ನೀಡಿದೆ. ಸಂಘ ಪರಿವಾರ ಮತ್ತು ಬಿಜೆಪಿ ಪಕ್ಷದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಸಂಘಟನೆಯಲ್ಲಿ ತೊಡಗಿದ್ದವರು ನಾವು ಎಂದು ಸ್ಮರಿಸಿದರು.

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಹತ್ತಿರ ಬರುತ್ತಿದ್ದಂತೆ ಎಲ್ಲರೂ ನಮ್ಮನ್ನು ಬಿಜೆಪಿ ಅಭ್ಯರ್ಥಿಯಾಗಿ ಬಂದರೆ ಬೆಂಬಲಿಸುತ್ತೇವೆ ಎಂದಿದ್ದರು. ಆದರೆ, ರಾಜಕಾರಣದ ವಿದ್ಯಮಾನಗಳಿಂದ ಟಿಕೆಟ್ ತಪ್ಪಿತು, ಯಾರೂ ಬೇಸರ ಮಾಡಿಕೊಳ್ಳದೆ ವರಿಷ್ಠರ ಆಯ್ಕೆಯನ್ನು ಗೌರವಿಸಿ, ಬಿಜೆಪಿ ಅಭ್ಯರ್ಥಿಯಾದ ಮೈ.ವಿ.ರವಿಶಂಕರ್ ಅವರನ್ನು ಬೆಂಬಲಿಸೋಣ ಎಂದು ಮನವಿ ಮಾಡಿದರು.

ಬಳಿಕ ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಮಾತನಾಡಿ, ನಾನು ಕಳೆದ ಚುನಾವಣೆಯಲ್ಲಿ ಕೇವಲ 163 ಮತಗಳಿಂದ ಪರಾಜಿತಗೊಂಡಿದ್ದೇನೆ, ಬಿಜೆಪಿ ವರಿಷ್ಠರು ಮತ್ತೊಮ್ಮೆ ಅವಕಾಶ ನೀಡಿದ್ದಾರೆ, ನನಗೆ ಟಿಕೆಟ್ ಲಭಿಸುತ್ತದೆ ಎಂದು ಭಾವಿಸಿರಲಿಲ್ಲ, ಈ.ಸಿ.ನಿಂಗರಾಜುಗೌಡ ಅವರನ್ನು ನೀವೂ ಪ್ರಯತ್ನ ಮಾಡಿ ಎಂದು ಹೇಳಿದ್ದೆ, ಅದರಂತೆ ಅವರು ಕಾರ್ಯೋನ್ಮುಖರಾಗಿದ್ದರು ಎಂದು ನುಡಿದರು. ಈ ಬಾರಿಯ ಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸವಿದೆ, ಪ್ರಧಾನ ಮಂತ್ರಿ ನರೇಂದ್ರಮೋದಿ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜನಪರ ಯೋಜನೆಗಳು ಬಿಜೆಪಿ ಅಭ್ಯರ್ಥಿ ಗೆಲುವಿಗೆ ಶ್ರೀರಕ್ಷೆಯಾಗಿದೆ ಎಂದು ನುಡಿದರು. ಇದೇ ಸಂದರ್ಭ ಡಾ.ಈ.ಸಿ.ನಿಂಗರಾಜ್‌ಗೌಡ ಅವರನ್ನು ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅಭಿನಂದಿಸಿ ಗೆಲುವಿಗೆ ಸಹಕಾರ ನೀಡುವಂತೆ ಕೋರಿದರು. ಕಾರ್ಯಕ್ರಮದಲ್ಲಿ ಬಳಗದ ಪದಾಧಿಕಾರಿಗಳಾದ ಪಂಚಾಕ್ಷರಿ ಗಂಗಾಡ್ಕರ್, ಕಲಾವಿದ ಶಂಕ್ರಪ್ಪ, ಶಂಭುಲಿಂಗೇಗೌಡ, ಪ್ರಾಂಶುಪಾಲ ಪುಟ್ಟೇಗೌಡ, ಶ್ರೀಕಂಠೇಗೌಡ, ಉಪನ್ಯಾಸಕರಾದ ಡಾ.ನರಸಿಂಹಸ್ವಾಮಿ, ನಾಗೇಂದ್ರ, ಲೋಹಿತ್ ಕುಮಾರ್, ಅನಿಲ್‌ಕುಮಾರ್ ಮತ್ತಿತರರಿದ್ದರು.

ವೈಷ್ಣವಿ ನದಿಯಲ್ಲಿ ದನ ತೊಳೆಯಲು ಹೋದ ವ್ಯಕ್ತಿ ನಾಪತ್ತೆ



ನಾಗಮಂಗಲ, ಮಾ.28– ದನ ತೊಳೆಯಲು ಹೋದ ವ್ಯಕಿಯೊಬ್ಬ ಬೆಳ್ಳೂರು ಹೋಬಳಿಯ ತೊರೆಮಾವಿನಕೆರೆಯ ಗ್ರಾಮದ ಬಳಿಯಿರುವ ವೀರ ವೈಷ್ಣವಿ ನದಿಯಲ್ಲಿ ನಾಪತ್ತೆಯಾದ ಘಟನೆ ವರದಿಯಾಗಿದೆ. ಗ್ರಾಮದ ಮುನಿಸ್ವಾಮಿ ಎಂಬುವರ ಮಗ ಕೃಷ್ಣಪ್ಪ ನಾಪತ್ತೆಯಾಗಿದ್ದು, ಭಾನುವಾರ ಮಧ್ಯಾಹ್ನ ದನ ಮತ್ತು ಆಡುಗಳನ್ನು ಮೇಯಿಸಲು ತೆರಳಿದ್ದ ವೇಳೆ ಗ್ರಾಮದ ಬಳಿ ಹರಿಯುವ ವೀರ ವೈಷ್ಣವಿ ನದಿಯಲ್ಲಿ ದನ ತೊಳೆಯಲು ಹೋಗಿ ನಾಪತ್ತೆಯಾಗಿದ್ದಾನೆ ಎನ್ನಲಾಗಿದೆ. ಸಂಜೆ ಐದು ಗಂಟೆ ಸುಮಾರಿಗೆ ಕೇವಲ ದನಗಳು ಮಾತ್ರ ಮನೆಗೆ ಬಂದಿದ್ದು, ಕೃಷ್ಣಪ್ಪ ಬರದಿರುವುದರಿಂದ ಅನುಮಾನಗೊಂಡ ಕುಟುಂಬಸ್ಥರು ಕೆರೆಯ ಬಳಿ ಹೋಗಿ ನೋಡಿದಾಗ ಆಡುಗಳು ಮೇಯುತ್ತಿದ್ದವೆನ್ನಲಾಗಿದೆ. ನದಿಯ ದಡದಲ್ಲಿ ಅವನ ಬಟ್ಟೆ, ಚಪ್ಪಲಿ, ಟವಲ್ ಇದ್ದುದನ್ನು ಕಂಡು ಕುಟುಂಬಸ್ಥರು ಬೆಳ್ಳೂರು ಠಾಣೆಯಲ್ಲಿ ದೂರು ದಾಖಲು ಮಾಡಿದ್ದಾರೆ. ಅಗ್ನಿ ಶಾಮಕದಳದ ಸಿಬ್ಬಂದಿ ನದಿಯಲ್ಲಿ ತಪಾಸಣೆ ನಡೆಸಿದ್ದು, ನುರಿತ ಈಜುಗಾರರನ್ನೂ ಕರೆಸಲಾಗಿದೆ.

ಮೆಳ್ಳಹಳ್ಳಿ ಡೈರಿ ಅಧ್ಯಕ್ಷರಾಗಿ ಎಂ.ಸಿ.ಲಕ್ಷ್ಮಿ ಆಯ್ಕೆ



ಭಾರತೀನಗರ, ಮಾ.28(ಅ.ಸತೀಶ್)– ಇಲ್ಲಿಗೆ ಸಮೀಪದ ಮೆಳ್ಳಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಕ್ಕೆ ಅಧ್ಯಕ್ಷರಾಗಿ ಎಂ.ಸಿ.ಲಕ್ಷ್ಮಿ ಶಿವಲಿಂಗಯ್ಯ, ಉಪಾಧ್ಯಕ್ಷರಾಗಿ ಅಭಿಲಾಷ ಶ್ರೀನಿವಾಸ ಅವಿರೋಧವಾಗಿ ಆಯ್ಕೆಯಾಗಿದ್ದು, ಶಾಸಕ ಡಿ.ಸಿ.ತಮ್ಮಣ್ಣ ಗೌರವಿಸಿದರು.

ನಂತರ ಮಾತನಾಡಿದ ಶಾಸಕ ಡಿ.ಸಿ. ತಮ್ಮಣ್ಣ, ಸಂಘದ ಅಭಿವೃದ್ಧಿಗೆ ಜಾತ್ಯತೀತವಾಗಿ ಶ್ರಮಿಸಬೇಕು. ಚುನಾವಣೆಗೆ ಮಾತ್ರ ಪಕ್ಷ ಸೀಮಿತವಾಗಿರಬೇಕು. ಉಳಿದ ದಿನಗಳಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಂಘದ ಅಭಿವೃದ್ಧಿಗೆ ಶ್ರಮಿಸಬೇಕೆಂದು ಕಿವಿಮಾತು ಹೇಳಿದರು.

ಇದೇ ವೇಳೆ ಜೆಡಿಎಸ್ ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಎಚ್.ಎಂ. ಮರಿಮಾದೇಗೌಡ, ಚನ್ನೇಗೌಡ, ಕೆ.ರೇವಣ್ಣ, ಎಂ.ಪಿ.ಮಹದೇವು, ಸಿ.ಮಹದೇವು, ರಾಜಣ್ಣ, ಶ್ರೀನಿವಾಸ್, ಟಿ.ವೆಂಕಟೇಶ್, ನಿರ್ದೇಶಕರಾದ ಸಿ.ಮಂಜುಳಾ, ನಿಂಗಮ್ಮ, ಶಿವಮ್ಮ, ನಾಗಮ್ಮ, ಪುಟ್ಟಮ್ಮ, ಕೆಂಪಮ್ಮ, ಶಾಂತಮ್ಮ ಸೇರಿದಂತೆ ಇತರರಿದ್ದರು.

ಗೋವರ್ಧನ ಗಿರಿಯಲ್ಲಿ ಗೋವಿಂದ ನಾಮಸ್ಮರಣೆ

ಶ್ರೀವೇಣು ಗೋಪಾಲಸ್ವಾಮಿ ಅದ್ಧೂರಿ ರಥೋತ್ಸವ



ಗುಂಡ್ಲುಪೇಟೆ, ಮಾ.28(ಸೋಮ್.ಜಿ)– ನಾಡಿನ ಪುರಾಣ ಪ್ರಸಿದ್ಧ ಯಾತ್ರಾ ಸ್ಥಳವಾದ ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಸೋಮವಾರ ಯುಗಾದಿ ರಥೋತ್ಸವ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ಮುಜರಾಯಿ ಅಧಿಕಾರಿ ಹಾಗೂ ತಹಸೀಲ್ದಾರ್ ರವಿಶಂಕರ್ ಅವರು ರಥಕ್ಕೆ ಪೂಜೆ ಸಲ್ಲಿಸುವುದರೊಂದಿಗೆ ರಥೋತ್ಸವಕ್ಕೆ ಚಾಲನೆ ನೀಡಿದರು. ಕಳೆದ ಎರಡು ವರ್ಷದಿಂದ ಕೊರೊನಾ ಮಾರ್ಗಸೂಚಿಯಂತೆ ಕೇವಲ ಸಾಂಪ್ರದಾಯಕವಾಗಿ ರಥೋತ್ಸವ ನಡೆದಿತ್ತು. ಈ ಬಾರಿ ಅದ್ಧೂರಿಯಾಗಿ ರಥೋತ್ಸವ ನಡೆಯಿತು.

ಜಾತ್ರೆಯ ಅಂಗವಾಗಿ ದೇವಾಲಯವನ್ನು ಮುಸುಕಿನ ಜೋಳದ ತೆನೆ ಹಾಗೂ ವಿವಿಧ ಅಲಂಕಾರಿಕ ಪುಷ್ಪ ಮತ್ತು ತಳಿರು ತೋರಣದೊಂದಿಗೆ ಅಲಂಕರಿಸಲಾಗಿತ್ತು. ಬಣ್ಣ ಬಣ್ಣದ ಬಾವುಟ ಸೇರಿದಂತೆ ಸರ್ವ ರೀತಿಯಲ್ಲೂ ಅಲಂಕಾರಗೊಂಡಿದ್ದ ರಥದಲ್ಲಿ ರುಕ್ಮಿಣಿ, ಸತ್ಯಭಾಮ ಸಮೇತನಾದ ಶ್ರೀ ವೇಣುಗೋಪಾಲಸ್ವಾಮಿಯ ಉತ್ಸವ ಮೂರ್ತಿಯನ್ನು ಇರಿಸಿ, ರಥವನ್ನು ಗೋವಿಂದಾ... ಗೋಪಾಲ... ನಾಮಸ್ಮರಣೆಯೊಂದಿಗೆ ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿಸಲಾಯಿತು.

ವಿಶೇಷವಾಗಿ ಕಾಡಿನಲ್ಲಿ ಬೆಳೆದ ಹಂಬು ಮತ್ತು ಬೊಂಬುಗಳಿಂದ ತಯಾರಿಸಲಾಗಿದ್ದ ರಥವನ್ನು ಅಕ್ಕ– ಪಕ್ಕದ ಗ್ರಾಮಸ್ಥರು, ರಾಜ್ಯ ಹಾಗೂ ಹೊರ ರಾಜ್ಯಗಳಾದ ತಮಿಳುನಾಡು ಮತ್ತು ಕೇರಳದಿಂದ ಆಗಮಿಸಿದ್ದ ಸಾವಿರಾರು ಭಕ್ತರು ಎಳೆದು ಸ್ವಾಮಿಯ ಕೃಪೆಗೆ ಪಾತ್ರರಾದರು.

ಪ್ರತಿ ಬಾರಿಯಂತೆ ಈ ಬಾರಿಯೂ ಭಕ್ತರ ಸಂಖ್ಯೆ ಅಧಿಕವಾಗಿದ್ದರಿಂದ ಸಹಸ್ರಾರು ಭಕ್ತರು ಸರದಿ ಸಾಲಿನಲ್ಲಿ ಬಿರು ಬಿಸಿಲನ್ನು ಲೆಕ್ಕಿಸದೇ ನಿಂತು ಗೋಪಾಲಸ್ವಾಮಿಯ ದರ್ಶನ ಪಡೆದು ಪುನೀತರಾದರು.

ಬೆಟ್ಟಕ್ಕೆ ಖಾಸಗಿ ವಾಹನಗಳ ಪ್ರವೇಶವನ್ನು ನಿಷೇಧಿಸಿದ್ದರಿಂದ ಭಕ್ತರೆಲ್ಲರೂ ಸಾರಿಗೆ ಸಂಸ್ಥೆಯ ಬಸ್ಸಿನಲ್ಲಿಯೇ ಪ್ರಯಾಣಿಸಬೇಕಾಗಿತ್ತು. ರಥೋತ್ಸವಕ್ಕೆ ಆಗಮಿಸುವ ಭಕ್ತರಿಗಾಗಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗಿತ್ತು.

ಭಕ್ತರು ಹಾಗೂ ಪ್ರವಾಸಿಗರಿಗೆ ದಾನಿಗಳಿಂದ ಪ್ರಸಾದ ವ್ಯವಸ್ಥೆ ಹಾಗೂ ಪಟ್ಟಣದ ಪೊಲೀಸರಿಂದ ಮಜ್ಜಿಗೆ ವಿತರಣೆ ನಡೆಸಲಾಯಿತು. ಪೊಲೀಸ್, ಅರಣ್ಯ, ಕಂದಾಯ, ಅಗ್ನಿಶಾಮಕ ದಳ, ಆರೋಗ್ಯ ಇಲಾಖೆಯ ಅಧಿಕಾರಿಗಳು ಕರ್ತವ್ಯ ನಿರ್ವಹಿಸಿದರು. ಜಾತ್ರೆ ಪ್ರಯುಕ್ತ ಕೆಎಸ್‌ಆರ್‌ಟಿಸಿ ವತಿಯಿಂದ 30ಕ್ಕೂ ಹೆಚ್ಚು ವಿಶೇಷ ಬಸ್ ಸೌಲಭ್ಯ ನೀಡಿ ಭಕ್ತರಿಗೆ ಅನುಕೂಲ ಕಲ್ಪಿಸಲಾಗಿತ್ತು.

ರಥೋತ್ಸವದಲ್ಲಿ ಶಾಸಕ ಸಿ.ಎಸ್.ನಿರಂಜನ ಕುಮಾರ್, ಪ್ರಧಾನ ಅರ್ಚಕರಾದ ಗೋಪಾಲ ಕೃಷ್ಣಭಟ್ (ಗೋಪಿ), ಲಕ್ಷ್ಮೀಪತಿ, ಮಾಜಿ ಸಂಚಾಲಕ ಜಿ.ಸಿ.ನಾಗರಾಜು, ಕುಟುಂಬಸ್ಥರು ಸೇರಿದಂತೆ ಸಾವಿರಾರು ಭಕ್ತರು ಹಾಜರಿದ್ದರು.

ಮುದುಕು ಮಾರಮ್ಮನ ಹಬ್ಬ: ವಿಜೃಂಭಣೆಯ ತಂಪು, ಮಡೆ ಉತ್ಸವ





ಚಾಮರಾಜನಗರ, ಮಾ.28(ಎಸ್‌ಎಸ್)– ನಗರದ ಮುದುಕು ಮಾರಮ್ಮ ಹಬ್ಬದ ಅಂಗವಾಗಿ ತಂಪು, ಮಡೆ ಉತ್ಸವ ಎರಡು ದಿನ ವಿಜೃಂಭಣೆಯಿಂದ ನೆರವೇರಿತು

ಸೋಮವಾರ ರಾತ್ರಿಯಿಂದ ಮಂಗಳವಾರ ಬೆಳಗ್ಗೆಯ ತನಕ ಮಾರಮ್ಮನ ದೇವಸ್ಥಾನದ ಮುಂಭಾಗ ಹಬ್ಬದ ಸಂಭ್ರಮ ಕಳೆಗಟ್ಟಿತ್ತು. ಹಬ್ಬದ ಅಂಗವಾಗಿ ಸಂತೇಮರಹಳ್ಳಿ ವೃತ್ತ, ನಾಯಕರ ಬೀದಿ ಹಾಗೂ ಉಪ್ಪಾರ ಬೀದಿಗಳಲ್ಲಿ ದೀಪಾಲಂಕಾರ ಮಾಡಲಾಗಿತ್ತು. ಹಳೆಯ ಬಸ್ ನಿಲ್ದಾಣದ ಬಳಿ ಇರುವ ಮಾರಿಗುಡಿ ದೇವಸ್ಥಾನದ ಮುಂಭಾಗವನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು ಹಬ್ಬದ ಅಂಗವಾಗಿ ದೇವಸ್ಥಾನದ ಸುತ್ತ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ತಲೆಮಾರುಗಳಿಂದ ಆಚರಣೆ: ನಗರದಲ್ಲಿ ಹಲವು ತಲೆಮಾರುಗಳಿಂದ ನಾಯಕ ಹಾಗೂ ಉಪ್ಪಾರ ಸಮುದಾಯದವರು ಸೇರಿ ಈ ಹಬ್ಬವನ್ನು ಆಚರಿಸುತ್ತಿದ್ದು, ವರ್ಷದಿಂದ ವರ್ಷಕ್ಕೆ ಉತ್ಸವ ಜೋರಾಗುತ್ತಿದೆ. ಮಾರಮ್ಮನಿಗೆ ಹರಕೆ ಹೊತ್ತ ಮಂದಿ ರಾತ್ರಿ ಸಾವಿರಾರು ಸಂಖ್ಯೆಯಲ್ಲಿ ಸಾಮೂಹಿಕವಾಗಿ ಮೆರವಣಿಗೆಯಲ್ಲಿ ಬಂದು ತಂಪು ಸೇವೆ ಮಾಡುವುದು ಇಲ್ಲಿನ ವಿಶೇಷ.

ಆದರೆ, ಕಳೆದೆರಡು ವರ್ಷದಿಂದ ಕೊರೊನಾದಿಂದ ಹಬ್ಬವನ್ನು ಸಾಂಪ್ರದಾಯಕ ಆಚರಣೆಗಷ್ಟೇ ಸೀಮಿತಗೊಳಿಸಲಾಗಿತ್ತು. ಈ ಬಾರಿ ಕೊರೊನಾ ಇಳಿಮುಖವಾಗಿದ್ದರಿಂದ ಅದ್ಧೂರಿಯಾಗಿ ಹಬ್ಬ ಆಚರಿಸಲಾಯಿತು. ಸೋಮವಾರ ರಾತ್ರಿ ಮಾರಮ್ಮನಿಗೆ ಸಾವಿರಾರು ಮಹಿಳೆಯರು ತಂಪು ಮತ್ತು ಮಡೆ ಸೇವೆ ಸಲ್ಲಿಸಿದರು. ಮಂಗಳವಾರ ಸೂರ್ಯೋದಯಕ್ಕೂ ಮುನ್ನ ದೇವಸ್ಥಾನದ ಆವರಣದಲ್ಲಿ ಮಡೆ ಸೇವೆ ಸಲ್ಲಿಸಿದರು. ಬಳಿಕ, ನಗರದ ಸುತ್ತಲಿನ ಗ್ರಾಮಗಳಿಂದ ಸತ್ತಿಗೆ, ಸೂರಾಪಾನಿಗಳನ್ನು ತಂದು ವಿಜೃಂಭಣೆಯಿಂದ ಮೆರವಣಿಗೆ ನಡೆಸಲಾಯಿತು. ದೇವಸ್ಥಾನದ ಮುಂಭಾಗ ನೆರೆದಿದ್ದ ಸಾವಿರಾರು ಭಕ್ತರು ಸತ್ತಿಗೆ, ಸೂರಾಪಾನಿಗಳಿಗೆ ವೀಳ್ಯದೆಲೆ, ಕಾಸು ಎಸೆದರು.

ನೆಂಟರಿಷ್ಟರ ಭೇಟಿ: ಮಾರಮ್ಮನ ಹಬ್ಬದ ಅಂಗವಾಗಿ ಜಿಲ್ಲೆಯ ವಿವಿಧ ಗ್ರಾಮಗಳು ಹಾಗೂ ಹೊರ ಜಿಲ್ಲೆಗಳಿಂದ ಬಂಧು ಬಳಗದವರು ಬಂದಿದ್ದು, ಎಲ್ಲೆಡೆ ಸಂಭ್ರಮ ಮನೆ ಮಾಡಿತ್ತು ಮೆರವಣಿಗೆ ವೇಳೆ ಯುವಕರು, ಮಕ್ಕಳು ಸಂಭ್ರಮದಿಂದ ಕುಣಿದು ಕುಪ್ಪಳಿಸಿದರು. ಯುಗಾದಿ ಹಬ್ಬಕ್ಕೂ ಮುನ್ನ ಎಲ್ಲೆಡೆ ಮಾರಿಹಬ್ಬ ನಡೆಯುತ್ತವೆ. ಕಷ್ಟಗಳೆಲ್ಲ ತೀರಲಿ, ಹೊಸ ಸಂವತ್ಸರದಲ್ಲಿ ಉತ್ತಮ ಮಳೆ, ಬೆಳೆ ಬಂದು ಸಮೃದ್ಧಿ ತರಲಿ ಎಂದು ಜನರು ಬೇಡಿಕೊಳ್ಳುತ್ತಾರೆ.

ಜಿಲ್ಲೆಯಲ್ಲಿ ಸುಲಲಿತವಾಗಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ



ಚಾಮರಾಜನಗರ, ಮಾ.28(ಎಸ್‌ಎಸ್)– ಜಿಲ್ಲೆಯಲ್ಲಿ ಸೋಮವಾರ ಎಸ್‌ಎಸ್‌ಎಲ್‌ಸಿ ಪ್ರಥಮ ಭಾಷೆ ಪರೀಕ್ಷೆ ಸುಲಲಿತವಾಗಿ ನಡೆಯಿತು. ಜಿಲ್ಲೆಯ ಎಲ್ಲಾ 58 ಪರೀಕ್ಷಾ ಕೇಂದ್ರಗಳಲ್ಲಿ ಬೆಳಗ್ಗೆ 10.30ರಿಂದ ಮಧ್ಯಾಹ್ನ 1.45ರವರೆಗೆ ಪರೀಕ್ಷೆ ನಡೆಯಿತು.

ಜಿಲ್ಲೆಯಲ್ಲಿ ಪ್ರಥಮ ಭಾಷೆ ಪರೀಕ್ಷೆಯನ್ನು 12,207 ವಿದ್ಯಾರ್ಥಿಗಳು ತೆಗೆದುಕೊಂಡಿದ್ದರು. ಈ ಪೈಕಿ 11,845ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಇನ್ನುಳಿದ 362 ವಿದ್ಯಾರ್ಥಿಗಳು ಗೈರಾಗಿದ್ದಾರೆ.


ಜಿಲ್ಲಾಧಿಕಾರಿ ಕೆಎಂ.ಗಾಯತ್ರಿ ಡಿಡಿಪಿಐ ಎಸ್.ಎನ್.ಮಂಜುನಾಥ್ ಅವರು ವಿವಿಧ ಪರೀಕ್ಷಾ ಕೇಂದ್ರಗಳಿಗೆ ತೆರಳಿ ಪರಿಶೀಲನೆ ನಡೆಸಿದರು. ಜಿಲ್ಲಾ ನೋಡೆಲ್ ಅಧಿಕಾರಿಯಾಗಿ ಮೈಸೂರಿನ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಎನ್.ಗೀತಾಂಬ ಅವರನ್ನು ನೇಮಿಸಲಾಗಿತ್ತು. ಮಾ.30ರಂದು ದ್ವಿತೀಯ ಭಾಷೆ ಪರೀಕ್ಷೆ ನಡೆಯಲಿದೆ.

ಹಿಜಾಬ್ ತೆಗೆದು ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿನಿಯರು: ನಗರದ ಸತ್ತಿ ರಸ್ತೆಯಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಕೆಲವು ವಿದ್ಯಾರ್ಥಿನಿಯರು ಹಿಜಾಬ್ ಧರಿಸಿಕೊಂಡು ಆಗಮಿಸಿದ್ದರು. ಈ ವೇಳೆ ಶಿಕ್ಷಕರು ವಿದ್ಯಾರ್ಥಿನಿಯರಿಗೆ ಹಿಜಾಬ್ ತೆಗೆದು ಬರುವಂತೆ ಮನವೊಲಿಸಿದರು. ಬಳಿಕ, ವಿದ್ಯಾರ್ಥಿನಿಯರು ಹಿಜಾಬ್ ತೆಗೆದು ಪರೀಕ್ಷಾ ಕೇಂದ್ರಕ್ಕೆ ಹಾಜರಾಗಿ ಪರೀಕ್ಷೆ ಬರೆದರು.

ಜಿಲ್ಲೆಯಲ್ಲಿ ಮೊದಲ ದಿನ ಪ್ರಥಮ ಭಾಷೆ ಪರೀಕ್ಷೆ ಯಾವುದೇ ಗೊಂದಲ, ಸಮಸ್ಯೆ ಇಲ್ಲದೇ ನಡೆಯಿತು. ಹಿಜಾಬ್ ಕಾರಣಕ್ಕೆ ಯಾರೊಬ್ಬರೂ ಪರೀಕ್ಷೆ ಗೈರಾಗಿಲ್ಲ

– ಎಸ್.ಎನ್.ಮಂಜುನಾಥ್, ಡಿಡಿಪಿಐ

ಕೆ.ಸಿದ್ದರಾಜು ನಿಧನ



ಚಾಮರಾಜನಗರ, ಮಾ.28– ಚನ್ನಿಪುರ ಮೋಳೆ ಗ್ರಾಮದ ಮಾಜಿ ಯಜಮಾನ ಕೆಸಿದ್ದರಾಜು(ಸಿದ್ದಶೆಟ್ಟಿ) (68) ಸೋಮವಾರ ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಚನ್ನಿಪುರದ ಮೋಳೆ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬ ವರ್ಗದವರು ತಿಳಿಸಿದ್ದಾರೆ

ಮೂರನೇ ಪುಟದಿಂದ

ಮೊದಲ ದಿನ ಉತ್ತಮ ಪ್ರತಿಕ್ರಿಯೆ



ಬ್ಯಾಂಕ್ ವಹಿವಾಟಿನಲ್ಲೂ ವ್ಯತ್ಯಯ ಉಂಟಾಗಿತ್ತು. ನಾಳೆಯೂ ಇದೇ ಪರಿಸ್ಥಿತಿ ಬ್ಯಾಂಕ್‌ಗಳಲ್ಲಿ ಬಹುತೇಕ ಇರಲಿದೆ. ಇಂದು ವಿವಿಧ ಬ್ಯಾಂಕ್ ನೌಕರರೂ ಸಾಂಕೇತಿಕ ಪ್ರತಿಭಟನೆ ನಡೆಸಿದರು. ವಿಮಾ ಕಚೇರಿ, ಬ್ಯಾಂಕ್‌ಗಳು ಸೇರಿದಂತೆ ಕೈಗಾರಿಕೆಗಳು ಹಲವೆಡೆ ಬಂದ್ ಆಗಿದ್ದರೆ, ಕೆಲವೆಡೆ ತೆರೆದಿದ್ದರೂ ಕಾರ್ಮಿಕರು, ನೌಕರರಲ್ಲಿ ಬಹುತೇಕರು ಗೈರಿದ್ದ ಕಾರಣ ಪೂರ್ಣ ಪ್ರಮಾಣದ ಕಾರ್ಯಚಟುವಟಿಕೆ ಕಂಡುಬರಲಿಲ್ಲ. ಕಾರ್ಮಿಕ ಸಂಘ ಟನೆಗಳ ಜಂಟಿ ಸಮಿತಿ ಮೈಸೂರು ಜಿಲ್ಲೆಯಲ್ಲಿ ಮುಷ್ಕರ ಯಶಸ್ವಿಗೊಳಿಸಲು ಮುಂದಾ ಗಿದ್ದು, ಇದರ ನೇತೃತ್ವದಲ್ಲಿ ಮೈಸೂರು ಡಿಸಿ ಕಚೇರಿ ಎದುರು ಇಂದು ಪ್ರತಿಭಟನೆ ನಡೆಸಲಾಯಿತು. ಅಂತೆಯೇ ಆಯಾಯ ತಾಲೂಕು ಕೇಂದ್ರಗಳಲ್ಲೂ ಪ್ರತಿಭಟನೆ ನಡೆಯಿತು. ಮೈಸೂರು ಡಿಸಿ ಕಚೇರಿ ಎದುರು ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ನೇತೃತ್ವದಲ್ಲಿ ಇಂದು ಜಮಾಯಿಸಿದ ವಿವಿಧ ಕಾರ್ಮಿಕ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಕಾರ್ಮಿಕರು, ಬ್ಯಾಂಕ್ ನೌಕರರು ಮಧ್ಯಾಹ್ನ 1ರವರೆಗೆ ಪ್ರತಿಭಟನೆ ನಡೆಸಿದರು. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಅಗತ್ಯ ವಸ್ತುಗಳ ಬೆಲೆ ನಿಯಂತ್ರಿಸಬೇಕು. ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಕೇಂದ್ರೀಯ ಅಬಕಾರಿ ತೆರಿಗೆ ಕಡಿಮೆ ಮಾಡಬೇಕು. ಆದಾಯ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಪ್ರತಿ ಕುಟುಂಬಕ್ಕೆ ಮಾಸಿಕ 7,500 ರೂ. ನೇರ ನಗದು ನೆರವು ನೀಡಬೇಕು. ಅಲ್ಲದೆ, ಈ ಕುಟುಂಬದ ಪ್ರತಿ ವ್ಯಕ್ತಿಗೂ ತಲಾ 10 ಕೆಜಿ ಆಹಾರ ಧಾನ್ಯ ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಹಿಂಪಡೆಯಬೇಕು. ವಿದ್ಯುತ್ ಖಾಸಗೀಕರಣ ಸಂಬಂಧದ ತಿದ್ದುಪಡಿ ಮಸೂದೆ ವಾಪಸ್ಸು ಪಡೆಯಬೇಕು. ಶಾಸನಬದ್ಧ ಬೆಂಬಲ ಬೆಲೆ ಕಾಯ್ದೆ ರೂಪಿಸಬೇಕು. ರಾಜ್ಯ ಸರ್ಕಾರವೂ ರೈತ ಮತ್ತು ಜನ ವಿರೋಧಿ ಕಾಯ್ದೆಗಳನ್ನು ಹಿಂಪಡೆಯಬೇಕು. ಖಾಸಗೀಕರಣ ಕೈಬಿಟ್ಟು, ನಗದೀಕರಣ ನಿರ್ಧಾರದಿಂದ ಹಿಂದೆ ಸರಿಯಬೇಕು. ಅಂಗನವಾಡಿ, ಆಶಾ, ಬಿಸಿಯೂಟ ಮತ್ತು ಇತರೆ ಸ್ಕೀಂ ನೌಕರರಿಗೆ ಶಾಸನಬದ್ಧ ಕನಿಷ್ಠ ವೇತನ ಮತ್ತು ಸೇವಾ ಭದ್ರತೆ ನೀಡಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿದರು.

500ಕ್ಕೂ ಅಧಿಕ ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ವಿವಿಧ ಕಾರ್ಖಾನೆ ಕಾರ್ಮಿಕರು, ಬ್ಯಾಂಕ್, ಅಂಚೆ ಮತ್ತು ಎಲ್‌ಐಸಿ ನೌಕರರು, ಸ್ಥಳಕ್ಕೆ ಭೇಟಿ ನೀಡಿದ ಡಿಸಿ ಡಾ.ಬಗಾದಿ ಗೌತಮ್ ಅವರಿಗೆ ಮನವಿ ಸಲ್ಲಿಸಿ ಪ್ರತಿಭಟನೆ ಅಂತ್ಯಗೊಳಿಸಿದರು. ಸಿಐಟಿಯು ಮುಖಂಡ ಜಯರಾಮ್, ಐಎನ್‌ಟಿಯುಸಿ ಜಿಲ್ಲಾಧ್ಯಕ್ಷ ಅರುಣ್‌ಕುಮಾರ್, ಎಐಯುಟಿಯುಸಿ ರಾಜ್ಯ ಸಮಿತಿ ಸದಸ್ಯೆ ಉಮಾದೇವಿ, ರಾಜ್ಯ ರೈತ ಸಂಘದ ಮೈಸೂರು ತಾಲೂಕು ಅಧ್ಯಕ್ಷ ಮರಂಕಯ್ಯ, ವಿಮಾ ನಿಗಮ ನೌಕರರ ಸಂಘದ ಮೈಸೂರು ವಿಭಾಗದ ಅಧ್ಯಕ್ಷ ಎಸ್.ಕೆ.ರಾಮು, ಪ್ರಧಾನ ಕಾರ್ಯದರ್ಶಿ ಎಸ್.ಎಸ್.ನಾಗೇಶ್, ಮೈಸೂರು ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಉಪಾಧ್ಯಕ್ಷ ಮಹೇಶ್, ಕಾರ್ಯದರ್ಶಿ ಹೆಚ್.ಬಾಲಕೃಷ್ಣ, ದಸಂಸ ಮುಖಂಡ ಚೋರನಹಳ್ಳಿ ಶಿವಣ್ಣ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬ್ಯಾಂಕ್ ಸೇವೆಗಳು ಲಭ್ಯ

ತುರ್ತು ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುವುದು ಒಳಿತು. ಏ.1ರ ಶುಕ್ರವಾರ ಆರ್ಥಿಕ ವರ್ಷದ ಅಂತ್ಯದ ಕೆಲಸವು ಬ್ಯಾಂಕ್ ನೌಕರರಿಗೆ ಇರಲಿದ್ದು, ಈ ದಿನ ಸಾರ್ವಜನಿಕರಿಗೆ ಸೇವೆ ಲಭ್ಯವಿರುವುದಿಲ್ಲ. ಏ.2ರ ಶನಿವಾರ ಯುಗಾದಿ ಹಬ್ಬದ ರಜೆ ಇರುವ ಹಿನ್ನೆಲೆಯಲ್ಲಿ ಈ ದಿನ ಬ್ಯಾಂಕ್‌ಗಳು ಮುಚ್ಚಿರಲಿವೆ. ಏ.3ರಂದು ಭಾನುವಾರದ ರಜೆ ಇರುವ ಹಿನ್ನೆಲೆಯಲ್ಲಿ ಅಂದೂ ಬ್ಯಾಂಕ್‌ಗಳು ಬಂದ್ ಆಗಲಿವೆ. ಒಟ್ಟಾರೆ ಈ ವಾರದಲ್ಲಿ ಬುಧವಾರ, ಗುರುವಾರ ಸೇರಿದಂತೆ ಈ ಎರಡು ದಿನಗಳ ಮಾತ್ರವೇ ಸಾರ್ವಜನಿಕರಿಗೆ ಬ್ಯಾಂಕ್ ಸೇವೆಗಳು ಪೂರ್ಣ ಪ್ರಮಾಣದಲ್ಲಿ ದೊರೆಯಲಿವೆ.

ಎಟಿಎಂ ಸೇವೆಯಲ್ಲಿ ವ್ಯತ್ಯಯವಿರಲಿಲ್ಲ: ಈಗಾಗಲೇ ಎಟಿಎಂಗಳಿಗೆ ಹಣ ತುಂಬಿದ್ದ ಹಿನ್ನೆಲೆಯಲ್ಲಿ ಸೋಮವಾರ ಮುಷ್ಕರ ಇದ್ದರೂ ಎಟಿಎಂ ಸೇವೆಗಳಲ್ಲಿ ಯಾವುದೇ ವ್ಯತ್ಯಯ ಕಂಡು ಬರಲಿಲ್ಲ. ಸಾಕಷ್ಟು ಎಟಿಎಂ ಕೇಂದ್ರಗಳಲ್ಲಿ ಮರುಬಳಕೆ ಯಂತ್ರದ ವ್ಯವಸ್ಥೆ ಇದ್ದು, ಈ ವ್ಯವಸ್ಥೆಯಡಿ ಠೇವಣಿ ಇಡಲು ಪಾವತಿಸುವ ಹಣವು ಎಟಿಎಂ ಯಂತ್ರಕ್ಕೆ ಸ್ವಯಂ ಚಾಲಿತವಾಗಿ ಸೇರ್ಪಡೆಯಾಗಲಿದೆ. ಹಾಗಾಗಿ ಬಹುತೇಕ ನಾಳೆಗೂ ಎಟಿಎಂ ಸೇವೆಗಳಲ್ಲಿ ಯಾವುದೇ ತೊಂದರೆ ಉಂಟಾಗುವುದಿಲ್ಲ ಎಂದು ಮೂಲಗಳು ತಿಳಿಸಿವೆ.

ಏಕರೂಪ ದರಪಟ್ಟಿ

ಗುತ್ತಿಗೆದಾರರ ಕಾಮಗಾರಿ ಮೇಲೆ ಹೆಚ್ಚಿನ ನಿಗಾ ಇಡಲಾಗುವುದು, ಕಡಿಮೆ ಮೊತ್ತ ನಮೂದಿಸುವುದನ್ನು ತಡೆಯಲು ಆಗದು. ಇನ್ನು ಮುಂದೆ ರಾಜ್ಯದಲ್ಲಿ ಅತಿಥಿಗೃಹವನ್ನು ಅವಶ್ಯಕತೆ ಇರುವ ಕಡೆ ಮಾತ್ರ ಮಾಡಲಾಗುವುದು, ಯಾರೋ ಒಬ್ಬರಿಗೆ ಅನುಕೂಲವಾಗುವಂತೆ ಮಾಡುವುದಿಲ್ಲ, ಚಿತ್ರದುರ್ಗದ ಅತಿಥಿ ಗೃಹವನ್ನು ಮಾದರಿಯಾಗಿ ಪರಿಗಣಿಸಲಾಗುವುದು. ಅನುದಾನ ಹಂಚಿಕೆ ತಾರತಮ್ಯಕ್ಕೆ ಉತ್ತರಿಸಿದ ಸಚಿವರು, 2014ರಿಂದ 2018ರವರೆಗೆ ಕಾಂಗ್ರೆಸ್ ಶಾಸಕರಿಗೆ ಸರಾಸರಿ 156 ಕೋಟಿ, ಜೆಡಿಎಸ್ ಶಾಸಕರಿಗೆ ಸರಾಸರಿ 148 ಕೋಟಿ, ಬಿಜೆಪಿ ಶಾಸಕರಿಗೆ 122 ಕೋಟಿ ರೂ. ಅನುದಾನ ಲೋಕೋಪಯೋಗಿ ಇಲಾಖೆಯಲ್ಲಿ ದೊರೆತಿದೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕಾಂಗ್ರೆಸ್ ಶಾಸಕರಿಗೆ 19 ಕೋಟಿ ರೂ, ಜೆಡಿಎಸ್ ಶಾಸಕರಿಗೆ ಲೋಕೋಪ ಯೋಗಿ ಇಲಾಖೆಯ ಅಂಕಿ-ಅಂಶಗಳ ಸಹಿತ ಉತ್ತರ ನೀಡಿದ ಸಚಿವರು, ಮುಂದು ವರೆದ ಕಾಮಗಾರಿಗಳಲ್ಲಿ ವಿಳಂಬ ತಪ್ಪಿಸಲು ವೇಗ ಹೆಚ್ಚಿಸುವ ಭರವಸೆ ನೀಡಿದರು.

ನಂತರ 2022-23ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಸಂದಾಯವಾಗುವ ವೆಚ್ಚವನ್ನು ಭರಿಸಲು ಅನುಮತಿ ನೀಡಬೇಕೆಂದು ಕೋರಿದರು. ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು, ಲೋಕೋಪಯೋಗಿ ಇಲಾಖೆಯ ಅನುದಾನ ಬೇಡಿಕೆಯನ್ನು ಮತಕ್ಕೆ ಹಾಕಿದಾಗ ಧ್ವನಿ ಮತದ ಒಪ್ಪಿಗೆ ದೊರೆಯಿತು. ಈ ಸಂದರ್ಭದಲ್ಲಿ ಶಾಸಕರಾದ ವೆಂಕಟರಾಮಯ್ಯ, ಶಿವಣ್ಣ ಅವರು ಸಚಿವರ ಉತ್ತರದಿಂದ ತೃಪ್ತರಾಗದೆ ಸಭಾಧ್ಯಕ್ಷರ ಪೀಠದ ಮುಂದಿನ ಜಾಗಕ್ಕೆ ಧಾವಿಸಿ ಧರಣಿಗೆ ಮುಂದಾದರು. ಶಾಸಕರು ತಮ್ಮ ಸ್ವಸ್ಥಾನಗಳಿಗೆ ಮರಳುವಂತೆ ಮನವೊಲಿಸುವಲ್ಲಿ ಸಭಾಧ್ಯಕ್ಷರು ಯಶಸ್ವಿಯಾದರು.

ಕಾಫಿ ತೋಟದ ಕಾರ್ಮಿಕ ಬಲಿ



ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭ ಅರಣ್ಯ ಇಲಾಖೆ ಅಧಿಕಾರಿಗಳು ತರಾತುರಿಯಲ್ಲಿ ಮೃತದೇಹವನ್ನು ಸ್ಥಳದಿಂದ ಸಾಗಿಸಲು ಮುಂದಾಗಿದ್ದರು ಎನ್ನಲಾಗಿದ್ದು, ಇದಕ್ಕೂ ಗ್ರಾಮಸ್ಥರು ತೀವ್ರ ವಿರೋಧ ವ್ಯಕ್ತಪಡಿಸಿದರು. ಕೂಲಿ ಕಾರ್ಮಿಕ ಗಣೇಶ್ ಬಲಿಯಾದ ಸ್ಥಳದಲ್ಲೇ ಕಳೆದ 10 ದಿನದ ಹಿಂದೆ ಅಲ್ಲಿನ ನಿವಾಸಿ ಆಟ್ರಂಗಡ ಸುಬ್ಬಯ್ಯ ಎಂಬವರಿಗೆ ಸೇರಿದ ಕರು ಕೂಡ ಹುಲಿ ದಾಳಿಗೆ ಬಲಿಯಾಗಿತ್ತು. ಅರಣ್ಯ ಇಲಾಖೆ ಮಾತ್ರ ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಇದೀಗ ಕಾರ್ಮಿಕ ಜೀವ ಕಳೆದು ಕೊಳ್ಳುವಂತಾಗಿದೆ ಎಂದು ಗ್ರಾಮಸ್ಥರು ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ಹರಿಹಾಯ್ದರು.

ಸ್ಥಳಕ್ಕೆ ಸಿಸಿಎಫ್ ಅಥವಾ ಉನ್ನತ ಮಟ್ಟದ ಅಧಿಕಾರಿಗಳು ಆಗಮಿಸಬೇಕು. ಇಲ್ಲವಾದಲ್ಲಿ ಮೃತದೇಹವನ್ನು ಸ್ಥಳದಿಂದ ತೆರವುಗೊಳಿಸಲು ಬಿಡುವುದಿಲ್ಲ ಎಂದು ಸಾರ್ವಜನಿಕರು ಪಟ್ಟು ಹಿಡಿದಿದ್ದು, ಸ್ಥಳದಲ್ಲೇ ಪ್ರತಿಭಟನೆ ನಡೆಸುತ್ತಿದ್ದಾರೆ.

ಗುಂಡಿಕ್ಕಲು ಅನುಮತಿ ನೀಡಿ

ಹುಲಿ ದಾಳಿಗೆ ಬಲಿಯಾಗಿರುವ ವ್ಯಕ್ತಿಗೆ ಸೂಕ್ತ ಪರಿಹಾರವನ್ನು ತಕ್ಷಣ ನೀಡಲಾಗುತ್ತದೆ. ಅದರ ಬಗ್ಗೆ ಅನುಮಾನ ಬೇಡ ಎಂದು ಅರಣ್ಯಾಧಿಕಾರಿಗಳು ಗ್ರಾಮಸ್ಥರಿಗೆ ಭರವಸೆ ನೀಡಿದರು. ಇದಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಗ್ರಾಮಸ್ಥರು ನಿಮ್ಮ ಪರಿಹಾರ ಬೇಕಾಗಿಲ್ಲ. ಹುಲಿಗೆ ಗುಂಡಿ ಕ್ಕಲು ಅನುಮತಿ ನೀಡಿ ಸಾಕು, ನಾವೇನು ಹುಲಿಯನ್ನು ಹುಡುಕಿಕೊಂಡು ಹೋಗಿ ಗುಂಡು ಹೊಡೆಯಲ್ಲ. ಅದು ನಮ್ಮಗಳ ತೋಟಗಳಿಗೆ ಬಂದಾಗ ಗುಂಡಿಕ್ಕಿ ನಿನಂತರ ಮಗೆ ತಿಳಿಸುತ್ತೇವೆ ಎಂದು ಗ್ರಾಮಸ್ಥರು ಆಕ್ರೋಶ ಭರಿತರಾಗಿ ನುಡಿದರು.

ಕಳೆದ ವರ್ಷ ಕೂಡ ಹುಲಿ ದಾಳಿಗೆ ಸಿಲುಕಿ ಮೂವರು ಮಂದಿ ಜೀವ ತೆತ್ತಿದ್ದನ್ನು ಇಲ್ಲಿ ಸ್ಮರಿಸಬಹುದು. ಆ ಸಂದರ್ಭ ಕೂಡ ನರಹಂತಕ ಹುಲಿಗೆ ಗುಂಡಿಕ್ಕಲು ಅನುಮತಿ ನೀಡುವಂತೆ ಆಗ್ರಹಗಳು ಕೇಳಿ ಬಂದಿತ್ತು.

ಬ್ಯಾಂಕ್, ವಿಮಾ, ಅಂಚೆ ನೌಕರರಿಂದಲೂ ಪ್ರತ್ಯೇಕ ಪ್ರತಿಭಟನೆ

ಮೈಸೂರು,ಮಾ.28(ಪಿಎಂ)-ಎರಡು ದಿನಗಳ ದೇಶವ್ಯಾಪಿ ಮುಷ್ಕರ ಬೆಂಬಲಿಸಿ ಹಾಗೂ ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬ್ಯಾಂಕ್ ನೌಕರರೂ ಸೋಮವಾರ ಸಾಂಕೇತಿಕ ಪ್ರತಿಭಟನೆ ನಡೆಸಿದರು.

ಮೈಸೂರಿನ ನಜರ್‌ಬಾದಿನಲ್ಲಿರುವ ಕೆನರಾ ಬ್ಯಾಂಕ್‌ನ ಪ್ರಾದೇಶಿಕ ಕಚೇರಿ-1ರ ಎದುರು ಆಲ್ ಇಂಡಿಯಾ ಬ್ಯಾಂಕ್ ಎಂಪ್ಲಾಯೀಸ್ ಅಸೋಸಿಯೇಷನ್, ಆಲ್ ಇಂಡಿಯಾ ಬ್ಯಾಂಕ್ ಆಫೀಸರ್ಸ್ ಅಸೋಸಿಯೇಷನ್, ಬ್ಯಾಂಕ್ ಎಂಪ್ಲಾಯೀಸ್ ಫೆಡರೇಷನ್ ಆಫ್ ಇಂಡಿಯಾ ಮೈಸೂರು ಘಟಕಗಳ ನೇತೃತ್ವದಲ್ಲಿ ಜಮಾಯಿಸಿದ ಮುಷ್ಕರನಿರತ ವಿವಿಧ ಬ್ಯಾಂಕುಗಳ ನೌಕರರು ಅರ್ಧ ಗಂಟೆಗೂ ಹೆಚ್ಚು ಕಾಲ ಪ್ರತಿಭಟನೆ ನಡೆಸಿದರು.

ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಬಲಪಡಿಸಬೇಕು. ಬ್ಯಾಂಕ್‌ಗಳ ಖಾಸಗೀಕರಣ ಕೈಬಿಡಬೇಕು. ಬ್ಯಾಂಕ್ ಠೇವಣಿ ಮೇಲಿನ ಬಡ್ಡಿದರ ಹೆಚ್ಚಿಸಬೇಕು. ಗ್ರಾಹಕರಿಗೆ ಹೆಚ್ಚಿನ ಸೇವಾ ಶುಲ್ಕ ವಿಧಿಸಬಾರದು. ಹೊರಗುತ್ತಿಗೆ ಕೈಬಿಟ್ಟು ಖಾಲಿ ಹುದ್ದೆಗಳ ಭರ್ತಿಗೆ ನೇಮಕಾತಿ ಪ್ರಾರಂಭಿಸಬೇಕು. ಬ್ಯಾಂಕುಗಳ ವಿಲೀನ ಪ್ರಕ್ರಿಯೆ ಕೈಬಿಡಬೇಕು. ನೂತನ ಪಿಂಚಣಿ ವ್ಯವಸ್ಥೆ ರದ್ದುಗೊಳಿಸಿ, ಹಳೇ ಪಿಂಚಣಿ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಕಾರ್ಯದರ್ಶಿ ಹೆಚ್.ಬಾಲಕೃಷ್ಣ, ಇಡೀ ಜಿಲ್ಲೆಯಲ್ಲಿ ಮೂರು ಸಂಘಟನೆಗಳ (ಆಲ್ ಇಂಡಿಯಾ ಬ್ಯಾಂಕ್ ಎಂಪ್ಲಾಯೀಸ್ ಅಸೋಸಿಯೇಷನ್, ಆಲ್ ಇಂಡಿಯಾ ಬ್ಯಾಂಕ್ ಆಫೀಸರ್ಸ್ ಅಸೋಸಿಯೇಷನ್, ಬ್ಯಾಂಕ್ ಎಂಪ್ಲಾಯೀಸ್ ಫೆಡರೇಷನ್ ಆಫ್ ಇಂಡಿಯಾ) ಬ್ಯಾಂಕ್ ನೌಕರರು ಪೂರ್ಣ ಪ್ರಮಾಣದಲ್ಲಿ ಮುಷ್ಕರದಲ್ಲಿ ಪಾಲ್ಗೊಂಡಿದ್ದೇವೆ ಎಂದರು.

ಎಲ್ಲಾ ಬ್ಯಾಂಕುಗಳಲ್ಲಿ ಇದೇ ಸಂಘಟನೆಗಳ ನೌಕರರು ಶೇ.85ರಿಂದ 90ರಷ್ಟು ಇದ್ದೇವೆ. ಉಳಿದ ಶೇ.10ರಷ್ಟು ಬ್ಯಾಂಕ್ ನೌಕರರು ಇತರೆ ಸಂಘಟನೆಗಳಲ್ಲಿ ಇದ್ದು,



ಮೈಸೂರಿನ ನಜರ್‌ಬಾದಿನಲ್ಲಿರುವ ಕೆನರಾ ಬ್ಯಾಂಕ್‌ನ ಪ್ರಾದೇಶಿಕ ಕಚೇರಿ-1ರ ಎದುರು ಸೋಮವಾರ ಬ್ಯಾಂಕ್ ನೌಕರರು ಪ್ರತಿಭಟನೆ ನಡೆಸಿದರು.

ಅವರು ಮುಷ್ಕರಕ್ಕೆ ಬೆಂಬಲ ನೀಡಿಲ್ಲ. ಹಾಗಾಗಿ ಅವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನಮ್ಮ ಸಂಘಟನೆಗಳ ನೌಕರರೇ ಹೆಚ್ಚಿನ ಸಂಖ್ಯೆಯಲ್ಲಿದ್ದು, ಎರಡು ದಿನಗಳ ಮುಷ್ಕರ ಯಶಸ್ವಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಮೈಸೂರು ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಉಪಾಧ್ಯಕ್ಷ ಮಹೇಶ್, ಬ್ಯಾಂಕ್ ನೌಕರು ಮುಖಂಡರಾದ ಬೋಪಣ್ಣ ಶ್ರೀಧರ್‌ಬಾಬು, ಪದ್ಮನಾಭ ನಾಯಕ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಎಲ್‌ಐಸಿ ನೌಕರರ ಪ್ರತಿಭಟನೆ: ಮೈಸೂರಿನ ಬನ್ನಿಮಂಟಪದಲ್ಲಿರುವ ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ವಿಭಾಗೀಯ ಕಚೇರಿ ಆವರಣದಲ್ಲಿ ಸೋಮವಾರ ಎಲ್‌ಐಸಿ ನೌಕರರು, ಮುಷ್ಕರ ಬೆಂಬಲಿಸಿ ಕೆಲಕಾಲ ಸಾಂಕೇತಿಕ ಪ್ರತಿಭಟನೆ ನಡೆಸಿದರು. ಎಲ್‌ಐಸಿ ಖಾಸಗೀಕರಣ ವಿರೋಧಿಸಿದರಲ್ಲದೆ, ಎಲ್‌ಐಸಿಯ ಶೇ.10ರಷ್ಟು ಪಾಲನ್ನು ಮಾರಾಟ ಮಾಡುವ ಪ್ರಸ್ತಾಪವನ್ನು ಬಜೆಟ್‌ನಲ್ಲಿ ಘೋಷಣೆ ಮಾಡಿರುವುದನ್ನು ಖಂಡಿಸಿದರು. ವಿಮಾ ನಿಗಮ ನೌಕರರ ಸಂಘದ ಮೈಸೂರು ವಿಭಾಗದ ಅಧ್ಯಕ್ಷ ಎಸ್.ಕೆ. ರಾಮು, ಪ್ರಧಾನ ಕಾರ್ಯದರ್ಶಿ ಎಸ್.ಎಸ್.ನಾಗೇಶ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಬಹುತೇಕ ಎಲ್‌ಐಸಿ ನೌಕರರು ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ.

ಕೆಎಸ್‌ಆರ್‌ಟಿಸಿ ನೌಕರರು: ಮುಷ್ಕರ ಬೆಂಬಲಿಸಿ ಹಾಗೂ ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ ನೇತೃತ್ವದಲ್ಲಿ ಕೆಎಸ್‌ಆರ್‌ಟಿಸಿ ನೌಕರರು ಮೈಸೂರಿನ ಬನ್ನಿಮಂಟಪದಲ್ಲಿರುವ ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ಕಚೇರಿಯ ಬಳಿ ಸೋಮವಾರ ಕೆಲಕಾಲ ಪ್ರತಿಭಟನೆ ನಡೆಸಿದರು.

2020ರ ಜನವರಿಯಿಂದ ಜಾರಿಗೆ ಬರಬೇಕಿರುವ ವೇತನ ಪರಿಷ್ಕರಣೆ ಕೂಡಲೇ ಚಾಲನೆ ನೀಡಬೇಕು. ನಾಲ್ಕೂ ನಿಗಮಗಳನ್ನು ವಿಲೀನಗೊಳಿಸಿ ಒಂದು ನಿಗಮ ವಾಗಿ ರೂಪಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು. ಫೆಡರೇಷನ್ ರಾಜ್ಯ ಉಪಾಧ್ಯಕ್ಷ ಎಂ.ವಿಜಯ್ ಕುಮಾರ್ ನೇತೃತ್ವದಲ್ಲಿ 15ಕ್ಕೂ ಹೆಚ್ಚು ನೌಕರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಎಂ.ವಿಜಯ್‌ಕುಮಾರ್, ಸಂಸ್ಥೆಯ ಹಿತದೃಷ್ಟಿಯಿಂದ ಸಾರಿಗೆ ನೌಕರರು ಮುಷ್ಕರದಲ್ಲಿ ಪಾಲ್ಗೊಂಡಿಲ್ಲ. ಆದರೆ ಕಾರ್ಮಿಕ ಸಂಘಟನೆಗಳ ಕರೆ ನೀಡಿರುವ ಮುಷ್ಕರ ಬೆಂಬಲಿಸಿ, ನಮ್ಮ ಸಂಘಟನೆ ವತಿಯಿಂದ ಸಾಂಕೇತಿಕ ಪ್ರತಿಭಟನೆ ನಡೆಸಿದ್ದೇವೆ. ರಜೆ ಇದ್ದ ನೌಕರರು ಮಾತ್ರವೇ ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದವು ಎಂದು ತಿಳಿಸಿದರು.

ಅಂಚೆ ನೌಕರರು: ಮುಷ್ಕರ ಬೆಂಬಲಿಸಿ ಹಾಗೂ ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಅಂಚೆ ನೌಕರು ಪ್ರತಿಭಟನೆ ನಡೆಸಿದರು. ಕೇಂದ್ರ ಸರ್ಕಾರಿ ಅಂಚೆ ನೌಕರರ ಜಂಟಿ ಕ್ರಿಯಾ ಸಮಿತಿ ಮೈಸೂರು ವಿಭಾಗದ ವತಿಯಿಂದ ಮೈಸೂರಿನ ನೆಹರು ವೃತ್ತದಲ್ಲಿರುವ ಅಂಚೆ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಜನವರಿ 2020ರಿಂದ ಜೂನ್ 2021ರವರೆಗೆ ಹಿಡಿಯಲಾಗಿದ್ದ ತುಟ್ಟಿಭತ್ಯೆ, ಪರಿಹಾರದ ಬಾಕಿ ಹಣವನ್ನು ನೀಡಬೇಕು. ಎಲ್ಲಾ ಅಂಚೆ ಕಚೇರಿಗಳಿಗೆ ಸ್ಥಿರವಾದ ಮತ್ತು ವೇಗದ ಎನ್‌ಎಸ್‌ಪಿ-1 ಸಂಪರ್ಕವನ್ನು ದೊರೆಕಿಸಿಕೊಡಬೇಕು. ಅಲ್ಲದೆ, ಫೈನಾಸೀಯಲ್ ಫಿನಾಕಲ್ ಮತ್ತು ಎಸ್‌ಎಪಿ ಸರ್ವರ್‌ನ ಸಾಮರ್ಥ್ಯ ಹೆಚ್ಚಿಸಬೇಕು. ನೂತನ ಪಿಂಚಣಿ ಯೋಜನೆ ರದ್ದುಗೊಳಿಸಿ ಹಳೆ ಪಿಂಚಣಿ ಯೋಜನೆ ಜಾರಿಗೊಳಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು. ಬೆಳಗ್ಗೆ 9ರಿಂದ ಮಧ್ಯಾಹ್ನದ 12ವರೆಗೆ ಪ್ರತಿಭಟನೆ ನಡೆಸಲಾಯಿತು. ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ ಅಂಚೆ ಕಚೇರಿಗಳ ವಹಿವಾಟು ಇಂದು ಬಹುತೇಕ ಸ್ಥಗಿತಗೊಂಡಿತ್ತು. ಇಲಾಖೆಯ ಭಾಗಶಃ ನೌಕರರು ಮುಷ್ಕರದಲ್ಲಿ ಪಾಲ್ಗೊಂಡಿದ್ದು, ನಾಳೆಯೂ ಇದೇ ಪರಿಸ್ಥಿತಿ ಇರಲಿದೆ ಎಂದು ಸಂಘಟನೆ ಮುಖಂಡ ಎನ್.ವನಜಾಕ್ಷ ತಿಳಿಸಿದರು. ಮುಖಂಡರಾದ ಎಂ.ಎಸ್.ಪರಮೇಶ್ವರ್, ಎನ್.ನಟರಾಜ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಜಾತಿ ದೌರ್ಜನ್ಯ, ಪರಿಹಾರಗಳ ಕುರಿತು ಗ್ರಾಮೀಣ ಪ್ರದೇಶಗಳಲ್ಲಿ ಅರಿವು ಅಗತ್ಯ

ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ ಡಿವೈಎಸ್‌ಪಿ ಕವಿತಾ ಅಭಿಮತ

ಮೈಸೂರು, ಮಾ.28(ಜಿಎ)- ಜಾತಿ ದೌರ್ಜನ್ಯ ಪ್ರಕರಣ ಮತ್ತು ಪರಿಹಾರಗಳ ಕುರಿತು ನಗರ ಪ್ರದೇಶಗಳಿಗಿಂತ ಗ್ರಾಮಾಂತರ ಪ್ರದೇಶದ ಜನತೆಗೆ ಹೆಚ್ಚು ಅರಿವು ಮೂಡಿಸಬೇಕು ಎಂದು ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ ಪೊಲೀಸ್ ಅಧೀಕ್ಷಕರಾದ ಡಾ.ಬಿ.ಟಿ. ಕವಿತಾ ಅವರು ತಿಳಿಸಿದರು.

ಮೈಸೂರಿನ ಅಶೋಕ ವೃತ್ತ ಬಳಿ ಇರುವ ಬುದ್ಧವಿಹಾರದಲ್ಲಿ ದಲಿತ ಸಂಘರ್ಷ ಸಮಿತಿ(ಬಣ ರಹಿತ) ಮೈಸೂರು ಜಿಲ್ಲಾ ಶಾಖೆ ವತಿಯಿಂದ ಏರ್ಪಡಿಸಿದ್ದ 'ಜಾತಿ ದೌರ್ಜನ್ಯ ಪ್ರಕರಣಗಳು ಮತ್ತು ಪರಿಹಾರ' ಎಂಬ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಜಾತಿ ದೌರ್ಜನ್ಯ ತಡೆ ಕಾಯ್ದೆ ಜಾರಿಗೆ ಬರುವ ಮೊದಲು 1955ರಲ್ಲಿ ನಾಗರಿಕ ಹಕ್ಕುಗಳು ಜಾರಿಯಲ್ಲಿತ್ತು. ಆದರೆ ಆ ವೇಳೆಯಲ್ಲಿ ಹೆಚ್ಚು ದೌರ್ಜನ್ಯಗಳು ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಕೆಲ ಮುಖಂಡರು ಅಂದಿನ ಪ್ರಧಾನ ಮಂತ್ರಿ ರಾಜೀವ್ ಗಾಂಧಿ ಅವರನ್ನು ಭೇಟಿ ಮಾಡಿ ಕಾಯ್ದೆಯನ್ನು ಹೆಚ್ಚು ಗಟ್ಟಿಗೊಳಿಸುವಂತೆ ಮನವಿ ಸಲ್ಲಿಸಿದ ಕಾರಣ 1989ರಲ್ಲಿ ಜಾತಿ ದೌರ್ಜನ್ಯ ತಡೆ ಕಾಯ್ದೆ ಜಾರಿಗೆ ಬಂತು ಎಂದರು.

2015ರಲ್ಲಿ ಆ ಕಾಯ್ದೆಯಲ್ಲಿ ಕೆಲ ತಿದ್ದುಪಡಿ ಮಾಡಲಾಯಿತು. ಸೆಕ್ಷನ್ ಮೂರರ ಪ್ರಕಾರ ಸಾರ್ವಜನಿಕ ಸ್ಥಳದಲ್ಲಿ ವ್ಯಕ್ತಿಯನ್ನು ನಿಂದಿಸುವುದು, ಚುನಾವಣೆಯಲ್ಲಿ ನಾವು ಹೇಳಿದವರಿಗೆ ಓಟು ಹಾಕಬೇಕು, ಬಹಿಷ್ಕಾರ ಹಾಕುವುದು, ಊರಿನ ಬೇರೆ ಸಮುದಾಯದವರು ಅವರಿಗೆ ಸಹಾಯ ಮಾಡದಂತೆ ನೋಡಿಕೊಳ್ಳುವುದು ಇನ್ನೂ ಇತರೆ ಆರ್ಥಿಕ ವ್ಯವಹಾರಗಳಲ್ಲಿ ವ್ಯವಹರಿಸದಂತೆ ನೋಡಿಕೊಳ್ಳುವುದು ಈ ಎಲ್ಲಾ ಅಂಶಗಳು ಜಾತಿ ದೌರ್ಜನ್ಯ ಕಾಯ್ದೆಯಲ್ಲಿ ಒಳಗೊಂಡಿದೆ ಎಂದು ಅವರು ಹೇಳಿದರು.



ಮೈಸೂರು ವಿವಿಯಲ್ಲಿ ಹೆಚ್ಚು ಪದಕ ಪಡೆದ ದಲಿತ ವಿದ್ಯಾರ್ಥಿಗಳಾದ ಪಿ.ಮಹದೇವಸ್ವಾಮಿ ಮತ್ತು ವಿ.ತೇಜಸ್ವಿನಿಯನ್ನು ಅಭಿನಂದಿಸಲಾಯಿತು.

ಈ ರೀತಿಯ ಜಾಗೃತಿಯ ಕಾರ್ಯಕ್ರಮಗಳು ಬಹಳ ಅಗತ್ಯವಾಗಿದೆ. ನಗರ ಪ್ರದೇಶದಿಂದ ಆರಂಭವಾಗಿರುವ ಜಾಗೃತಿ ಕಾರ್ಯಕ್ರಮಗಳು ಹಳ್ಳಿ ಹಳ್ಳಿಗೂ ತಲುಪಬೇಕು. ಏಕೆಂದರೆ ಜಾತಿ ದೌರ್ಜನ್ಯಕ್ಕೆ ಒಳಗಾದವರು ಅದನ್ನು ತಿಳಿಸಲು ಹಿಂಜರಿಯುತ್ತಾರೆ. ಅದರ ಬಗ್ಗೆ ತಿಳಿದವರಲ್ಲಿ ಕೆಲವರು ದೂರು ನೀಡಲು ಮುಂದಾಗಿದ್ದಾರೆ. ಈ ರೀತಿಯ ಪ್ರಕರಣಗಳಲ್ಲಿ ಧೈರ್ಯ ಬಹಳ ಮುಖ್ಯವಾಗುತ್ತದೆ ಎಂದರು. ಇದೇ ವೇಳೆ ಮೈಸೂರು ವಿವಿಯಲ್ಲಿ ಹೆಚ್ಚು ಪದಕ ಪಡೆದ ದಲಿತ ವಿದ್ಯಾರ್ಥಿಗಳಾದ ಪಿ.ಮಹದೇವಸ್ವಾಮಿ ಮತ್ತು ವಿ.ತೇಜಸ್ವಿನಿಯನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿವಿ ಸಹಾಯಕ ಪ್ರಾಧ್ಯಾಪಕ ಡಾ. ಆರ್. ಸಂತೋಷ್ ನಾಯಕ್, ಕಾನೂನು ಶಾಸ್ತ್ರ ಅಧ್ಯಯನ ವಿಭಾಗ ಉಪನ್ಯಾಸಕ ಡಾ.ಎಸ್. ಗುರುಸ್ವಾಮಿ, ದಲಿತ ಸಂಘರ್ಷ ಸಮಿತಿ ಸಂಚಾಲಕ ಸಿ. ಉಮಾ ಮಹದೇವ, ಕೊಡಗು ದ.ಸಂ.ಸ ಮುಖಂಡ ಹೆಚ್.ಎಂ. ಮರಿಸ್ವಾಮಿ, ಚಿಂತಕ ಡಾ.ಎಸ್. ಜಯಕುಮಾರ್, ಹಿರಿಯ ದ.ಸಂ.ಸ ಮುಖಂಡ ಉರಗಲವಾಡಿ ರಾಮಯ್ಯ, ಮೈಸೂರು ಜಿಲ್ಲಾ ಸಂಘಟನಾ ಸಂಚಾಲಕ ಮುರಡಗಳ್ಳಿ ಮಹದೇವ್, ನಗರ ಸಂಚಾಲಕ ಗೋವಿಂದರಾಜು, ಗುಂಡ್ಲುಪೇಟೆ ನಾಗರಾಜು, ಬಿ.ಕೆ. ಹರೀಶ್ ಸೇರಿದಂತೆ ಮತ್ತಿತರರು ಭಾಗಿಯಾಗಿದ್ದರು.

ಪೊಲೀಸ್ ಧ್ವಜ ದಿನಾಚರಣೆಗೆ ನಿವೃತ್ತ ಪೊಲೀಸರಿಗೆ ಆಹ್ವಾನ

ಮೈಸೂರು, ಮಾ. 28- ಮೈಸೂರಿನ ಸಶಸ್ತ್ರ ಮೀಸಲು ಪಡೆ ಕವಾಯತು ಮೈದಾನದಲ್ಲಿ ಏಪ್ರಿಲ್ 2ರಂದು ಬೆಳಗ್ಗೆ 8 ಗಂಟೆಗೆ ಪೊಲೀಸ್ ಧ್ವಜ ದಿನಾಚರಣೆ ನಡೆಯಲಿದೆ. ಇದು ನಿವೃತ್ತ ಪೊಲೀಸ್ ಅಧಿಕಾರಿಗಳಿಗೆ ಸಂಬಂಧಪಟ್ಟ ಕಾರ್ಯಕ್ರಮವಾಗಿರುವುದರಿಂದ ಎಲ್ಲಾ ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ತಪ್ಪದೇ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘದ ಅಧ್ಯಕ್ಷ ಎಂ.ಸಿ. ಮರಿಸ್ವಾಮಿ ಮನವಿ ಮಾಡಿದ್ದಾರೆ.

ಸಿದ್ದರಾಮಯ್ಯ ಪ್ರಬುದ್ಧ ರಾಜಕಾರಣಿ, ಅವರ ತೇಜೋವಧೆ ಸರಿಯಲ್ಲ

ವಾಟಾಳ್ ನಾಗರಾಜ್ ಕಳಕಳಿಯ ಮನವಿ

ಮೈಸೂರು, ಮಾ.28(ಆರ್‌ಕೆಬಿ)- ಸಿದ್ದರಾಮಯ್ಯ ಪ್ರಬುದ್ಧ ರಾಜಕಾರಣಿ, ಅವರ



ತೇಜೋವಧೆ ಮಾಡುವ ಪಿತೂರಿ ನಡೆಯುತ್ತಿರುವುದು ಸ್ಪಷ್ಟವಾಗಿದೆ. ಇದು ಒಳ್ಳೆಯ ಹಾಗೂ ಆರೋಗ್ಯಕರ ಬೆಳವಣಿಗೆಯಲ್ಲ ಎಂದು ಕನ್ನಡ ಚಳವಳಿ ನಾಯಕರೂ ಆದ ಮಾಜಿ ಶಾಸಕ ವಾಟಾಳ್ ನಾಗರಾಜ್ ಅವರು ಬಿಜೆಪಿಯವರ ವಿರುದ್ಧ ಇಂದಿಲ್ಲಿ ಕಿಡಿ ಕಾರಿದರು.

ಮೈಸೂರಿನ ಜಯಚಾಮರಾಜ ಒಡೆಯರ್ ವೃತ್ತ (ಹಾರ್ಡಿಂಜ್ ವೃತ್ತ)ದಲ್ಲಿ ಕನ್ನಡ ನಾಡು, ನುಡಿಗೆ ಧಕ್ಕೆ ಬಂದಿರುವುದರ ವಿರುದ್ಧ ಪ್ರತಿಭಟನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ನಾನು ಯಾವ ಮಠಾಧಿಪತಿಗಳ ಬಗ್ಗೆಯೂ ಅಗೌರವವಾಗಿ ನಡೆದುಕೊಂಡಿಲ್ಲ ಎಂದು ಸಿದ್ದರಾಮಯ್ಯ ಅವರೇ ಸ್ಪಷ್ಟಪಡಿಸಿದ್ದಾರೆ. ಬಿಜೆಪಿಯವರು ಬೇಕೆಂದೇ ಕಾಲ್ಕೆರೆದು ತೀಟೆ ಜಗಳ ತೆಗೆಯುವುದು ಸರಿಯಲ್ಲ ಬಿಜೆಪಿಯವರು ಚುನಾವಣೆಗೋಸ್ಕರ ಗೋಲ್‌ಮಾಲ್ ಮಾಡಿ ಉತ್ತರಪ್ರದೇಶದಲ್ಲಿ ಗೆದ್ದಂತೆ ಇಲ್ಲಿಯೂ ಮಾಡಲು ಹೊರಟಿದ್ದಾರೆ. ಅದಕ್ಕಾಗಿ ಹೀಗೆಲ್ಲಾ ನಡೆದುಕೊಳ್ಳುತ್ತಿದ್ದಾರೆ. ಇದು ಒಳ್ಳೆಯ ನಡೆಯಲ್ಲ ಎಂದು ಟೀಕಿಸಿದರು.

ಮುಸ್ಲೀಮರಿಗೆ ವ್ಯಾಪಾರ ನಿಷೇಧ ಪ್ರಜಾಪ್ರಭುತ್ವಕ್ಕೆ ಮಾರಕ: ಹಿಜಾಬ್, ಜಾತ್ರೆಗಳಲ್ಲಿ ಮುಸ್ಲಿಮರಿಗೆ ವ್ಯಾಪಾರ ನಿಷೇಧ ಎನ್ನಲಾಗುತ್ತಿದೆ. ಇದು ಸಹ ಒಳ್ಳೆಯ ಬೆಳವಣಿಗೆಯಲ್ಲ. ಇದು ಸಂವಿಧಾನ ವಿರೋಧಿಯಾಗುತ್ತದೆ. ಶತಮಾನಗಳಿಂದ ಮುಸ್ಲಿಮರು ಇಲ್ಲಿ ಬೆರೆತು ಬಾಳುತ್ತಿದ್ದಾರೆ. ಅವರಿಗೆ ಬೆದರಿಕೆ ಹಾಕಿ ಹೊರಗೆ ಹೋಗಿ ಎನ್ನುವುದು ಸರಿಯಲ್ಲ. ಐತಿಹಾಸಿಕ ವ್ಯಕ್ತಿ ಟಿಪ್ಪು ಸುಲ್ತಾನ್‌ನ ಚರಿತ್ರೆಗೆ ಮಸಿ ಬಳಿಯಬೇಡಿ ಎಂದು ಸಂಘಟನೆಗಳಿಗೆ ವಾಟಾಳ್ ಮನವಿ ಮಾಡಿದರು.

ಅಪ್ರಮಾಣಿಕ, ಅಸತ್ಯ ವಿಚಾರಗಳ ವೈಭವೀಕರಣ: ಬಿಜೆಪಿಯವರು ಅಪ್ರಮಾಣಿಕ, ಅಸತ್ಯ ವಿಚಾರಗಳನ್ನು ವೈಭವೀಕರಣ ಮಾಡಿ ರಾಜ್ಯದ ಜನರನ್ನು ದಾರಿ ತಪ್ಪಿಸುವ ಪ್ರಯತ್ನ ಮಾಡುತ್ತಿದ್ದಾರೆ. ಇದು ಒಳ್ಳೆಯ ನಡೆಯಲ್ಲ. ಬಿ.ಎಸ್.ಯಡಿಯೂರಪ್ಪನವರ ಕೃಪೆ, ಅವರ ನೆರಳು ಬೇಡ. ನಾವೇ ಸ್ವತಂತ್ರವಾಗಿ ಗೆಲ್ಲುತ್ತೇವೆ ಎಂದು ಇಂತಹ ಅನಗತ್ಯ ವಿಚಾರಗಳನ್ನು ಮುಂದೊಡ್ಡಿ ಜನರನ್ನು ತಪ್ಪು ದಾರಿಗೆಳೆದು ಮತ ಪಡೆಯುವ ಕುತಂತ್ರ ನಡೆಸುತ್ತಿದೆ ಎಂದು ದೂರಿದರು.

ಕಡಿವಾಣ ಹಾಕದಿದ್ದರೆ ಅಪಾಯ: ಕನ್ನಡ ಭಾಷೆ ಮಾತನಾಡುವ ಕರ್ನಾಟಕದಲ್ಲಿ ಪರಭಾಷಿಕರ ಹಾವಳಿ ಹೆಚ್ಚುತ್ತಿದೆ. ಎಲ್ಲೆಡೆಯಿಂದ ಪರಭಾಷಿಕರು ಕರ್ನಾಟಕಕ್ಕೆ ನುಗ್ಗುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕದಿದ್ದರೆ ಮುಂದಿನ ದಿನಗಳಲ್ಲಿ ಕನ್ನಡಿಗರಿಗೆ ಅತ್ಯಂತ ಕೆಟ್ಟ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಕಿಡಿ ಕಾರಿದರು. ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಕೇರಳ ರಾಜ್ಯಗಳಲ್ಲಿ ಕನ್ನಡ ಚಿತ್ರಗಳೇ ಇಲ್ಲ. ಆದರೆ ಕರ್ನಾಟಕದಲ್ಲಿ ಪರಭಾಷಾ ಚಿತ್ರಗಳ ಹಾವಳಿ ಹೆಚ್ಚಾಗಿದೆ. ಇದರಿಂದ ಕನ್ನಡ ಚಿತ್ರಗಳಿಗೆ, ಕನ್ನಡಿಗರಿಗೆ ಮಾರಕವಾಗುತ್ತಿದೆ. ಇದರ ವಿರುದ್ಧ ಹೋರಾಟ ರೂಪಿಸುವುದಾಗಿ ವಾಟಾಳ್ ನಾಗರಾಜ್ ತಿಳಿಸಿದರು. ಇದೇ ವೇಳೆ ವಾಟಾಳ್ ನಾಗರಾಜ್ ಅವರು ಕನ್ನಡ ಉಳಿಸಿ, ಕನ್ನಡಿಗರಿಗೆ ಉದ್ಯೋಗ ನೀಡಿ ಎಂದು ಘೋಷಣೆಗಳನ್ನು ಕೂಗಿದರು. ಪ್ರತಿಭಟನೆಯಲ್ಲಿ ಕನ್ನಡ ಪರ ಮುಖಂಡ ತಾಯೂರು ವಿಠಲಮೂರ್ತಿ ಇನ್ನಿತರರು ಉಪಸ್ಥಿತರಿದ್ದರು.

ಧರ್ಮ-ಸತ್ಯ ನಂಬಿದ್ದ ಹಿರಿಯ ವಿದ್ವಾಂಸ

ಪ್ರೊ. ನಾರಾಯಣಾಚಾರ್ಯರು ಅಂಜಿಕೆ ಇಲ್ಲದೆ ಧರ್ಮ ಪ್ರತಿಪಾದಿಸುತ್ತಿದ್ದರು

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ

ಮೈಸೂರು, ಮಾ.28(ಪಿಎಂ)- ನಾಡಿನ ಹಿರಿಯ ವಿದ್ವಾಂಸರಾಗಿದ್ದ ಪ್ರೊ.ಕೆ.ಎಸ್.ನಾರಾಯಣಾಚಾರ್ಯರು ಧರ್ಮ-ಸತ್ಯ ನಂಬಿದ್ದವರು. ಅದಕ್ಕೆ ಅವರಿಗೆ ಭಗವಂತನ ಶ್ರೀರಕ್ಷೆ ಪ್ರಾಪ್ತಿಯಾಗಿತ್ತು. ಹೀಗಾಗಿಯೇ ಅವರು ಯಾವುದೇ ಅಂಜಿಕೆ ಇಲ್ಲದೆ ಧರ್ಮದ ವಿಚಾರ ಪ್ರತಿಪಾದಿಸುತ್ತಿದ್ದರು ಎಂದು ಶ್ರೀ ದತ್ತಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಹೇಳಿದರು.

ಮೈಸೂರಿನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಶ್ರೀ ವೇದವಿದ್ಯಾ ಪ್ರಸಾರಿಣೀ ಸಭಾ ವತಿಯಿಂದ 'ನಮಾಮಿ ನಾರಾಯಣಂ' ಶೀರ್ಷಿಕೆಯಡಿ ಭಾನುವಾರ ಹಮ್ಮಿಕೊಂಡಿದ್ದ ಹಿರಿಯ ವಿದ್ವಾಂಸ ಪ್ರೊ.ಕೆ.ಎಸ್.ನಾರಾಯಣಾಚಾರ್ಯ ಅವರ ನುಡಿ ನಮನ ಮತ್ತು ಸ್ಮರಣಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಪ್ರೊ.ಕೆ.ಎಸ್.ನಾರಾಯಣಾಚಾರ್ಯರು ಧರ್ಮದ ವಿಚಾರದಲ್ಲಿ ಯಾವುದೇ ಸಭೆಯಾದರೂ ಯಾರೇ ಇದ್ದರೂ ಯಾವುದೇ ಅಂಜಿಕೆ ಇಲ್ಲದೆ, ಧರ್ಮದ ಪ್ರತಿಪಾದನೆ ಮಾಡುತ್ತಿದ್ದರು. ಅವರು ವಯೋವೃದ್ಧರೂ ಮಾತ್ರ ಆಗಿರಲಿಲ್ಲ. ಜೊತೆಗೆ ಜ್ಞಾನವೃದ್ಧರೂ ಹಾಗೂ ತಪೋ ವೃದ್ಧರೂ ಆಗಿದ್ದರು. ತಾವು ಹೇಳಿದ್ದನ್ನೇ ಪಾಲಿಸುತ್ತಿದ್ದ ಮೇರು ವ್ಯಕ್ತಿತ್ವ ಅವರದು ಎಂದರು.

ನಮಗೆ ಸಹಾಯ ಮಾಡಿದ, ಉಪಕಾರ ಮಾಡಿದವರಿಗೆ ಸದಾ ಕೃತಜ್ಞರಾಗಿರಬೇಕು. ಸಮಾಜಕ್ಕೆ ಅವರ ಕೊಡುಗೆ ಅಪಾರವಾಗಿದ್ದು, ಈ ಹಿನ್ನೆಲೆಯಲ್ಲಿ ನಾರಾಯಣಾಚಾರ್ಯರ ಸ್ಮರಣೆ ನಿತ್ಯವಲ್ಲ, ಪ್ರತಿಕ್ಷಣವೂ ಆಗಬೇಕು. ಹಾಗಾಗಿ ಎಲ್ಲರೂ ಸೇರಿ ಈ ಕೃತಜ್ಞತಾ ಸಭೆ ಆಯೋಜಿಸಿರುವುದು ಉತ್ತಮ ಕಾರ್ಯ. ಇದು ಮೈಸೂರಿನ ಸಂಸ್ಕಾರ. ಇದಕ್ಕೆ ಶ್ರಮಿಸಿದ ಎಲ್ಲರಿಗೂ ಒಳಿತಾಗಲಿ ಎಂದು ಆಶೀರ್ವದಿಸಿದರು.

ಪದ್ಮ ಪ್ರಶಸ್ತಿ ಲಭಿಸಬೇಕಿತ್ತು: ದೇಶ, ಸಂಸ್ಕೃತಿ, ಇತಿಹಾಸ, ವರ್ತಮಾನ, ಭವಿಷ್ಯದ ಕುರಿತು ನಾರಾಯಣಾಚಾರ್ಯರು ಆಳವಾಗಿ ಅರ್ಥೈಸಿಕೊಂಡಿದ್ದರು. ಅಲ್ಲದೆ, ಅದನ್ನು ಜನಮಾನಸದಲ್ಲಿ ಬಿತ್ತುವಲ್ಲಿ ಅಪರಿಮಿತ ತುಡಿತ ಹೊಂದಿದ್ದರು. ಹಾಗಾಗಿ ಅವರು ಪದ್ಮ ಪ್ರಶಸ್ತಿಗೆ ಯೋಗ್ಯರು. ಆದರೆ ಅರ್ಜಿ ಸಲ್ಲಿಸಿ ಪ್ರಶಸ್ತಿ ಪಡೆಯುವ ದಾರಿದ್ರ್ಯ ಅವರಿಗೆ ಇರಲಿಲ್ಲ. ಇದನ್ನು ಆಳುವವರು, ಜವಾಬ್ದಾರಿ ಸ್ಥಾನದಲ್ಲಿದ್ದವರು ಅರಿತುಕೊಳ್ಳಬೇಕಿತ್ತು ಎಂದು ಪತ್ರಕರ್ತ ಹರಿಪ್ರಕಾಶ್ ಕೋಣೆಮನೆ ಹೇಳಿದರು.




ಮೈಸೂರಿನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಭಾನುವಾರ ಹಿರಿಯ ವಿದ್ವಾಂಸ ಪ್ರೊ.ಕೆ.ಎಸ್.ನಾರಾಯಣಾಚಾರ್ಯ ಅವರ ನುಡಿ ನಮನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಶ್ರೀ ದತ್ತಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರು ಸೇರಿದಂತೆ ಮತ್ತಿತರರು ಚಿತ್ರದಲ್ಲಿದ್ದಾರೆ.

ವೆಬ್‌ಸೈಟ್ ಉದ್ಘಾಟನೆ: ನಾರಾಯಣಾಚಾರ್ಯ ಅವರ ಕುರಿತು ನವೀಕೃತ ವೆಬ್‌ಸೈಟ್ ಅನ್ನು ಹರಿಪ್ರಕಾಶ್ ಕೋಣೆಮನೆ ಲೋಕಾರ್ಪಣೆ ಮಾಡಿದರು. ಡಾ.ಕೆ.ಎಸ್. ನಾರಾಯಣಾಚಾರ್ಯರು ಮೈಸೂರಿನಲ್ಲಿ ನಡೆಸಿಕೊಟ್ಟ ಶ್ರೀ ಸಂಪೂರ್ಣ ರಾಮಾಯಣ ಪ್ರವಚನ ಮಾಲಿಕೆಯ 4ನೆಯ ಹಾಗೂ ಅಂತಿಮ ಆವೃತ್ತಿಯ ಧ್ವನಿಮುದ್ರಿಕೆಯನ್ನು ಮೈಸೂರು ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕ ದಿವಾಕರ ಹೆಗಡೆ ಬಿಡುಗಡೆಗೊಳಿಸಿದರು.

ಗೌರವಾರ್ಪಣೆ: ಸುಧರ್ಮಾ ಸಂಸ್ಕೃತ ದಿನಪತ್ರಿಕೆಯ ಸಂಪಾದಕರು, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಜಯಲಕ್ಷ್ಮಿ ಸಂಪತ್‌ಕುಮಾರ್ ಮತ್ತು ಹಿರಿಯ ವಕೀಲ ಸಿ.ವಿ.ಕೇಶವಮೂರ್ತಿ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಅತಿಥಿಗಳಾಗಿ ವಿಜಯನಗರದ ಶ್ರೀ ಯೋಗಾ ನರಸಿಂಹಸ್ವಾಮಿ ದೇವಸ್ಥಾನದ ಸ್ಥಾಪಕ ಶ್ರೀ ಭಾಷ್ಯಂ ಸ್ವಾಮೀಜಿ, ಶಾಸಕ ಎಸ್.ಎ.ರಾಮದಾಸ್, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್, ಹುಬ್ಬಳ್ಳಿಯ ಸಾಹಿತ್ಯ ಪ್ರಕಾಶನದ ಪ್ರಕಾಶಕ ಸುಬ್ರಹ್ಮಣ್ಯ, ಮುಕ್ತ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ.ಶೆಲ್ವಪಿಳ್ಳೈ ಅಯ್ಯಂಗಾರ್ ಅವರು ನಾರಾಯಣಾಚಾರ್ಯರ ಜೊತೆಗಿನ ತಮ್ಮ ಒಡನಾಟವನ್ನು ಮೆಲುಕು ಹಾಕಿದರು.

ರಂಗಭೂಮಿ, ಚಿತ್ರರಂಗಕ್ಕೆ ನಟ ರಾಜಾನಂದ್ ಸ್ಮರಣೀಯ ಕೊಡುಗೆ



ಮೈಸೂರಿನಲ್ಲಿ ರಂಗರತ್ನಾಕರ ಸಂಸ್ಥೆ ವತಿಯಿಂದ ಸೋಮವಾರ ಏರ್ಪಡಿಸಿದ್ದ 'ಪೌರಾಣಿಕ ರಂಗ ಸಂಭ್ರಮ' ಸಮಾರಂಭದಲ್ಲಿ ರಂಗ ನಾಟಕಗಳ ಪುಸ್ತಕಗಳನ್ನು ರಂಗ ಸಾಧಕರು ಬಿಡುಗಡೆ ಮಾಡಿದರು.

ಮೈಸೂರು, ಮಾ.28(ಎಸ್‌ಬಿಡಿ)– ರಂಗಭೂಮಿ ಹಾಗೂ ಚಿತ್ರರಂಗ ಸೇವೆಯ ಜೊತೆಗೆ ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರವಾದ ಕೊಡುಗೆ ನೀಡಿದ ಅಪ್ರತಿಮ ಪ್ರತಿಭೆ ದಿವಂಗತ ರಾಜಾನಂದ್ ಅವರನ್ನು ಸ್ಮರಿಸಬೇಕು ಎಂದು ಹಿರಿಯ ರಂಗಕರ್ಮಿ ಪಾರ್ಶ್ವನಾಥ್ ಹೇಳಿದರು.

ಮೈಸೂರು ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಬೆಂಗಳೂರಿನ



ರಂಗರತ್ನಾಕರ ಸಂಸ್ಥೆ ವತಿಯಿಂದ ಸೋಮವಾರ ಏರ್ಪಡಿಸಿದ್ದ 'ಪೌರಾಣಿಕ ರಂಗ ಸಂಭ್ರಮ' ಸಮಾರಂಭದಲ್ಲಿ ಮಾತನಾಡಿ, ರಾಜಾನಂದ್ ಅವರ ಮೂಲ ಹೆಸರು ವೆಂಕಟರಾಜು. ಅವರು ಅಸಂಖ್ಯಾತ ನಾಟಕಗಳನ್ನು ರಚಿಸಿದ್ದು, ಅದರಲ್ಲಿ ಕೆಲವು ಮಾತ್ರ ಮುದ್ರಣವಾಗಿವೆ ಎಂದು ತಿಳಿಸಿದರು.

ರಂಗಭೂಮಿ ಹಾಗೂ ಚಲನಚಿತ್ರ ರಂಗದ ಅಪ್ರತಿಮ ಪ್ರತಿಭೆಯಾಗಿದ್ದ ರಾಜಾನಂದ್, ಸಾಂಸ್ಕೃತಿಕ ಲೋಕಕ್ಕೆ ಅವಿಸ್ಮರಣೀಯ ಕೊಡುಗೆ ನೀಡಿದ್ದಾರೆ. 8 ವರ್ಷದ ಬಾಲಕನಾಗಿದ್ದಾಗಲೇ 'ಭಕ್ತ ಪ್ರಹ್ಲಾದ' ನಾಟಕದಲ್ಲಿ ಪ್ರಹ್ಲಾದನ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿದ್ದರು. 18ನೇ ವಯಸ್ಸಿನಲ್ಲಿ ಭಾಮಿನಿ ಷಟ್ಪದಿಯಲ್ಲಿ ನಾಟಕ ರಚಿಸಿದ್ದರು. ಸಾಹಿತ್ಯಶೀಲ, ಅಪರೂಪ ಕಲಾವಿದರಾಗಿದ್ದ ಅವರು, 300ಕ್ಕೂ ಹೆಚ್ಚು ಚಲನಚಿತ್ರದಲ್ಲಿ ನಟಿಸಿದ್ದಾರೆ. ನೂರಾರು ನಾಟಕಗಳ ರಚನೆ ಹಾಗೂ ಅಭಿನಯದ ಮೂಲಕ ಜನಮಾನಸದಲ್ಲಿ ಉಳಿದಿದ್ದಾರೆ ಎಂದರು.

ರಂಗಭೂಮಿ, ಚಲನಚಿತ್ರಕ್ಕಷ್ಟೇ ಮೀಸಲಾಗದೆ ಸಾಹಿತ್ಯ ಲೋಕದಲ್ಲೂ ತಮ್ಮದೇ ಛಾಪು ಮೂಡಿಸಿದ್ದಾರೆ. 9 ಸಾವಿರಕ್ಕೂ ಹೆಚ್ಚು ವಚನಗಳು, 12 ಸಾವಿರಕ್ಕೂ ಹೆಚ್ಚು ಕಾವ್ಯ, ಕವನ, ನೂರಾರು ದೇಶಭಕ್ತಿ ಗೀತೆಗಳನ್ನು ಬರೆದಿದ್ದಾರೆ. ಅವರು ಅಸಂಖ್ಯಾತ ನಾಟಕಗಳನ್ನು ರಚಿಸಿದ್ದು, ಕೆಲವು ಮಾತ್ರ ಪ್ರಕಟವಾಗಿವೆ. ಕನ್ನಡದ ಬಗ್ಗೆ ಅದರಲ್ಲೂ ಹಳಗನ್ನಡದಲ್ಲಿ ಉತ್ತಮ ಸಾಹಿತ್ಯಾಭಿರುಚಿ ಹೊಂದಿದ್ದರು. ಸೂಕ್ಷ್ಮಾತಿಸೂಕ್ಷ್ಮವಾಗಿ ಅವಲೋಕಿಸುವ ಶಕ್ತಿ ಹೊಂದಿದ್ದ ಅವರು, ಕನ್ನಡಿಗರಲ್ಲಿ ಕಲಾಪ್ರೇಮ ಹಾಗೂ ಕಲಾಪ್ರಜ್ಞೆ ಮೂಡಿಸಿದರು. ಇಂತಹ ಮಹನೀಯರನ್ನು ಸಾಂಸ್ಕೃತಿಕ ಲೋಕ ಸ್ಮರಿಸಿಕೊಳ್ಳಬೇಕು ಎಂದು ಆಶಯ ವ್ಯಕ್ತಪಡಿಸಿದರು.

ರಂಗ ಪುಸ್ತಕಗಳ ಬಿಡುಗಡೆ: ಇದೇ ವೇಳೆ 'ಮಹಿಷಾಸುರ ಮರ್ದಿನಿ', 'ಜಲಂಧರ' ಹಾಗೂ ರಾಜಾನಂದ್ ಅವರ 6 ಐತಿಹಾಸಿಕ ನಾಟಕಗಳನ್ನೊಳಗೊಂಡ ಎರಡು ಪುಸ್ತಕ ಸೇರಿದಂತೆ ಒಟ್ಟು 4 ಪುಸ್ತಗಳನ್ನು ಗಣ್ಯರು ಬಿಡುಗಡೆ ಮಾಡಿದರು.

ರಂಗಗೀತೆ- ರಂಗದೃಶ್ಯ: ಸಂಸ್ಥೆಯ ಅಧ್ಯಕ್ಷರೂ ಆದ ಕಿರಗಸೂರು ರಾಜಪ್ಪ, ವಿಘ್ನೇಶ್ವರನ ಪ್ರಾರ್ಥಿಸುವ ರಂಗಗೀತೆ ಹಾಡುವ ಮೂಲಕ ರಂಗಗೀತೆ ಗಾಯನಕ್ಕೆ ಚಾಲನೆ ನೀಡಿದರು. ಹಿರಿಯ ರಂಗಕಲಾವಿದ 96 ಹರೆಯದ ಎಂ.ಎಸ್.ವೆಂಕಟರಾಂ ಕುಪ್ಪ ಅವರು 'ಕೃಷ್ಣ ಸಂಧಾನ' ನಾಟಕದ 'ಕುಲಪತಿ ಕೌರವನ ಅರಮನೆಗೆ ಕಾಲಿಡಲು...', ಮೃತ್ಯುಂಜಯ ಮಳವಳ್ಳಿ 'ಬೇಡರಕಣ್ಣಪ್ಪ' ನಾಟಕದ 'ಶಂಭೋ ಮಹಾದೇವನೇ...', ಸಿ.ಸಿದ್ದಲಿಂಗೇಗೌಡ ಚಿನಕುರುಳಿ ಅವರು 'ಮಾದೇಶ್ವರ' ನಾಟಕದ 'ದೇವಾ ದೀನರ ಕಾಯುವೆಯಾ...', ಕಿರಗಸೂರು ರಾಜಪ್ಪ 'ಕೃಷ್ಣಲೀಲೆ' ನಾಟಕದ 'ದರುಶನ ನೀಡೋ ನಂದಕುಮಾರ...'. ರಾಧೆ ಅವರು 'ಎಲ್ಲೆಲ್ಲಿ ನೋಡಿದರೂ ಶಿವನಿಹನು...' 'ಲೋಕೇಶ್ ಗೋಕುಲಂ ಅವರು 'ದಕ್ಷಯಜ್ಞ' ನಾಟಕದ 'ಹೃದಯವು ಸ್ವರ ಹಾಡಿದೆ...' ರಂಗಗೀತೆಗಳನ್ನು ಮನೋಜ್ಞವಾಗಿ ಪ್ರಸ್ತುತಪಡಿಸಿದರು. ನಂತರ 'ದಾನ ಶೂರಕರ್ಣ', 'ಕುರುಕ್ಷೇತ್ರ', 'ಭಗವಾನ್ ಭಾರ್ಗವ', 'ವೀರ ಬಬ್ರುವಾಹನ' ನಾಟಕಗಳ ಒಂದೊಂದು ದೃಶ್ಯವನ್ನು ಮೈಸೂರು ಹಾಗೂ ಬೆಂಗಳೂರು ಕಲಾವಿದರು ಅಭಿನಯಿಸಿದರು.

ಹಿರಿಯ ರಂಗಕಲಾವಿದ ಎಂ.ಎಸ್. ವೆಂಕಟರಾಂ ಕುಪ್ಪ ಅವರು ಸಮಾರಂಭ ಉದ್ಘಾಟಿಸಿದರು. ಹಿರಿಯ ನಟಿ ಹೆಚ್.ಟಿ. ಇಂದಿರಮ್ಮ, ರಂಗತಜ್ಞ ಕೆ.ಜೆ.ನಾರಾಯಣ್, ಸಂಸ್ಥೆ ಅಧ್ಯಕ್ಷ ಕಿರಗಸೂರು ರಾಜಪ್ಪ, ಕಾರ್ಯದರ್ಶಿ ಹೆಚ್.ಎಸ್.ಗೋವಿಂದ ಗೌಡ ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬನವಾಸಿ ತೋಟದಲ್ಲಿ ಒಂದು ದಿನ ಕೃಷಿ ಕಾರ್ಯಾಗಾರ



ಮೈಸೂರು, ಮಾ.28(ಎಂಕೆ)– ತಾಲೂಕಿನ ಹುಯಿಲಾಳು ಗ್ರಾಮದಲ್ಲಿ ಸಮೀಪದಲ್ಲಿರುವ ಬನವಾಸಿ ತೋಟದಲ್ಲಿ ಕೃಷಿ ತಜ್ಞ ಟಿಜಿಎಸ್ ಅವಿನಾಶ್ ನೇತೃತ್ವದಲ್ಲಿ 'ಬನವಾಸಿ ತೋಟದಲ್ಲಿ ಒಂದು ದಿನ' ಕೃಷಿ ಕಾರ್ಯಾಗಾರ ನಡೆಯಿತು.

ರಾಜ್ಯ ಹಲವು ಜಿಲ್ಲೆಗಳಿಂದ ಆಗಮಿಸಿದ್ದ 25ಕ್ಕೂ ಹೆಚ್ಚು ಕೃಷಿಕರಿಗೆ ಆಹಾರ ಪದಾರ್ಥಗಳನ್ನು ಬೆಳೆಯುವ ವಿವಿಧ ವಿಧಾನಗಳ ಬಗ್ಗೆ ತಿಳಿಸಲಾಯಿತು. ಒಂದು ಎಕರೆ ಪ್ರದೇಶದಲ್ಲಿ ಸಹಜವಾಗಿ ಒದಗುವ ಬೆಳಕಿನಿಂದ ಸುಮಾರು 22 ಸಾವಿರ ಕೆಜಿ ಆಹಾರ ಪದಾರ್ಥಗಳನ್ನು ಬೆಳೆಯಬಹುದು ಎಂದು ಕೃಷಿ ತಜ್ಞ ಟಿಜಿಎಸ್ ಅವಿನಾಶ್ ತಿಳಿಸಿಕೊಟ್ಟರು. ದೇಶದಲ್ಲಿ ಶೇ.80ರಷ್ಟು ರೈತರ ಬಳಿ ನಾಟಿ ಹಸುಗಳು ಇಲ್ಲ. ಜಾಗತಿಕ ತಾಪಮಾನ ಹೆಚ್ಚಾಗುತ್ತಿರುವ ಕೃಷಿಯ ಮೇಲಾಗುತ್ತಿರುವ ಸಾಕಷ್ಟು ದುಷ್ಪರಿಣಾಮಗಳಾಗುತ್ತಿವೆ. ದ್ಯುತಿ ಸಂಶ್ಲೇಷಣಾ ಕ್ರಿಯೆಯಲ್ಲಿ ಸಹಕಾರಿಯಾಗುವ ಸೂರ್ಯನ ಕಿರಣಗಳಿಂದ ಒದಗುವ ಬೆಳಕಿನ ತೀವ್ರತೆಯಲ್ಲಿ ಏರುಪೇರಾಗುತ್ತಿದ್ದು, ಸಸ್ಯಗಳ ಬೆಳವಣಿಗೆ ಕುಂಠಿತಗೊಳ್ಳುತ್ತಿದೆ. ಇದರಿಂದ ಇಳುವರಿ ಪ್ರಮಾಣವು ಕಡಿಮೆಯಾಗುತ್ತಿದೆ ಎಂದು ಹೇಳಿದರಲ್ಲದೆ ಉತ್ತಮ ಬೆಳೆ ಬೆಳೆಯಲು ಅನುಸರಿಸದ ಬೇಕಾದ ಮಾರ್ಗಗಳನ್ನು ತಿಳಿಸಿದರು.

ರೈಲ್ವೆ ಹೈಟ್ ಗೇಜ್ ಕಾಮಗಾರಿಯಿಂದ ಕಿರಿಕಿರಿ


ವಾಹನ ಸವಾರರು, ಪಾದಚಾರಿಗಳು, ನಿವಾಸಿಗಳ ಪರದಾಟ

ಮೈಸೂರು, ಮಾ.28(ಎಂಕೆ)– ನಗರದ ಕೆ.ಜಿ.ಕೊಪ್ಪಲು ಸಮೀಪದ ಚಾಮರಾಜಪುರಂ ರೈಲ್ವೆ ನಿಲ್ದಾಣದ ಬಳಿಯ ಕೆ.ಜಿ.ಕೊಪ್ಪಲು (ಪೈ.ಬಸವಯ್ಯನ ವೃತ್ತಕ್ಕೆ ಹೊಂದಿಕೊಂಡಂತೆ) ಅಡ್ಡ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ 'ಹೈಟ್ ಗೇಜ್'(height gauge) ಕಾಮಗಾರಿಯಿಂದ ವಾಹನ ಸವಾರರು, ಪಾದಚಾರಿಗಳು, ಅಕ್ಕ-ಪಕ್ಕದ ನಿವಾಸಿಗಳಿಗೆ ಕಿರಿಕಿರಿ ಉಂಟಾಗಿದೆ.

ನೈರುತ್ಯ ರೈಲ್ವೆ ಮೈಸೂರು ವಿಭಾಗದಿಂದ ಮೈಸೂರು-ಚಾ.ನಗರ ಮಾರ್ಗ ಮಧ್ಯೆಯ ಚಾಮರಾಜಪುರಂ ರೈಲ್ವೆ ನಿಲ್ದಾಣದ ಬಳಿಯ ಅಡ್ಡ ರಸ್ತೆಗೆ 'ಹೈಟ್ ಗೇಜ್' ನಿರ್ಮಾಣ ಹಿನ್ನೆಲೆ ರಸ್ತೆಯ ಎರಡು ಕಡೆಗಳಲ್ಲಿಯೂ ನಾಲ್ಕು ಗುಂಡಿಗಳನ್ನು ತೆಗೆದಿದ್ದು, ಮಣ್ಣನ್ನು ಅಲ್ಲಿಯೇ ಬಿಟ್ಟಿರುವುದರಿಂದ ವಾಹನ ಸವಾರರಿಗೆ ತುಂಬಾ ತೊಂದರೆ ಉಂಟಾಗಿದೆ ಅಲ್ಲದೆ ಪಾದಚಾರಿಗಳ ತಿರುಗಾಟಕ್ಕೆ ತೊಡಕಾಗಿದೆ ಎಂದು ಸ್ಥಳೀಯ ನಿವಾಸಿಗಳು 'ಮೈಸೂರು ಮಿತ್ರ'ನಲ್ಲಿ ದೂರಿದ್ದಾರೆ.

ಕಳೆದ ಒಂದು ತಿಂಗಳಿಂದ ಹೈಟ್ ಗೇಜ್ ನಿರ್ಮಾಣ ಕಾಮಗಾರಿ ಸ್ಥಗಿತಗೊಂಡಿದೆ. ರಸ್ತೆ ಚಿಕ್ಕದಾಗಿರುವುದರಿಂದ ಬಲ್ಲಾಳ್ ವೃತ್ತ, ಆರ್‌ಟಿಓ, ಜಿಲ್ಲಾ ನ್ಯಾಯಾಲಯದ ಕಡೆಯಿಂದ ಕೆ.ಜಿ.ಕೊಪ್ಪಲು ಕಡೆಗೆ ಬರುವವರಿಗೆ ಹಾಗೂ ಕೆ.ಜಿ.ಕೊಪ್ಪಲು ಕಡೆಯಿಂದ ಇದೇ ರಸ್ತೆಯಲ್ಲಿ ತಿರುಗಾಡುವವರು ಪರದಾಡುವಂತಾಗಿದೆ. ಅದರಲ್ಲೂ ರೈಲುಗಳು ಬರುವ ವೇಳೆ ಗೇಟ್ ಬಂದ್ ಮಾಡಿ, ಮತ್ತೆ ಓಪನ್ ಮಾಡಿದ ವೇಳೆ ಏಕಾಏಕಿ ವಾಹನ ಸವಾರರು ನುಗ್ಗುತ್ತಾರೆ. ಈ ವೇಳೆ ಅಪಘಾತಗಳಾಗುತ್ತಿವೆ ಎಂದು ಕೆ.ಜಿ.ಕೊಪ್ಪಲು ನಿವಾಸಿಗಳಾದ ರಮೇಶ್, ಬಾಬು, ಮಹದೇವು, ದೀಪು, ಕುಮಾರ್ ತಿಳಿಸಿದರು.

2 ತಿಂಗಳಿಂದ ನಡೆಯುತ್ತಿದೆ: ಕಳೆದ ಎರಡ್ಮೂರು ತಿಂಗಳಿಂದ ಎಲೆಕ್ಟ್ರಿಕಲ್ ಹೈಟ್ ಗೇಜ್ ಕಾಮಗಾರಿ ನಡೆಯುತ್ತಿದೆ. ರೈಲು ಬರುವಾಗ ಯಾರೂ ರಸ್ತೆ ದಾಟದಂತೆ ಮಾಡುವ ಉದ್ದೇಶದಿಂದ ಹೈಟ್ ಗೇಜ್ ನಿರ್ಮಾಣ ಮಾಡಲಾಗುತ್ತಿದೆ. ಕಾಮಗಾರಿಯಲ್ಲಿ ವಿಳಂಬವಾಗಿರುವ ಕುರಿತು ಸಂಬಂಧಪಟ್ಟವರಿಗೆ ಮಾಹಿತಿ ನೀಡಲಾಗುವುದು ಎಂದು ನೈರುತ್ಯ ರೈಲ್ವೆ ಮೈಸೂರು ವಿಭಾಗದ ಸಿಬ್ಬಂದಿಯೊಬ್ಬರು ಮಾಹಿತಿ ನೀಡಿದರು.



ದಟ್ಟಗಳ್ಳಿ ಬಡಾವಣೆ ಸಮಗ್ರ ಅಭಿವೃದ್ಧಿಗೆ ಕ್ರಮ

ಶಾಸಕ ಜಿ.ಟಿ.ದೇವೇಗೌಡ ಭರವಸೆ



ಮೈಸೂರು, ಮಾ.28 –ಮೈಸೂರಿನ ಪ್ರಮುಖ ಬಡಾವಣೆಗಳಲ್ಲಿ ಒಂದಾದ ದಟ್ಟಗಳ್ಳಿ ಬಡಾವಣೆಯ ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಶಾಸಕ ಜಿ.ಟಿ. ದೇವೇಗೌಡ ತಿಳಿಸಿದರು.

ಅವರು ಇಂದು ರೂ. 1 ಕೋಟಿ 77 ಲಕ್ಷ ವೆಚ್ಚದಲ್ಲಿ ಮೈಸೂರು ಮಹಾನಗರ ಪಾಲಿಕೆಯ ವಾರ್ಡ್ ನಂ. 46ರ ದಟ್ಟಗಳ್ಳಿಯಿಂದ ಬೆಮೆಲ್ ಮೂಲಕ ರಿಂಗ್ ರಸ್ತೆಗೆ ಸೇರುವ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

ದಟ್ಟಗಳ್ಳಿ ಬಡಾವಣೆಯ ಎಲ್ಲ ರಸ್ತೆ ಮತ್ತು ಪಾರ್ಕ್‌ಗಳ ಅಭಿವೃದ್ಧಿಗೆ ಕ್ರಮ ವಹಿಸಲಾಗಿದೆ. ಪ್ರಾಧಿಕಾರದಿಂದ ಒಂದು ಬಾರಿ ಅಭಿವೃದ್ಧಿ ಪಡಿಸುವ ಯೋಜನೆಯಡಿ ಎಲ್ಲಾ ಪಾರ್ಕ್‌ಗಳನ್ನು ಸೇರಿಸಿದ್ದು, ಎಲ್ಲಾ ಪಾರ್ಕ್‌ಗಳನ್ನು ಮಾದರಿ ಪಾರ್ಕ್‌ಗಳನ್ನಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ತಿಳಿಸಿದರು.

ಈ ಕಾಮಗಾರಿಯಲ್ಲಿ ಹಾಲಿ ರಸ್ತೆಯ ಅಗಲವನ್ನು ವಿಸ್ತರಣೆ ಮಾಡಿ ರಸ್ತೆ ನಿರ್ಮಾಣ, ರಸ್ತೆಯ ಎರಡೂ ಬದಿಯಲ್ಲಿ ಪಾದಚಾರಿ ಮಾರ್ಗ ನಿರ್ಮಾಣ ಮಾಡಲಾಗುವುದು ಎಂದರು.

ನಂತರ ವಾರ್ಡ್ ನಂ.44ರ ವ್ಯಾಪ್ತಿಯ ಜನತಾನಗರದಲ್ಲಿ ಒಳಚರಂಡಿ ಸಮಸ್ಯೆಗೆ ಸ್ಥಳ ಪರಿಶೀಲನೆ ಮಾಡಲಾಯಿತು. ಸಮಾರಂಭದಲ್ಲಿ ಹಂಗಾಮಿ ಮೇಯರ್ ಸುನಂದಾಪಾಲನೇತ್ರ, ಪಾಲಿಕೆ ಆಯುಕ್ತರಾದ ಲಕ್ಷ್ಮೀಕಾಂತರೆಡ್ಡಿ, ಪಾಲಿಕೆ ಸದಸ್ಯರಾದ ಲಕ್ಷ್ಮೀ ಕಿರಣ್, ಸವಿತಾ ಸುರೇಶ್, ಅಧೀಕ್ಷಕ ಅಭಿಯಂತರರಾದ ಮಹೇಶ್, ಮುಖಂಡರಾದ ರಮೇಶ್ ಕಲ್ಲಿಪಾಳ್ಯ, ಶೇಖರ್, ಶಶಿ, ವೆಂಕಟೇಶ್, ಸುರೇಶ್, ವಿಕ್ಕಿ ಸುನೀತಾ ಬಂಡೆ, ಸಂತೋಷ್, ಬಸವಣ್ಣ ಹಾಗೂ ಹಲವಾರು ಮುಖಂಡರು, ವಲಯ ಅಧಿಕಾರಿಗಳಾದ ಪ್ರಕಾಶ್, ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ, ಮುಡಾ ಅಧಿಕಾರಿಗಳಾದ ಲೋಹಿತ್ ಇತರರು ಭಾಗವಹಿಸಿದ್ದರು.

ಕುಂಬಾರಕೊಪ್ಪಲು ಮಾರಮ್ಮ ಜಾತ್ರೆ: ಭಕ್ತಿ-ಭಾವದ ಪೂಜಾಕಾರ್ಯ



ಮೈಸೂರು, ಮಾ.28(ಎಂಕೆ)– ಮೈಸೂರಿನ ಕುಂಬಾರಕೊಪ್ಪಲು ಗ್ರಾಮ ದೇವತೆ ಶ್ರೀ ಮಾರಮ್ಮ(ಮಾರಿ ಗುಡಿ) ಜಾತ್ರೆ ಉತ್ಸವ ಅಪಾರ ಭಕ್ತಿ-ಭಾವದಿಂದ ನೆರವೇರಿತು.

ಎರಡು ದಿನಗಳು ಜರುಗಿದ ಜಾತ್ರೆಯಲ್ಲಿ ಸಾವಿರಾರು ಮಂದಿ ಭಕ್ತರು ಭಾಗವಹಿಸಿ ತಮ್ಮ ಹರಕೆಗಳನ್ನು ತೀರಿಸಿ ಶ್ರೀ ಮಾರಮ್ಮನ ಕೃಪೆಗೆ ಪಾತ್ರಾದರು. ಭಾನುವಾರ(ಮಾ.27) ಮಧ್ಯರಾತ್ರಿ 130ರಲ್ಲಿ ವಿಶೇಷ ಪೂಜೆ ಸಲ್ಲಿಸಿ, ಕುಂಬಾರಕೊಪ್ಪಲು ಗ್ರಾಮದ ಮಹದೇಶ್ವರ ದೇವಸ್ಥಾನದಿಂದ ಪ್ರಮುಖ ಬೀದಿಗಳಲ್ಲಿ ಶ್ರೀ ಮಾರಮ್ಮ ಮೂರ್ತಿಯ ಮೆರವಣಿಗೆ ನಡೆಸಲಾಯಿತು. ಬಳಿಕ ನಡೆದ 'ಮಾರಿ ಕುಣಿತ'ದಲ್ಲಿ ನೂರಾರು ಮಂದಿ ಗ್ರಾಮಸ್ಥರು ಭಾಗವಹಿಸಿದ್ದರು.

ಜೊತೆಗೆ ಮುಂಜಾನೆ 4 ಗಂಟೆಯಿಂದಲೇ ಗ್ರಾಮ ಪ್ರತಿ ಮನೆಯಿಂದಲೂ ತಂಬಿಟ್ಟು ತಂದು ಪೂಜೆ ನಡೆಸಲಾಯಿತು. ಸೋಮವಾರ ಸಂಜೆ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಮಾರಮ್ಮನಲ್ಲಿ ಹರಕೆ ಕಟ್ಟಿಕೊಂಡಿದ್ದ ಭಕ್ತರು ಬಾಯಿಗೆ ಬೀಗ ಹಾಕಿಕೊಂಡು, ಕೈಯಲ್ಲಿ ಬೆಂಕಿಯ ಕೊಳ್ಳಿ ಹಿಡಿದು ಮೆರವಣಿಗೆಯಲ್ಲಿ ಸಾಗಿ ತಮ್ಮ ಹರಕೆ ಸಲ್ಲಿಸಿದರು. ನಗರ ಪಾಲಿಕೆ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಮಾಜಿ ಸದಸ್ಯ ಜಯರಾಮ್, ಕುಮಾರ್‌ಗೌಡ, ರಾಮ್‌ಪ್ರಸಾದ್, ರಾಜೇಂದ್ರ, ಕುಂಬಾರ ಕೊಪ್ಪಲು ಅಭ್ಯುದಯ ಸಂಘದ ಪದಾಧಿಕಾರಿಗಳು, ಗ್ರಾಮದ ಮುಖಂಡರು ಭಾಗವಹಿಸಿದ್ದರು.

ಕಾನೂನು ಪದವಿಯಲ್ಲಿ ಬಿ. ಸಿಂಧುಗೆ 8ನೇ ರ್‍ಯಾಂಕ್

ಮೈಸೂರು, ಮಾ. 28– ಮೂಲತಃ ಪಿರಿಯಾಪಟ್ಟಣ ತಾಲೂಕು ಚಪ್ಪರದಹಳ್ಳಿ ಗ್ರಾಮದವರಾಗಿದ್ದು ಬೆಂಗಳೂರಿನ ಜಿಲ್ಲಾ ನ್ಯಾಯಾಧೀಶರಾಗಿರುವ ಸಿ.ಕೆ. ಬಸವರಾಜು ಮತ್ತು ಸಿ.ಎನ್.ಮಂಜುಳಾ ದಂಪತಿ ಪುತ್ರಿ ಬಿ. ಸಿಂಧು ಅವರು ಕಾನೂನು ಪದವಿಯಲ್ಲಿ 8ನೇ ರ್‍ಯಾಂಕ್ ಗಳಿಸಿದ್ದಾರೆ. ಪುತ್ತೂರಿನ ವಿವೇಕಾನಂದ ಕಾನೂನು ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಬಿ. ಸಿಂಧು ಅವರಿಗೆ ಧಾರವಾಡ ಕೃಷಿ ವಿವಿಯ ರೈತ ಜ್ಞಾನ ಕೇಂದ್ರದಲ್ಲಿ ಕಳೆದ ಶನಿವಾರ ನಡೆದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಪದವಿ ಪ್ರದಾನ ಮಾಡಿದರು.



ರಾಷ್ಟ್ರೀಯ ವಿಚಾರ ಸಂಕಿರಣ

ಮೈಸೂರು, ಮಾ.28(ಎಂಕೆ)– ನಗರದ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ವತಿಯಿಂದ 'ಟ್ರಾನ್ಸ್‌ಜೆನಿಕ್ಸ್ ಮತ್ತು ಥೆರಪ್ಯೂಟಿಕ್ಸ್' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಿತು.



ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿದ ಮೈಸೂರು ವಿವಿ ಜೈವಿಕ ತಂತ್ರಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ.ಎಸ್.ಉಮೇಶ್ ಮಾತನಾಡಿ, ಜನಸಂಖ್ಯೆಗೆ ಆಧಾರಿತ ಕೃಷಿ ಬೆಳೆ ಇಳುವರಿ ಹೆಚ್ಚಳ ಹಾಗೂ ಅಪೌಷ್ಟಿಕತೆಯನ್ನು ಎದುರಿಸಲು ಟ್ರಾನ್ಸ್‌ಜೆನಿಕ್ಸ್ ಅತ್ಯಗತ್ಯವಾಗಿದ್ದು, ಪ್ರೋಟೀನ್ ಉತ್ಪಾದನೆಗೂ ಸಹಕಾರಿಯಾಗಿದೆ ಎಂದು ಹೇಳಿದರು. ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರೊ.ಬಿ.ವಿ.ಸಾಂಬಶಿವಯ್ಯ, ಸಂಪನ್ಮೂಲ ವ್ಯಕ್ತಿಗಳಾದ ಡಾ.ಈಶ್ವರಪ್ಪ ಎಸ್. ಕಟಗೇರಿ, ಡಾ.ನಿರಂಜನ ಮೂರ್ತಿ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಪ್ರಾಂಶುಪಾಲ ಪ್ರೊ.ಎಂ.ಪಿ.ವಿಜಯೇಂದ್ರಕುಮಾರ್ ಉಪಸ್ಥಿತರಿದ್ದರು.

ನಿರ್ಮಾಣ ಸಾಮಗ್ರಿಗಳ ಪ್ರದರ್ಶನ 'ಮೈ ಬಿಲ್ಡ್-2021'ಕ್ಕೆ ತೆರೆ

ಅತ್ಯುತ್ತಮ ಮಳಿಗೆಗಳಿಗೆ ಬಹುಮಾನ



ಮೈಸೂರು, ಮಾ.28(ಎಂಕೆ)– ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಬಿಲ್ಡರ್ಸ್ ಅಸೋಸಿಯೇಶನ್ ಆಫ್ ಇಂಡಿಯಾ ಮೈಸೂರು ಘಟಕದ ವತಿಯಿಂದ ಆಯೋಜಿಸಿದ್ದ 5 ದಿನಗಳ 'ಮೈಬಿಲ್ಡ್-2021' (ಕಟ್ಟಡ ನಿರ್ಮಾಣ ಸಾಮಗ್ರಿಗಳು, ಉಪಕರಣಗಳು, ಅತ್ಯಾಧುನಿಕ ತಂತ್ರಜ್ಞಾನಗಳು ಮತ್ತು ರಿಯಲ್ ಎಸ್ಟೇಟ್)ವಸ್ತು ಪ್ರದರ್ಶನಕ್ಕೆ ಸೋಮವಾರ ತೆರೆ ಬಿದ್ದಿತು.

'ಮೈ ಬಿಲ್ಡ್' ವಸ್ತು ಪ್ರದರ್ಶನದ ಕಡೆ ದಿನ ನಡೆದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದ 97 ಸ್ಟಾಲ್‌ಗಳ ಪೈಕಿ ಸಿಂಗಲ್ ಸ್ಟಾಲ್ ವಿಭಾಗದಲ್ಲಿ 'ಸ್ಟೋನ್ ಸಿಂಕ್', ಪ್ರಥಮ, 'ರಿಲಿಕಾಂಪ್ ಎಲಿವೇಟರ್' ದ್ವಿತೀಯ ಹಾಗೂ 'ಐ ಲೀಫ್ ಡೋರ್ಸ್' ತೃತೀಯ ಬಹುಮಾನ ಪಡೆದರೆ, ಡಬಲ್ ಸ್ಟಾಲ್ ವಿಭಾಗದಲ್ಲಿ 'ಐ ಬಿಲ್ಡ್ ಸಲ್ಯೂಷನ್' ಪ್ರಥಮ, 'ಇಂಡಿಯಾ ಗೋಲ್ಡ್' ದ್ವಿತೀಯ ಹಾಗೂ 'ಡಿಕೋಲನ್.ಇನ್ (DECOLAN.IN)' ಸ್ಟಾಲ್‌ಗೆ ತೃತೀಯ ಬಹುಮಾನ ದೊರಕಿತು. ಹಾಗೆಯೇ ಮಲ್ಟಿ ಸ್ಟಾಲ್ ವಿಭಾಗದಲ್ಲಿ 'ಆರ್‌ಕೆಬಿ ಬಿಲ್ಡ್ ಪ್ರೋ' ಪ್ರಥಮ, 'ಎ-ಒನ್ ಗೋಲ್ಡ್' ಸ್ಟಾಲ್‌ಗೆ ದ್ವಿತೀಯ ಬಹುಮಾನ ಲಭಿಸಿತು. 'ಪಿಜಿ ಶೆಟ್ಟಿ ಕನ್‌ಸ್ಟ್ರಕ್ಷನ್'ಗೆ ಯೂನಿಕ್ ಸ್ಟಾಲ್ ಎಂದು ಬಹುಮಾನ ನೀಡಲಾಯಿತು.

ಮೈಸೂರು ಮುಂದು: ಇದಕ್ಕೂ ಮುನ್ನ ಸಮಾರಂಭದ ವಿಶೇಷ ಅತಿಥಿಯಾಗಿ ಆಗಮಿಸಿದ್ದ ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕ ಆರ್.ಮಂಜುನಾಥ್ ಮಾತನಾಡಿ, ಪ್ರತಿಯೊಂದು ಕ್ಷೇತ್ರದಲ್ಲಿಯೂ ಮೈಸೂರು ಮುಂದಿದೆ. ನೆರೆಯ ಕೇರಳ ರಾಜ್ಯದಲ್ಲಿ ಪ್ರವಾಸೋದ್ಯಮ ಕ್ಷೇತ್ರದಲ್ಲಾಗಿರುವ ಅಭಿವೃದ್ಧಿ ಮಾದರಿಯಲ್ಲಿ ಮೈಸೂರನ್ನು ಪ್ರವಾಸೋದ್ಯಮದ ಕೇಂದ್ರವನ್ನಾಗಿ ಮಾಡಲು ವಿಮಾನ ನಿಲ್ದಾಣ ಮುಖ್ಯವಾಗಿದೆ. ಮೈಸೂರಲ್ಲಿ ವಿಮಾನ ನಿಲ್ದಾಣವಾದ ಬಳಿಕ ರಿಯಲ್ ಎಸ್ಟೇಟ್‌ನಲ್ಲಿ ಭಾರೀ ಬದಲಾವಣೆಯಾಗಿದ್ದು, ನಿವೇಶನಗಳಿಗೆ ಬೇಡಿಕೆ ಹೆಚ್ಚಾಗಿದೆ. ಮೈಸೂರಿನ ವೈಭವ ದೇಶದ ಯಾವ ನಗರದಲ್ಲಿಯೂ ಇಲ್ಲ ಎಂದು ಹೇಳಿದರು.

ಇದೇ ವೇಳೆ ಡಿ.8 ರಿಂದ 12ರವರೆಗೆ ನಡೆಯುವ 'ಮೈ ಬಿಲ್ಡ್-22' ವಸ್ತು ಪ್ರದರ್ಶನ ಪೋಸ್ಟರ್ ಅನ್ನು ಬಿಡುಗಡೆ ಮಾಡಲಾಯಿತು. ಬಿಲ್ಡರ್ಸ್ ಅಸೋಸಿಯೇಶನ್ ಆಫ್ ಇಂಡಿಯಾ ಮೈಸೂರು ಘಟಕದ ಅಧ್ಯಕ್ಷ ಅಜಿತ್ ನಾರಾಯಣ್, ಕಾರ್ಯದರ್ಶಿ ಎ.ಎಸ್. ಯೋಗನರಸಿಂಹ, 'ಮೈ ಬಿಲ್ಡ್-21' ಅಧ್ಯಕ್ಷ ಸತೀಶ್ ಮೋಹನ್, ಕಾರ್ಯದರ್ಶಿ ಎಂ.ಡಿ. ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ದೇಶ ವಿದೇಶ

ಗೋವಾ ಮುಖ್ಯಮಂತ್ರಿಯಾಗಿ ಪ್ರಮೋದ್ ಸಾವಂತ್ ಪ್ರಮಾಣ

ಪಣಜಿ, ಮಾ. 28– ಗೋವಾ ಮುಖ್ಯಮಂತ್ರಿಯಾಗಿ ಸತತ 2ನೇ ಅವಧಿಗೆ ಪ್ರಮೋದ್ ಸಾವಂತ್ ಅವರು ಸೋಮವಾರ ಪ್ರಮಾಣವಚನ ಸ್ವೀಕಾರ ಮಾಡಿದ್ದಾರೆ. ರಾಜ್ಯ ರಾಜಧಾನಿ ಪಣಜಿ ಬಳಿಯ ಡಾ ಶ್ಯಾಮ ಪ್ರಸಾದ್ ಮುಖರ್ಜಿ ಕ್ರೀಡಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಗೋವಾ ರಾಜ್ಯಪಾಲ ಪಿಎಸ್ ಶ್ರೀಧರನ್ ಪಿಳ್ಳೈ ಅವರು ಸಾವಂತ್ ಅವರಿಗೆ ಪ್ರಮಾಣ ವಚನ ಬೋಧಿಸಿದರು.



ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವ ನಿತಿನ್ ಗಡ್ಕರಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ, ಹಿಮಾಚಲ ಪ್ರದೇಶದ ರಾಜ್ಯಪಾಲ ರಾಜೇಂದ್ರ ಅರ್ಲೇಕರ್, ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಮೂರು ಬಾರಿ ಶಾಸಕರಾಗಿರುವ ಪ್ರಮೋದ್ ಸಾವಂತ್, ಎರಡನೇ ಬಾರಿಗೆ ಗೋವಾದ ಸಿಎಂ ಆಗಿ ಆಯ್ಕೆಯಾಗಿದ್ದು, ಕೊಂಕಣಿ ಭಾಷೆಯಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಈ ಮೊದಲು ಸಿಎಂ ಆಗಿದ್ದ ಮನೋಹರ್ ಪರಿಕ್ಕರ್ ನಿಧನದ ನಂತರ ಪ್ರಮೋದ್ ಸಾವಂತ್ ಸಿಎಂ ಆಗಿ ಅಧಿಕಾರ ವಹಿಸಿಕೊಂಡಿದ್ದರು.

ಪ್ರಮಾಣವಚನ ಸ್ವೀಕರಿಸಿದ ಪ್ರಮೋದ್ ಸಾವಂತ್ ಸೇರಿದಂತೆ ಎಲ್ಲರಿಗೂ ಪ್ರಧಾನಿ ಮೋದಿಯವರು ಅಭಿನಂದನೆಗಳನ್ನು ತಿಳಿಸಿದ್ದಾರೆ. ಸಾಮಾಜಿಕ ಜಾಲತಾಣ ಟ್ವಿಟರ್‌ನಲ್ಲಿ ಟ್ವೀಟ್ ಮಾಡಿರುವ ಅವರು, ಈ ಇಡೀ ತಂಡವು ಗೋವಾದ ಜನರಿಗೆ ಉತ್ತಮ ಆಡಳಿತವನ್ನು ನೀಡುತ್ತದೆ ಮತ್ತು ಈ ಹಿಂದೆ ಮಾಡಿದಂತೆ ಜನಪರ ಕೆಲಗಳನ್ನು ಮಾಡುತ್ತದೆ ಎಂಬ ವಿಶ್ವಾಸ ನನಗಿದೆ ಎಂದು ಹೇಳಿದ್ದಾರೆ.

ಈಗ ಪ್ರಮೋದ್ ಸಾವಂತ್ ಜೊತೆಗೆ ವಿಶ್ವಜಿತ್ ರಾಣೆ, ಮೌವಿನ್ ಗೊಡಿನ್ಹೊ, ರವಿ ನಾಯ್ಕ್, ನೀಲೇಶ್ ಕಬ್ರಾಲ್, ಸುಭಾಷ್ ಶಿರೋಡ್ಕರ್, ರೋಹನ್ ಖೌಂಟೆ, ಗೋವಿಂದ್ ಗೌಡೆ ಮತ್ತು ಅಟಾನಾಸಿಯೊ ಮೊನ್ಸೆರಾಟ್ಟೆ ಅವರು ಸಂಪುಟ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಈ ನಡುವೆ ಗೋವಾ ರಾಜ್ಯಪಾಲ ಪಿ.ಎಸ್. ಶ್ರೀಧರನ್ ಪಿಳ್ಳೈ ಅವರು ಮಾರ್ಚ್ 29ರಿಂದ ಎರಡು ದಿನಗಳ ಹೊಸ ವಿಧಾನಸಭೆಯ ಅಧಿವೇಶನವನ್ನು ಕರೆದಿದ್ದಾರೆ. ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಿರುವ ಪ್ರಮೋದ್ ಸಾವಂತ್ ಅವರು ಮಂಗಳವಾರವೇ ವಿಶ್ವಾಸಮತ ಯಾಚನೆ ಮಾಡಿ ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸಬೇಕಾಗಿದೆ. ಇದಕ್ಕೂ ಮೊದಲು ನೂತನ ಸ್ಪೀಕರ್ ಆಯ್ಕೆ ನಡೆಯಲಿದೆ.

ರೈತ ನಾಯಕ ರಾಕೇಶ್ ಟಿಕಾಯತ್‌ಗೆ ಕೊಲೆ ಬೆದರಿಕೆ; ಪೊಲೀಸರಿಂದ ತನಿಖೆ

ಮುಜಾಫರ್‌ನಗರ, ಮಾ. 28– ಭಾರತೀಯ ಕಿಸಾನ್ ಯೂನಿಯನ್ ಮುಖ್ಯಸ್ಥ ರಾಕೇಶ್ ಟಿಕಾಯತ್‌ಗೆ ಅಪರಿಚಿತ ವ್ಯಕ್ತಿಗಳಿಂದ ಕೊಲೆ ಬೆದರಿಕೆ ಕರೆ ಬಂದಿದೆ. ಈ ಸಂಬಂಧ ದೂರು ದಾಖಲಿಸಿಕೊಳ್ಳಲಾಗಿದೆ ಎಂದು ಉತ್ತರ ಪ್ರದೇಶ ಪೊಲೀಸರು ಮಾಹಿತಿ ನೀಡಿದ್ದಾರೆ. ಟಿಕಾಯತ್ ಅವರ ಕಾರು ಚಾಲಕ ಪ್ರಜ್ವಲ್ ತ್ಯಾಗಿ ಸಿವಿಲ್ ಲೈನ್ಸ್ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಈ ದೂರಿನ ಆಧಾರದ ಮೇಲೆ ಪೊಲೀಸರು ತನಿಖೆ ಆರಂಭಿಸಿದ್ದಾರೆ ಎಂದು ಮುಜಾಫರ್‌ನಗರದ ಹಿರಿಯ ಪೊಲೀಸ್ ಅಧೀಕ್ಷಕ ಅಭಿಷೇಕ್ ಯಾದವ್ ಹೇಳಿದ್ದಾರೆ. ಹಿರಿಯ ಸಬ್ ಇನ್ಸ್‌ಪೆಕ್ಟರ್ ರಾಕೇಶ್ ಶರ್ಮಾ ನೇತೃತ್ವದ ಪೊಲೀಸ್ ತಂಡವು ಟಿಕಾಯತ್ ಅವರ ನಿವಾಸಕ್ಕೆ ಭೇಟಿ ನೀಡಿ ಅವರಿಂದ ಮಾಹಿತಿ ಕಲೆ ಹಾಕಿದೆ ಎಂದೂ ಪೊಲೀಸರು ತಿಳಿಸಿದ್ದಾರೆ.



ಬಿಜೆಪಿ ಪರ ಪ್ರಚಾರ: ಮುಸ್ಲಿಂ ಯುವಕನ ಬರ್ಬರ ಹತ್ಯೆ, ತನಿಖೆಗೆ ಯೋಗಿ ಆದೇಶ

ಕುಶಿನಗರ, ಮಾ. 28– ಭಾರತೀಯ ಜನತಾ ಪಕ್ಷದ ಪ್ರಚಾರದ ಸಂದರ್ಭದಲ್ಲಿ ಮುಸ್ಲಿಂ ವ್ಯಕ್ತಿಯ ಹತ್ಯೆಗೈದ ಘಟನೆ ಉತ್ತರಪ್ರದೇಶದ ಕುಶಿನಗರದಲ್ಲಿ ನಡೆದಿದ್ದು, ಈ ಬಗ್ಗೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ತನಿಖೆಗೆ ಆದೇಶಿಸಿದ್ದಾರೆ. ಮೃತ ವ್ಯಕ್ತಿಯನ್ನು ಮುಸ್ಲಿಂ ವ್ಯಕ್ತಿ ಬಾಬರ್ ಅಲಿ(25) ಎಂದು ಗುರುತಿಸಲಾಗಿದೆ ಬಿಜೆಪಿಯ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ್ದಕ್ಕಾಗಿ ಮತ್ತು ಇತ್ತೀಚೆಗೆ ನಡೆದ ರಾಜ್ಯ ಚುನಾವಣೆಯಲ್ಲಿ ವಿಜಯೋತ್ಸವ ಆಚರಿಸಿದ್ದಕ್ಕಾಗಿ ನೆರೆಹೊರೆಯವರಿಂದ ಥಳಿಸಲ್ಪಟ್ಟ ನಂತರ ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಇತ್ತೀಚೆಗೆ ನಡೆದ ಉತ್ತರ ಪ್ರದೇಶದ ವಿಧಾನಸಭೆಯಲ್ಲಿ ಬಿಜೆಪಿ ಭರ್ಜರಿ ಬಹುಮತ ಪಡೆದಿತ್ತು. ಇನ್ನು ಸಿಎಂ ಯೋಗಿ ಎರಡನೇ ಬಾರಿಗೆ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ.



ಮೆಕ್ಸಿಕೋದಲ್ಲಿ ಗುಂಡಿನ ದಾಳಿ: 19 ಮಂದಿ ಸಾವು

ಮೆಕ್ಸಿಕೋ ಸಿಟಿ, ಮಾ. 28– ಸೆಂಟ್ರಲ್ ಮೆಕ್ಸಿಕೋದಲ್ಲಿ ಭಾನುವಾರ 19 ಜನರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ ಎಂದು ಸ್ಟೇಟ್ ಅಟಾರ್ನಿ ಜನರಲ್ ಕಚೇರಿ (ಎಫ್‌ಜಿಇ) ಪ್ರಕಟಣೆಯಲ್ಲಿ ತಿಳಿಸಿದೆ. ಮೈಕೋಕಾನ್ ರಾಜ್ಯದ ಲಾಸ್ ಟಿನಾಜಾಸ್ ಪಟ್ಟಣದಲ್ಲಿ ಹಬ್ಬದ ಸಭೆಯ ಮೇಲೆ ದಾಳಿಯ ವರದಿಗಳ ನಂತರ ರಾತ್ರಿ ಸುಮಾರು 10.30ಕ್ಕೆ ಈ ದುರ್ಘಟನೆ ನಡೆದಿದೆ. 16 ಪುರುಷರು ಮತ್ತು ಮೂವರು ಮಹಿಳೆಯರು ಸೇರಿದಂತೆ 19 ದೇಹಗಳು ಪತ್ತೆಯಾಗಿದ್ದು, ಅವರ ದೇಹದ ಮೇಲೆ ಗುಂಡಿನ ಗಾಯಗಳು ಪತ್ತೆಯಾಗಿವೆ. ಇನ್ನೂ ಹಲವರು ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪ್ರಕಟಣೆ ಹೇಳಿದೆ. ಈ ಗುಂಡಿನ ದಾಳಿಗೆ ಕಾರಣ ಏನು ಎಂಬುದು ಇನ್ನೂ ತಿಳಿದುಬಂದಿಲ್ಲ. ಆದರೆ ಮೆಕ್ಸಿಕೋದ ಅತ್ಯಂತ ಹಿಂಸಾತ್ಮಕ ರಾಜ್ಯಗಳಾದ ಮೈಕೋಕಾನ್ ಮತ್ತು ನೆರೆಯ ಗುವಾನುಜುಟೊವೊ ಮಾದಕವಸ್ತು ಕಳ್ಳಸಾಗಣೆ ಮತ್ತು ಇತರ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ ಪ್ರತಿಸ್ಪರ್ಧಿ ಗ್ಯಾಂಗ್‌ಗಳ ನಡುವೆ ಈ ರೀತಿಯ ಜಗಳಗಳು ನಡೆಯುತ್ತವೆ.



ಇಸ್ರೇಲ್ ಪ್ರಧಾನಿಗೆ ಕೋವಿಡ್ ಸೋಂಕು

ಟೆಲ್ ಅವೀವ್, ಮಾ. 28– ಇಸ್ರೇಲ್ ಪ್ರಧಾನಿ ನಫ್ತಾಲಿ ಬೆನೆಟ್ ಅವರಿಗೆ ಸೋಮವಾರ COVID-19 ಸೋಂಕು ದೃಢಪಟ್ಟಿದ್ದು, ಅವರು ಬಹುನಿರೀಕ್ಷಿತ ಭಾರತ ಪ್ರವಾಸಕ್ಕೆ ಗೈರಾಗುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.

ಈ ಬಗ್ಗೆ ಇಸ್ರೇಲ್ ಪ್ರಧಾನಿ ನಫ್ತಾಲಿ ಬೆನೆಟ್ ಅವರ ಮಾಧ್ಯಮ ಸಲಹೆಗಾರರು ಮಾಹಿತಿ ನೀಡಿದ್ದು, ಪ್ರಧಾನಿ ಬೆನೆಟ್ ಅವರು ಕೋವಿಡ್ ಸೋಂಕಿಗೆ ತುತ್ತಾಗಿದ್ದು, ಅವರು ಆರೋಗ್ಯವಾಗಿದ್ದಾರೆ ಮತ್ತು ಮನೆಯಿಂದಲೇ ಕೆಲಸ ಮಾಡುವುದನ್ನು ಮುಂದುವರಿಸಲಿದ್ದಾರೆ ಎಂದು ಹೇಳಿದ್ದಾರೆ. ರಕ್ಷಣಾ ಸಚಿವ ಬೆನ್ನಿ ಗ್ಯಾಂಟ್ಜ್, ಆಂತರಿಕ ಭದ್ರತಾ ಸಚಿವ ಒಮರ್ ಬಾರ್ಲೆವ್, ಇಸ್ರೇಲ್ ರಕ್ಷಣಾ ಪಡೆಗಳ ಮುಖ್ಯಸ್ಥ ಅವಿವ್ ಕೊಹಾವಿ, ಶಿನ್ ಬೆಟ್ ಮುಖ್ಯಸ್ಥ ರೋನೆನ್ ಬಾರ್, ಪೊಲೀಸ್ ಮುಖ್ಯಸ್ಥ ಕೋಬಿ ಶಬ್ಟೈ ಮತ್ತು ಇತರರ ಭಾಗವಹಿಸುವಿಕೆಯೊಂದಿಗೆ ಬೆನೆಟ್ ಇಂದು ಬೆಳಗ್ಗೆ ಸಾಂದರ್ಭಿಕ ಮೌಲ್ಯಮಾಪನವನ್ನು ನಡೆಸಲಿದ್ದಾರೆ ಎನ್ನಲಾಗಿದೆ. ಇನ್ನು 50 ವರ್ಷದ ಬೆನೆಟ್ ಅವರು ಏಪ್ರಿಲ್ 3 ರಿಂದ 5 ರವರೆಗೆ ಭಾರತಕ್ಕೆ ಭೇಟಿ ನೀಡಬೇಕಿತ್ತು ಭೇಟಿಯನ್ನು ರದ್ದುಗೊಳಿಸಲಾಗುತ್ತದೆಯೇ ಎಂಬುದು ಇನ್ನೂ ತಿಳಿದಿಲ್ಲ.



ಹಿಜಾಬ್ ವಿಚಾರದಲ್ಲಿ ಹೆಣ್ಣು ಮಕ್ಕಳ ಟಾರ್ಗೆಟ್: ಹರ್ನಾಜ್ ಸಂಧು

ಮುಂಬೈ, ಮಾ. 28– ಹಿಜಾಬ್ ಸೇರಿದಂತೆ ಇನ್ನಿತರ ವಿಚಾರಗಳ ಮೂಲಕ ಹೆಣ್ಣು ಮಕ್ಕಳನ್ನು ಟಾರ್ಗೆಟ್ ಮಾಡುವುದನ್ನು ಸಮಾಜ ನಿಲ್ಲಿಸಬೇಕಾಗಿದೆ ಎಂದು ಭುವನ ಸುಂದರಿ ಹರ್ನಾಜ್ ಸಂಧು ಹೇಳಿದ್ದಾರೆ. ಅಲ್ಲದೇ, ಅವರು ಆಯ್ಕೆಯ ರೀತಿಯಲ್ಲಿ ಬದುಕಲು ಬಿಡಿ ಎಂದಿದ್ದಾರೆ. ಮಾರ್ಚ್ 17 ರಂದು ಭುವನ ಸುಂದರಿ ಆಗಿ ಆಯ್ಕೆಯಾಗಿದ್ದಕ್ಕೆ ನಡೆದ ಗೌರವ ಸಲ್ಲಿಕೆ ಸಮಾರಂಭದಲ್ಲಿ ಪತ್ರಕರ್ತರೊಬ್ಬರು ಹಿಜಾಬ್ ಕುರಿತಂತೆ ಕೇಳಿದ ಪ್ರಶ್ನೆಗೆ ಹರ್ನಾಜ್ ಸಂಧು ನೀಡಿದ ಹೇಳಿಕೆ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದೆ 'ನೀವೇಕೆ ಹೆಣ್ಣು ಮಕ್ಕಳನ್ನು ಇಷ್ಟೊಂದು ಗುರಿಯಾಗಿಸುತ್ತೀರಿ ಎಂದು ಪ್ರಾಮಾಣಿಕವಾಗಿ ಕೇಳುತ್ತೇನೆ. ಈಗಲೂ ನೀವು ನನ್ನನ್ನು ಗುರಿಯಾಗಿಸಿಕೊಂಡಿದ್ದೀರಿ. ಹಿಜಾಬ್ ವಿಚಾರದಲ್ಲಿ ಹೆಣ್ಣು ಮಕ್ಕಳನ್ನು ಗುರಿಯಾಗಿಸಿಕೊಳ್ಳಲಾಗಿದೆ. ಅವರಿಗೆ ಇಷ್ಟಬಂದಂತೆ ಬದುಕಲು ಬಿಡಿ. ಅವರ ಗುರಿ ತಲುಪಲು ಅವಕಾಶ ನೀಡಿ ಎಂದು ಹೇಳಿದರು. ಈ ವೇಳೆ ಮಧ್ಯ ಪ್ರವೇಶಿಸಿದ ಆಯೋಜಕರು, ರಾಜಕೀಯಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳದಂತೆ ಪತ್ರಕರ್ತರಿಗೆ ವಿನಂತಿಸಿದ್ದಾರೆ.



ಮೈಸೂರು ಮಿತ್ರ

ಮಂಗಳವಾರ 29 ಮಾರ್ಚ್ 2022

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ವಿವಿಧೆಡೆ ಪ್ರತಿಭಟನೆ



ಅಂಚೆ ನೌಕರರ ಪ್ರತಿಭಟನೆ

ನಂಜನಗೂಡು, ಮಾ.28– ಅಂಚೆ ಇಲಾಖೆ ಖಾಸಗೀಕರಣಗೊಳಿಸುವ ಹುನ್ನಾರ ಕೈ ಬಿಡಬೇಕು, ಗ್ರಾಮೀಣ ಅಂಚೆ ನೌಕರರನ್ನು ಖಾಯಂ ನೌಕರರೆಂದು ಘೋಷಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಅಖಿಲ ಭಾರತ ಅಂಚೆ ನೌಕರರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ನಗರ ಅಂಚೆ ಕಚೇರಿ ಮುಂಭಾಗ ಜಮಾಯಿಸಿದ ಅಂಚೆ ನೌಕರರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಗ್ರಾಮೀಣ ಅಂಚೆ ನೌಕರರ ಸಂಘದ ರಾಜ್ಯ ಕಾರ್ಯದರ್ಶಿ ರುದ್ರೇಶ್ ಮಾತನಾಡಿ, ಕೇಂದ್ರ ಸರ್ಕಾರ ಒಂದೊಂದೆ ಸಾರ್ವಜನಿಕ ಸಂಸ್ಥೆಗಳನ್ನು ಖಾಸಗೀಕರಣಗೊಳಿಸುವ ಮೂಲಕ ಹಿಂದಿನ ಬಾಗಿಲಿನಿಂದ ನೌಕರರ ಸವಲತ್ತುಗಳನ್ನು ಕಸಿಯುತ್ತಿದೆ. ಈ ಕೂಡಲೇ ಕೇಂದ್ರ ಸರ್ಕಾರ ಕಮಲೇಶ್ ಚಂದ್ರ ವರದಿ ಜಾರಿಗೊಳಿಸಿ ಗ್ರಾಮೀಣ ಅಂಚೆ ನೌಕರರ ಬೇಡಿಕೆ ಈಡೇರಿಸಲು ಮುಂದಾಗಬೇಕು. ಗ್ರಾಮೀಣ ಅಂಚೆನೌಕರರನ್ನು ಖಾಯಂ ನೌಕರರೆಂದು ಘೋಷಿಸಬೇಕು. ಸೇವಾವಧಿಯಲ್ಲಿ 3 ಕಾಲ ನಿಗದಿಯಲ್ಲಿ ಬಡ್ತಿ ಹೆಚ್ಚಿಸಬೇಕು. ಅಂಚೆ ನೌಕರರಿಗೆ ನೀಡುವ ವೈದ್ಯಕೀಯ ಸೌಲಭ್ಯವನ್ನು ಗ್ರಾಮೀಣ ಅಂಚೆ ನೌಕರರಿಗೂ ನೀಡಬೇಕು. ಜಿಡಿಎಸ್ ಬದಲಿ ನೌಕರು ವ್ಯವಸ್ಥೆಗೆ ನೀಡಿರುವ ಸೂಚನೆ ಹಿಂಪಡೆಯಬೇಕು. ಗುಂಪು ವಿಮೆ ಮೊತ್ತ 5 ಲಕ್ಷಕ್ಕೆ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಅಂಚೆ ನೌಕರರ ಸಂಘದ ಕಾರ್ಯದರ್ಶಿ ಮಂಜುನಾಥ್ ಮಾತನಾಡಿ, ಪಿಂಚಣಿ ಸೌಲಭ್ಯವಿಲ್ಲದೆ ನಿವೃತ್ತ ನೌಕರರ ಬದುಕು ದುಸ್ತರವಾಗಿದೆ. ಆದ್ದರಿಂದ ಹಳೆಯ ಪಿಂಚಣಿ ಸೌಲಭ್ಯ ಕಲ್ಪಿಸಬೇಕು. ಇತಿಹಾಸವಿರುವ ಅಂಚೆ ಕಚೇರಿಯನ್ನು ಖಾಸಗೀಕರಣಗೊಳಿಸುವುದನ್ನು ನಿಲ್ಲಿಸಬೇಕು. 1 ಲಕ್ಷಕ್ಕೂ ಹೆಚ್ಚಿನ ಖಾಲಿ ಹುದ್ದೆ ಭರ್ತಿಗೆ ಮುಂದಾಗಬೇಕು. ಗುತ್ತಿಗೆ ನೌಕರರನ್ನು ಖಾಯಂ ನೌಕರರೆಂದು ಪರಿಗಣಿಸಿ ಸಂಬಳ ಭತ್ಯೆ ನೀಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಶೇಖಣ್ಣ, ಬಿ.ಸುಬ್ಬಣ್ಣ, ಚಿನ್ನಸ್ವಾಮಿ, ರೇವಣ್ಣ ಸಿದ್ದಪ್ಪ, ವಿ.ಎಸ್.ಪ್ರಕಾಶ್, ಎಂ.ಡಿ.ಶಿವಣ್ಣ, ಎಂ.ಆರ್.ಮಧು, ರವಿಬೆಳಲೆ, ಮಹದೇವಪ್ಪ, ಶಿವರಾಜು, ಗುಜ್ಜ ನಾಯಕ್, ಭಾಸ್ಕರ್, ಅಂಚೆ ನೌಕರರು ಇದ್ದರು.

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ ಧರಣಿ



ತಿ.ನರಸೀಪುರ, ಮಾ.28(ಎಸ್‌ಕೆ)– ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿ ಹಾಗೂ ಜನವಿರೋಧಿ ಕೃಷಿ ಕಾನೂನುಗಳು, ವಿದ್ಯುತ್ ತಿದ್ದುಪಡಿ ಮಸೂದೆ ರದ್ದುಪಡಿಸುವಂತೆ ಒತ್ತಾಯಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್‌ನಿಂದ ಪಟ್ಟಣದ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಬಿಸಿಯೂಟ ನೌಕರರ ಸಂಘ, ತಾಲೂಕು ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಯುವ ಫೆಡರೇಶನ್ ಕಾರ್ಯಕರ್ತರು ಪಟ್ಟಣದ ಮಿನಿಸೌಧದ ಮುಂಭಾಗ ಜಮಾಯಿಸಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿದರು.

ಪ್ರಜಾಸತ್ತಾತ್ಮಕ ಯುವ ಫೆಡರೇಶನ್ ತಾಲೂಕು ಘಟಕದ ಅಧ್ಯಕ್ಷ ಸಿದ್ದಮಲ್ಲಪ್ಪ ಮಾತನಾಡಿ, ಅಗತ್ಯ ವಸ್ತುಗಳ ಕಾಯಿದೆ ತಿದ್ದುಪಡಿ, ಇಂಧನ ಬೆಲೆಗಳ ಏರಿಕೆ, ಭೂ ಸುಧಾರಣೆ, ಎಪಿಎಂಸಿ ಕಾಯ್ದೆ, ವಿದ್ಯುತ್ ಖಾಸಗೀಕರಣ ಮಸೂದೆಗಳ ತಿದ್ದುಪಡಿ, ಸಾರ್ವಜನಿಕ ಲಾಭದಾಯಕ ಸರ್ಕಾರಿ ಉದ್ದಿಮೆಗಳ ಖಾಸಗೀಕರಣ, ಕಾರ್ಮಿಕರ ಮಸೂದೆ ತಿದ್ದುಪಡಿಯಿಂದಾಗಿ ನಿರುದ್ಯೋಗ ಸೃಷ್ಟಿಯಾಗುತ್ತಿದೆ ಎಂದು ಆರೋಪಿಸಿದರು. ಕೊರೊನಾ ವೇಳೆ ಉದ್ಯೋಗ ಹಾಗೂ ವೇತನ ನಷ್ಟಕ್ಕೆ ಪರಿಹಾರ ಕೊಡಬೇಕು. ಹೆಚ್ಚು ಉದ್ಯೋಗ ಸೃಷ್ಟಿಸಬೇಕು. ಸರ್ಕಾರಿ ಹಾಗೂ ಸಾರ್ವಜನಿಕ ಕ್ಷೇತ್ರದಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕೆಂದು ಆಗ್ರಹಿಸಿದರು.

ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಖಾದ್ಯ ತೈಲ ಇತ್ಯಾದಿ ಎಲ್ಲಾ ಅಗತ್ಯ ಸರಕುಗಳ ಬೆಲೆಯಲ್ಲಿ ಆಗಿರುವ ಏರಿಕೆ ನಿವಾರಿಸಬೇಕು. ಆದಾಯ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಎಲ್ಲಾ ಕುಟುಂಬಗಳಿಗೆ ತಿಂಗಳಿಗೆ 10 ಸಾವಿರ ರೂ.ನಂತೆ ನಗದು ವರ್ಗಾವಣೆ ಮಾಡಬೇಕು. ಖಾಸಗೀಕರಣ ಹಾಗೂ ಸಾರ್ವಜನಿಕ ವಲಯಗಳ ಉದ್ದಿಮೆಗಳ, ಸರ್ಕಾರಿ ಇಲಾಖೆಗಳ ಖಾಸಗೀಕರಣ ಹಾಗೂ ಬಂಡವಾಳ ವಾಪಸ್ಸಾತಿಗಳನ್ನು ನಿಲ್ಲಿಸಬೇಕು. ಕಠಿಣ ಅಗತ್ಯ ರಕ್ಷಣಾ ಸೇವಾ ಸುಗ್ರೀವಾಜ್ಞೆಯನ್ನು ವಾಪಸ್ ಪಡೆಯಬೇಕೆಂದು ಒತ್ತಾಯಿಸಿದರು. ಇದೇ ವೇಳೆ ಶಿರಸ್ತೇದಾರ್ ಮಹದೇವನಾಯಕರಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಸಾವಿತ್ರಮ್ಮ, ಹೇಮ, ಗೌರಮ್ಮ, ಹೆಚ್.ಎನ್.ನವೀನ್ ಕುಮಾರ್, ಕೃಷ್ಣ, ಸುನಂದ, ನಂಜಮ್ಮಣ್ಣಿ, ನವೀನ, ಮಹದೇವಮ್ಮ, ಪುಷ್ಪ, ಚಂದ್ರಮ್ಮ, ಪುಟ್ಟಮರಮ್ಮ, ನಾಗಮ್ಮಣ್ಣಿ, ರಾಧ, ಜ್ಯೋತಿ, ಪವಿತ್ರ, ಶಿವಮ್ಮ ಮತ್ತಿತರರಿದ್ದರು.

ಕಾರ್ಮಿಕ ಸಂಘಟನೆಯಿಂದ ಪ್ರತಿಭಟನೆ



ನಂಜನಗೂಡು, ಮಾ.28– ಕೇಂದ್ರದ ಕಾರ್ಮಿಕ ವಿರೋಧಿ ನೀತಿ ವಿರೋಧಿಸಿ ಹಾಗೂ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಕಾರ್ಮಿಕ ಸಂಘಟನೆಗಳು ಕರೆ ನೀಡಿದ್ದ ಮುಷ್ಕರ ನಂಜನಗೂಡಿನಲ್ಲಿ ಯಶಸ್ವಿಯಾಯಿತು.

ಎಐಯುಟಿಯುಸಿ, ಸಿಐಟಿಯು, ಕಾರ್ಖಾನೆ ಕಾರ್ಮಿಕರ ಸಂಘಟನೆಗಳು ನಗರದಲ್ಲಿ ಪ್ರತಿಭಟನಾ ರ್‍ಯಾಲಿ ನಡೆಸಿದ್ದಲ್ಲದೆ ನಗರದ ಹುಲ್ಲಹಳ್ಳಿ ವೃತ್ತದ ಬಳಿ ಧರಣಿ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಿಐಟಿಯು ಜಿಲ್ಲಾಧ್ಯಕ್ಷ ಬಾಲಾಜಿರಾವ್ ಮಾತನಾಡಿ, ಕೇಂದ್ರ ಸರ್ಕಾರ ಕಾರ್ಮಿಕರ ಕಾನೂನುಗಳನ್ನು ತಿದ್ದುಪಡಿ ಮೂಲಕ ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಳ್ಳಲು ಪ್ರಯತ್ನಿಸುತ್ತಿದೆ. ಈ ಕಾನೂನು ಕಾರ್ಪೋರೇಟ್ ಕಂಪನಿಗಳ ಪರ ಇರುವುದರಿಂದ ಕೆಲಸ ಮಾಡಿದರೂ ಸಮಯಕ್ಕೆ ಸರಿಯಾಗಿ ಕೂಲಿ ಸಿಗುತ್ತಿಲ್ಲ. ಕೆಲಸದಿಂದ ಏಕಾಏಕಿ ವಜಾಗೊಳಿಸಿ ಕಾರ್ಮಿಕರ ಮೇಲೆ ನಿರಂತರ ದೌರ್ಜನ್ಯ ನಡೆಸುತ್ತಿವೆ. ಮುಂದಿನ ದಿನಗಳಲ್ಲಿ ಕಾರ್ಮಿಕ ನ್ಯಾಯಾಲಯಗಳೇ ಇರುವುದಿಲ್ಲ. ಜೊತೆಗೆ ದೇಶದ ಸಂಪತ್ತಾದ ರೈಲ್ವೆ, ವಿಮೆ, ಅಂಚೆ ಕಚೇರಿಯಂತಹ ಸಾರ್ವಜನಿಕ ಉದ್ದಿಮೆಯನ್ನು ಖಾಸಗೀಕರಣಗೊಳಿಸಿ ಕಾರ್ಪೋರೇಟ್ ಕಂಪನಿಗಳಿಗೆ ಅನುಕೂಲವಾಗುವಂತೆ ಕಾನೂನು ರೂಪಿಸುವ ಮೂಲಕ ದುಡಿಯುವ ವರ್ಗವನ್ನು ನವ ಜೀತಪದ್ಧತಿಗೆ ದೂಡುವ ಹುನ್ನಾರ ನಡೆಸುತ್ತಿದೆ. ಇಂತಹ ಕಾರ್ಮಿಕ ವಿರೋಧಿ ಕಾನೂನು ಜಾರಿಯಾಗಲು ಬಿಡದಂತೆ ನಿರಂತರ ಹೋರಾಟ ನಡೆಲಾಗುವುದು ಎಂದು ಎಚ್ಚರಿಸಿದರು. ಮುಖಂಡ ಚಂದ್ರಶೇಖರ್ ಮೇಟಿ, ಹೆಚ್.ಎಸ್. ಸುನಂದ, ಸಂಚಾಲಕರಾದ ಶ್ರೀನಿವಾಸ್, ಧನಂಜಯ್, ಲೀಲಾವತಿ, ಕೆ.ಮಂಜುಳಾ, ರೈತ ಸಂಘದ ಬೊಕ್ಕಳ್ಳಿ ನಂಜುಂಡಸ್ವಾಮಿ ಸೇರಿದಂತೆ ವಿವಿಧ ಕಾರ್ಖಾನೆ ಕಾರ್ಮಿಕರು ಪ್ರತಿಭಟನೆಯಲ್ಲಿದ್ದರು.

ಕಂಪಲಾಪುರ ಪಿಎಸಿಎಸ್ ಅಧ್ಯಕ್ಷರಾಗಿ ಜಯಣ್ಣ ಆಯ್ಕೆ



ಕಂಪಲಾಪುರ ಮಾ.28(ಸದಾ)– ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಕೆ.ಎನ್.ಜಯಣ್ಣ (ಕಟ್ಟೆ) ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಕೆ.ಕುಮಾರ್ ಆಂತರಿಕ ಒಪ್ಪಂದದಂತೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಸಹಕಾರ ಇಲಾಖೆ ನಿಯಮದಂತೆ ಸಂಘದ ಸಭಾಂಗಣದಲ್ಲಿ ಚುನಾವಣೆ ನಿಗದಿಯಾಯಿತು. ಅಧ್ಯಕ್ಷ ಸ್ಥಾನಕ್ಕೆ ಜಯಣ್ಣ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಿ.ಎನ್.ಗಿರೀಶ್ ಘೋಷಿಸಿದರು.

ಈ ವೇಳೆ ಸಿಇಓ ಪಿ.ವೈ.ಮಂಜುಳಾ, ಉಪಾಧ್ಯಕ್ಷ ಮಹೇಶ್, ಮಾಜಿ ಅಧ್ಯಕ್ಷ ಕೆ.ಕುಮಾರ್, ನಾಗೇಗೌಡ, ಪುಟ್ಟೇಗೌಡ, ನಿರ್ದೇಶಕರಾದ ರವಿ, ಸಂತೋಷ್, ಸತ್ಯನಾರಾಯಣ್, ರಾಜೇಗೌಡ, ಲೋಕೇಶ್, ಲಕ್ಷ್ಮಣ್, ಸಣ್ಣಮ್ಮ, ಸಾಕಮ್ಮ, ಕೆಂಪಯ್ಯ ಮಾಜಿ ನಿರ್ದೇಶಕ ಲೋಕೇಶ್, ಸ್ವಾಮಿಗೌಡ, ಮುಖಂಡರಾದ ಸೂರಿ, ಮಹೇಶ್, ನಾಗರಾಜ್, ತನು, ಉಮೇಶ್, ಆನಂದ್, ಪುನೀತ್, ಸಿಬ್ಬಂದಿ ನಾಗರಾಜ್, ಸಂತೋಷ್, ಮದನ್, ಬಾಲು, ಸಂತು ಹಾಜರಿದ್ದರು.



ತಿ.ನರಸೀಪುರ ತಾಲೂಕಿನ ಸೀಹಳ್ಳಿಯಲ್ಲಿ ಇತ್ತೀಚೆಗೆ ಶಾರ್ಟ್ ಸರ್ಕ್ಯೂಟ್‌ನಿಂದ ಮನೆ ಅಗ್ನಿಗಾಹುತಿಯಾಗಿ, ಸಜೀವ ದಹನಗೊಂಡ ಸೋಮಶೇಖರಪ್ಪನವರ ಕುಟುಂಬಕ್ಕೆ ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ವೈದ್ಯಕೀಯ ವಿಭಾಗದ ಅಧ್ಯಕ್ಷ ಡಾ.ಬಿ.ಪ್ರದೀಪ್ ಸಾಂತ್ವನ ಹೇಳಿ ಆಹಾರದ ಕಿಟ್, ನಗದು ನೀಡಿ ಧೈರ್ಯ ತುಂಬಿದರು. ಈ ವೇಳೆ ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ಕಾರ್ಮಿಕ ವಿಭಾಗದ ಕಾರ್ಯದರ್ಶಿ ಜೆ.ಶ್ರೀಕಾಂತ್, ಕಾಂಗ್ರೆಸ್ ಮುಖಂಡ ಎಸ್.ರಾಜಶೇಖರ್, ಯುವ ಮುಖಂಡ ಪ್ರಮೋದ್ ಹಾಜರಿದ್ದರು.

ಬನ್ನೂರು ಪುರಸಭೆಗೆ ಭಾಗ್ಯ ಉಪಾಧ್ಯಕ್ಷೆ



ಬನ್ನೂರು, ಮಾ.28(ಪ್ರಭು)– ಪಟ್ಟಣದ ಪುರಸಭೆಗೆ ಎರಡನೇ ಅವಧಿಗೆ ಉಪಾಧ್ಯಕ್ಷೆಯಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಭಾಗ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪುರಸಭೆಯಲ್ಲಿ ಸೋಮವಾರ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ಭಾಗ್ಯ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆಯನ್ನು ತಾಲೂಕು ತಹಸೀಲ್ದಾರ್ ಗಿರಿಜಾ ಪ್ರಕಟಿಸಿದರು. ಈ ವೇಳೆ ಶಾಸಕ ಎಂ.ಅಶ್ವಿನ್‌ಕುಮಾರ್ ನೂತನ ಉಪಾಧ್ಯಕ್ಷೆಯನ್ನು ಹೂಗುಚ್ಛ ನೀಡಿ ಅಭಿನಂದಿಸಿದರು. ಈ ವೇಳೆ ಪುರಸಭಾಧ್ಯಕ್ಷೆ ಭಾಗ್ಯಕೃಷ್ಣ, ಮಾಜಿ ಅಧ್ಯಕ್ಷ ಕೃಷ್ಣೇಗೌಡ, ಪುರಸಭಾ ಸದಸ್ಯರಾದ ಶಿವಣ್ಣ, ಅನಂತಮೂರ್ತಿ, ಆನಂದ್, ಪ್ರಭಾಕರ್, ಪರಶಿವಮೂರ್ತಿ, ಮರಿಗೌಡ, ಶಂಕರೇಗೌಡ, ರವಿ, ರಾಮಚಂದ್ರು ಸೇರಿದಂತೆ ಹಲವರಿದ್ದರು.

ಲಕ್ಷ್ಮಣತೀರ್ಥ ನದಿಗೆ ತ್ಯಾಜ್ಯ ಸೇರ್ಪಡೆ ತಡೆ ಕಾಮಗಾರಿಗೆ ಚಾಲನೆ



ಹುಣಸೂರು, ಮಾ.28(ಕೆಕೆ)– ನಗರದ ಒಳಚರಂಡಿ ತ್ಯಾಜ್ಯ ನೀರು ಲಕ್ಷ್ಮಣತೀರ್ಥ ನದಿಗೆ ಸೇರುವುದನ್ನು ತಡೆದು, ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಸಾಗಿಸುವ 21 ಕೋಟಿ ರೂ. ವೆಚ್ಚದ ಕಾಮಗಾರಿಗೆ ಪಂಪ್‌ಹೌಸ್ ಬಳಿ ಶಾಸಕ ಹೆಚ್.ಪಿ.ಮಂಜುನಾಥ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಸರ್ಕಾರ ಬದಲಾಗಿದ್ದರಿಂದಾಗಿ ಯೋಜನೆ ನೆನೆಗುದಿಗೆ ಬಿದ್ದಿತ್ತು. ಇದೀಗ ಪ್ರಥಮ ಹಂತದಲ್ಲಿ 21 ಕೋಟಿ ರೂ. ವೆಚ್ಚದ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ನಗರದ ದಾವಣಿ ಬೀದಿ ಹಾಗೂ ಶಬ್ಬೀರ್ ನಗರದ ತ್ಯಾಜ್ಯ ನೀರು ನದಿಗೆ ಸೇರುವುದನ್ನು ತಪ್ಪಿಸಲಾಗುತ್ತಿದೆ ಎಂದರು. ಹಾಲಿ ಇರುವ ರಿಡ್ಜ್‌ಮ್ಯಾನ್ ಹೋಲ್‌ಗೆ ಪಂಪ್ ಮಾಡುವ ಯೋಜನೆ ಇದಾಗಿದೆ ಎಂದರು.

ಶಾಸ್ತ್ರಿ ಶಾಲೆ ಹಿಂಭಾಗ ಹಾಗೂ ಇತರೆಡೆ ಮನೆಗಳ ತ್ಯಾಜ್ಯ ನೀರು ಹರಿದು ಲಕ್ಷ್ಮಣತೀರ್ಥ ನದಿಗೆ ಸೇರಿ ಕಲುಷಿತಗೊಳ್ಳುತ್ತಿದ್ದ ಹಿನ್ನೆಲೆಯಲ್ಲಿ ಮೂರು ಕಡೆ ವೆಟ್‌ವೆಲ್ ನಿರ್ಮಿಸಿ ತ್ಯಾಜ್ಯ ನೀರನ್ನು ಸಂಗ್ರಹಿಸಿ ಏರು ಕೊಳವೆಗಳ ಮೂಲಕ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಪಂಪ್ ಮಾಡುವ ಮೂಲಕ ನಗರದ ವಿವಿಧೆಡೆ ನದಿ ಸೇರುತ್ತಿರುವ ಕೊಳಚೆ ನೀರು ತಪ್ಪಿಸಲು ಇನ್ನೂ 100 ಕೋಟಿ ರೂ ಅಗತ್ಯವಿದ್ದು, ಹಂತ ಹಂತವಾಗಿ ಅಮೃತ್ ಯೋಜನೆಯಡಿ 100 ಕೋಟಿ ವೆಚ್ಚಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು.

ನಗರಸಭೆಯ ಪ್ರಭಾರ ಅಧ್ಯಕ್ಷ ದೇವನಾಯ್ಕ ಮಾಜಿ ಅಧ್ಯಕ್ಷೆ ಸೌರಭ, ಅನುಷಾ, ಹುಡಾ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ, ಸ್ಥಾಯಿ ಸಮಿತಿ ಅಧ್ಯಕ್ಷ ಸೈಯದ್ ಯೂನಸ್, ಸದಸ್ಯರಾದ ಹರೀಶ್, ಶರವಣ, ಕೃಷ್ಣರಾಜಗುಪ್ತ ಜಬೀವುಲ್ಲಾ ಖಾನ್, ರಮೇಶ್, ಹೆಚ್.ಪಿ.ಸತೀಶ್, ಪ್ರಿಯಾಂಕ ಥಾಮಸ್, ಸಮೀನಾ ಇಮ್ರಾನ್, ಅರುಣ್ ಚೌವ್ಹಾಣ್, ಪೌರಾಯುಕ್ತ ರವಿಕುಮಾರ್, ಎಇಇ ಮಹದೇವಪ್ರಭು, ಎ.ಇ.ಅಪ್ಸರ್ ಹಾಜರಿದ್ದರು.

ಮಾಸಿಕ ಸಂತೆ ಕಾರ್ಯಕ್ರಮ ಉದ್ಘಾಟನೆ



ಬೆಟ್ಟದಪುರ, ಮಾ. 28 (ಶಿವದೇವ್)– ಬೆಟ್ಟದಪುರದ ಗ್ರಾಪಂನಲ್ಲಿ ಏರ್ಪಡಿಸಿದ್ದ ಸಂಜೀವಿನಿ ಮಾಸಿಕ ಸಂತೆ ಕಾರ್ಯಕ್ರಮವನ್ನು ಶಾಸಕ ಕೆ.ಮಹದೇವ್ ಉದ್ಘಾಟಿಸಿದರು.

ಈ ವೇಳೆ ತಾಪಂ ಇಓ ಕೃಷ್ಣಕುಮಾರ್, ಮಹಿಳಾ ಮತ್ತು ಕೌಶಲ್ಯಾಭಿವೃದ್ಧಿ ಅಧಿಕಾರಿ ರೋಜಿ, ಗ್ರಾಪಂ ಅಧ್ಯಕ್ಷೆ ಮಂಜುಳಾ, ಉಪಾಧ್ಯಕ್ಷೆ ಸೌಮ್ಯ, ಸಹಕಾರ ಸಂಘಗಳ ಒಕ್ಕೂಟದ ಅಧ್ಯಕ್ಷೆ ವಸಂತ, ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಮುಖಂಡ ಗಗನ್, ಗ್ರಾಪಂ ಸದಸ್ಯರಾದ ಗಿರೀಶ್‌ಗೌಡ, ರಾಜಶೇಖರ್, ಈಶ್ವರಾಚಾರ್, ಬೆಟ್ಟದತುಂಗ ಗ್ರಾಪಂ ಅಧ್ಯಕ್ಷ ದೇವರಾಜ್, ತಾಲೂಕು ಜೆಡಿಎಸ್ ಮಹಿಳಾ ಅಧ್ಯಕ್ಷೆ ಪ್ರೀತಿ, ಗ್ರಾಮದ ಮುಖಂಡರಾದ ಪಟೇಲ್ ನಟೇಶ್, ಜನಜಾಗೃತಿ ಅಧ್ಯಕ್ಷ ಬಿ.ಜೆ. ಜೀವರಾಜ್, ಚಂದ್ರೇಗೌಡ, ಗ್ರಾಮೀಣ ನೀರು ಸರಬರಾಜು ಇಲಾಖೆ ಪ್ರಭು, ಪಿಡಿಓ ದಿವಾಕರ್ ಹಾಗೂ ಮಹಿಳಾ ಸಂಘಟನೆಗಳ ಮಹಿಳೆಯರು ಹಾಜರಿದ್ದರು.



ನಂಜನಗೂಡಿನ ಬಸವ ಭವನ ಕಾಮಗಾರಿಗೆ ವಿಶೇಷ ಅನುದಾನದಡಿ 2.5 ಕೋಟಿ ರೂ ಬಿಡುಗಡೆ ಮಾಡಿಸಿದ ಶಾಸಕ ಬಿ. ಹರ್ಷವರ್ಧನ್ ಅವರನ್ನು ಮಲ್ಲನಮೂಲೆ ಕಿರಿಯ ಶ್ರೀಗಳ ನೇತೃತ್ವದಲ್ಲಿ ತಾಲೂಕು ಬಿಜೆಪಿ ಮಂಡಲ ಅಧ್ಯಕ್ಷ ಮಹೇಶ್, ವೀರಶೈವ ಲಿಂಗಾಯತ ಸಮುದಾಯದ ಯುವಕರು ಸನ್ಮಾನಿಸಿದರು. ಈ ವೇಳೆ ವೀರಶೈವ ಲಿಂಗಾಯತ ಮಹಾಸಭಾದ ನಿಕಟಪೂರ್ವ ಅಧ್ಯಕ್ಷ ದೇಬೂರು ಶಿವು, ಬಿಜೆಪಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಧನಂಜಯ್ ಕುಮಾರ್, ಗ್ರಾಪಂ ಸದಸ್ಯರಾದ ಅಶೋಕ್, ನವೀನ್, ದಿಲೀಪ್, ಪ್ರತಾಪ್, ಶಿವಮೂರ್ತಿ, ಮನೋಜ್, ಮಹೇಂದ್ರ, ಮಹೇಶ್, ಸಂಜು, ದೀಪು ಇತರರಿದ್ದರು.

ಮರ ಬಿದ್ದು ಬೈಕ್ ಸವಾರ ಸಾವು

ತಿ.ನರಸೀಪುರ. ಮಾ.28(ಎಸ್‌ಕೆ)– ಬೈಕ್ ಮೇಲೆ ಮರ ಬಿದ್ದ ಪರಿಣಾಮ ಯುವಕ ನೋರ್ವ ಸಾವನ್ನಪ್ಪಿರುವ ಘಟನೆ ತಾಲೂಕಿನ ಹಳೇ ಕೆಂಪಯ್ಯನಹುಂಡಿ ಗ್ರಾಮದ ಬಳಿ ಸೋಮವಾರ ಸಂಭವಿಸಿದೆ.



ತಾಲೂಕಿನ ಮೂಗೂರು ಗ್ರಾಮದ ನಿವಾಸಿ ಮನು(28) ಸಾವನ್ನಪ್ಪಿದವರು. ಈತ ತನ್ನ ಹುಟ್ಟುಹಬ್ಬದ ಪ್ರಯುಕ್ತ ಮೈಸೂರಿನಲ್ಲಿದ್ದ ತನ್ನ ಸಹೋದರನ ಮನೆಗೆ ತೆರಳಿ ಸಿಹಿ ವಿತರಿಸಿ ಸ್ವಗ್ರಾಮಕ್ಕೆ ಬೈಕ್‌ನಲ್ಲಿ ಬರುತ್ತಿದ್ದರು. ಈ ವೇಳೆ ಹಳೇ ಕೆಂಪಯ್ಯನಹುಂಡಿ ಗ್ರಾಮದ ಬಳಿ ಬೈಕ್ ಮೇಲೆ ಮರ ಬಿದ್ದ ಪರಿಣಾಮ ತಲೆಗೆ ತೀವ್ರ ಪೆಟ್ಟಾಗಿ ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪಟ್ಟಣ ಠಾಣೆ ಸಿಪಿಐ ಕೃಷ್ಣಪ್ಪ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಕೈವಾರ ಕ್ಷೇತ್ರ 2ನೇ ಧರ್ಮಸ್ಥಳ: ಸಾ.ರಾ. ಮಹೇಶ್

ಕೆ.ಆರ್.ನಗರ, ಮಾ.28 (ಕೆಟಿಆರ್)– ಕೈವಾರ ಕ್ಷೇತ್ರ ರಾಜ್ಯದಲ್ಲಿ ಎರಡನೇ ಧರ್ಮಸ್ಥಳ ಕ್ಷೇತ್ರವಾಗಿ ಬೆಳೆಯುತ್ತಿದೆ. ಬಡವರ, ದೀನದಲಿತರ, ಕೂಲಿ ಕಾರ್ಮಿಕರ ಆರಾಧ್ಯ ಕ್ಷೇತ್ರವಾಗಿ ಹೊರಹೊಮ್ಮಿದೆ ಎಂದು ಶಾಸಕ ಸಾ.ರಾ. ಮಹೇಶ್ ತಿಳಿಸಿದರು.

ಪಟ್ಟಣದ ಪುರಸಭೆ ವೃತ್ತದಲ್ಲಿ ಕೆ.ಆರ್.ನಗರ ತಾಲೂಕು ಬಲಿಜ(ಬಣಜಿಗ) ಸಂಘದಿಂದ ಹಮ್ಮಿಕೊಂಡಿದ್ದ ಶ್ರೀ ಕೈವಾರ ತಾತಯ್ಯ ಶ್ರೀಯೋಗಿ ನಾರೇಯಣ ಯತೀಂದ್ರರ 295ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ತಾಲೂಕಿನಲ್ಲಿ ಅತಿ ಸೂಕ್ಷ್ಮಾತಿ ಸೂಕ್ಷ್ಮ ಸಮಾಜದವರಾದ ಬಲಿಜ (ಬಣಜಿಗ) ಜನಾಂಗದವರ ಬೆನ್ನೆಲುಬಾಗಿ ಸದಾ ನಿಮ್ಮ ಜೊತೆ ಇರುತ್ತೇನೆ ಎಂದರು.

ವಿಧಾನಪರಿಷತ್ ಮಾಜಿ ಸದಸ್ಯ ಟಿ.ಕೆ. ಚಿನ್ನಸ್ವಾಮಿ ಮಾತನಾಡಿ, ಕೈವಾರ ಕ್ಷೇತ್ರ

ಬಲಿಜ ಸಂಘದಿಂದ ಕೈವಾರ ತಾತಯ್ಯ ಜಯಂತಿ ಆಚರಣೆ



ಪ್ರಸಿದ್ಧವಾಗಿದ್ದು, ರಾಜ್ಯವಲ್ಲದೆ ದೇಶದ ವಿವಿಧ ಭಾಗಗಳಿಂದಲೂ ಜನರು ಕೈವಾರ ಕ್ಷೇತ್ರಕ್ಕೆ ಬರುತ್ತಿದ್ದಾರೆ. ಶ್ರೀ ಯೋಗಿ ನಾರೇಯಣ ಯತೀಂದ್ರರು ಕಾಲಜ್ಞಾನ ಘಟ್ಟದ ನಂಬಿಕೆಯ ಮೇಲೆ, ಜನರು ಆಗಮಿಸಿ ಪೂಜಿಸಿ ಹೋಗುತ್ತಿದ್ದಾರೆ ಎಂದರು.

ಇದಕ್ಕೂ ಮೊದಲು ಗರುಡಗಂಭ ವೃತ್ತದಲ್ಲಿ ಬೆಳ್ಳಿ ರಥದಲ್ಲಿ ಶ್ರೀ ಯೋಗಿ ನಾರೇಯಣ ಕೈವಾರ ತಾತಯ್ಯನವರ ಭಾವಚಿತ್ರದ ಮೆರವಣಿಗೆಗೆ ಕಾಂಗ್ರೆಸ್ ಮುಖಂಡ ಡಿ. ರವಿಶಂಕರ್ ಚಾಲನೆ ನೀಡಿದರು. ಪ್ರಾಧ್ಯಾಪಕ ಡಾ.ಟಿ.ರಮೇಶ್ ಕೈವಾರ ತಾತಯ್ಯನವರ ಜೀವನಚರಿತ್ರೆ ಕುರಿತು ಮಾತನಾಡಿದರು.

ಬಲಿಜ ಸಂಘದ ತಾಲೂಕು ಅಧ್ಯಕ್ಷ ಟಿ.ಎನ್.ದಯಾನಂದ್, ತಾಪಂ ಇಓ ಹೆಚ್.ಕೆ. ಸತೀಶ್, ಪುರಸಭಾ ಮಾಜಿ ಅಧ್ಯಕ್ಷ ನರಸಿಂಹರಾಜು, ಉಪಾಧ್ಯಕ್ಷ ಬಿ.ವಿ. ರಘು ನಾಥ್, ಪ್ರಧಾನ ಕಾರ್ಯದರ್ಶಿ ರಾಘು, ಮುಖಂಡರಾದ ಬಿ.ವಿ. ನಾಗೇಂದ್ರ, ಮಹೇಶ್, ವಕೀಲ ನಾಗೇಶ್, ಉತ್ಸವ ಸಮಿತಿ ಅಧ್ಯಕ್ಷ ಮಂಜುನಾಥ್, ಕಾರ್ಯದರ್ಶಿ ಅನ್ನಪೂರ್ಣಮ್ಮ, ಹಂಪಾಪುರ ಗ್ರಾಪಂ ಅಧ್ಯಕ್ಷೆ ವಿದ್ಯಾ, ಮಿರ್ಲೆ ಗ್ರಾಪಂ ಅಧ್ಯಕ್ಷೆ ಗೀತಾ, ಸದಸ್ಯೆ ಸಿಂಧು, ಪದಾಧಿಕಾರಿಗಳಾದ ರಾಜೇಶ್, ವಸಂತ ಕುಮಾರ್, ನಾರಾಯಣ್, ಮಂಜುನಾಥ್, ಶ್ರೀನಿವಾಸ್, ವಿಠಲ್, ಸಂಚಾಲಕರಾದ ಆನಂದ್, ವೆಂಕಟೇಶ್, ನಟರಾಜ್, ಗಣೇಶ್, ಗುರುನಾಥ್, ಗುರು, ಬಿ.ಟಿ. ನಾಗೇಂದ್ರ, ದೀಪು, ಆನಂದ, ದಿವಾಕರ, ತಿಮ್ಮಶೆಟ್ಟಿ ಮತ್ತಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಜೇಮ್ಸ್ (ಕ): ಬೆ.9.55ಕ್ಕೆ, ಮ.12.55ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.3.50ಕ್ಕೆ.
ಸ್ಕ್ರೀನ್ 2	ಜೇಮ್ಸ್ (ಕ): ಬೆ.8ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.10ಕ್ಕೆ, ಓರುತಿ (ಮ): ಬೆ.10.50ಕ್ಕೆ, ಆಂಬುಲೆನ್ಸ್ (ಇಂ): ರಾ.10ಕ್ಕೆ.
ಸ್ಕ್ರೀನ್ 3	ಎದರ್ಕುಂ ತುನಿಂದವನ್ (ತ): ಬೆ.10.05ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.1ಕ್ಕೆ, ಬಚ್ಚನ್ ಪಾಂಡೆ (ಹಿಂ): ಸಂ.4.10ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 4	ದಿ ಕಾಶ್ಮೀರ್ ಫೈಲ್ಸ್ (ಹಿಂ): ಬೆ.10ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ರಾಧೆಶ್ಯಾಮ್ (ತೆ): ಮ.1.15ಕ್ಕೆ, ಜೇಮ್ಸ್ (ಕ): ಮ.3.55ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಜೇಮ್ಸ್ (ಕ): ಬೆ.8.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.35ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ದಿ ಕಾಶ್ಮೀರ್ ಫೈಲ್ಸ್ (ಹಿಂ): ಬೆ.10.30ಕ್ಕೆ, ಮ.2.05ಕ್ಕೆ, ಸಂ.5.40ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಬಚ್ಚನ್ ಪಾಂಡೆ (ಹಿಂ): ಬೆ.9.20ಕ್ಕೆ, ಮ.3.45ಕ್ಕೆ, ಸಂ.6.50ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.12.20ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 4	ಜೇಮ್ಸ್ (ಕ): ಬೆ.11.15ಕ್ಕೆ, ಮ.2.30ಕ್ಕೆ, ಸಂ.5.45ಕ್ಕೆ, ಬಚ್ಚನ್ ಪಾಂಡೆ (ಹಿಂ): ರಾ.9ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಏಕ್ ಲವ್‌ಯಾ (ಕ): ಬೆ.10.45ಕ್ಕೆ, ಮ.1.45ಕ್ಕೆ, ಸಂ.6.35ಕ್ಕೆ, ಓಲ್ಡ್‌ಮಾಂಕ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಎದರ್ಕುಂ ತುನಿಂದವನ್ (ತ): ಬೆ.10.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ರಾಧೆಶ್ಯಾಮ್ (ತೆ): ಬೆ.10.30ಕ್ಕೆ, ಮ.1.15ಕ್ಕೆ, ಸಂ.4ಕ್ಕೆ, ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಆ ತೊಂಭತ್ತು ದಿನಗಳು (ಕ): ಬೆ.11ಕ್ಕೆ, ಡಿಯರ್ ಸತ್ಯ (ಕ): ಮ.1.30ಕ್ಕೆ, ಎದರ್ಕುಂ ತುನಿಂದವನ್ (ತ): ಸಂ.4.15ಕ್ಕೆ, ಹರೀಶ ವಯಸ್ಸು 36 (ಕ): ರಾ.7.15ಕ್ಕೆ, ಪದ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲವ್ ಮಾಕ್ಟೇಲ್ 2 (ಕ): ಸಂ.6ಕ್ಕೆ, ಡಿಯರ್ ಸತ್ಯ (ಕ): ಮ.12.35ಕ್ಕೆ, ರಾಧೆಶ್ಯಾಮ್ (ತೆ): ಬೆ.10.05ಕ್ಕೆ, ಬೆ.11.30ಕ್ಕೆ, ಮ.12.10ಕ್ಕೆ, ಮ.1ಕ್ಕೆ, ಮ.2.25ಕ್ಕೆ, ಮ.3.05ಕ್ಕೆ, ಮ.3.55ಕ್ಕೆ, ಸಂ.5.20ಕ್ಕೆ, ಸಂ.6.50ಕ್ಕೆ, ರಾ.8.15ಕ್ಕೆ, ರಾ.9.45ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಮ.2.50ಕ್ಕೆ, ರಾ.9.45ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ಬೆ.11.30ಕ್ಕೆ, ಸಂ.6.25ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.3.15ಕ್ಕೆ, ರಾ.9.45ಕ್ಕೆ, ಭೀಷ್ಮಪರ್ವಂ (ಮ): ರಾ.9ಕ್ಕೆ, ಪದ (ಮ): ಸಂ.6.40ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.20ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಆರ್‌ಆರ್‌ಆರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಆರ್‌ಆರ್‌ಆರ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಆರ್‌ಆರ್‌ಆರ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಆರ್‌ಆರ್‌ಆರ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಜೇಮ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ದ ಕಾಶ್ಮೀರ್ ಫೈಲ್ಸ್ (ಹಿ)	4 ಪ್ರದರ್ಶನಗಳು
ಸಂಗಂ	
ಜೇಮ್ಸ್ (ಕ)	4 ಪ್ರದರ್ಶನಗಳು
ಲಿಡೋ	
ದ ಕಾಶ್ಮೀರ್ ಫೈಲ್ಸ್ (ಹಿ)	4 ಪ್ರದರ್ಶನಗಳು
ತಿಬ್ಬಾದೇವಿ	
ಆರ್‌ಆರ್‌ಆರ್ (ತೆ)	4 ಪ್ರದರ್ಶನಗಳು

ಲಖನೌಗೆ ಸೋಲಿನ ಕಹಿ: ಗುಜರಾತ್‌ಗೆ ಜಯಭೇರಿ

ಮುಂಬೈ, ಮಾ.28– ಸಾಂಘಿಕ ಪ್ರದರ್ಶನದ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಗುಜರಾತ್ ಟೈಟಾನ್ಸ್ 5 ವಿಕೆಟ್‌ಗಳ ರೋಚಕ ಜಯ ಸಾಧಿಸಿದೆ.



ಇಲ್ಲಿನ ವಾಂಖೇಡೆ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಖನೌ ಸೂಪರ್ ಜೈಂಟ್ಸ್ ತಂಡದ ಮೊತ್ತ 29 ರನ್ ಆಗುವಷ್ಟರಲ್ಲಿ ಪ್ರಮುಖ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಜೊತೆಯಾದ ದೀಪಕ್ ಹೂಡಾ, ಆಯುಷ್ ಬದೋನಿ ಸಮಯೋಚಿತ ಅರ್ಧಶತಕ ಸಿಡಿಸಿ ತಂಡದ ಮೊತ್ತವನ್ನು 150ರ ಗಡಿ ತಲುಪಿಸಿದರು. ಈ ಜೋಡಿ 5ನೇ ವಿಕೆಟ್‌ಗೆ 87 ರನ್‌ಗಳ ಅತ್ಯಮೂಲ್ಯ ಜೊತೆಯಾಟವಾಡಿತು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಹೂಡಾ 55 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಗುಜರಾತ್ ಬೌಲರ್‌ಗಳನ್ನು ದಂಡಿಸಿದ ಆಯುಷ್ ಬದೋನಿ 54 ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ನಂತರ ಕ್ರೀಸ್‌ಗೆ ಆಗಮಿಸಿದ ಕೃನಾಲ್ ಪಾಂಡ್ಯ 21 ರನ್ ಗಳಿಸಿದರು. ಅಂತಿಮವಾಗಿ ಲಖನೌ ಸೂಪರ್ 6 ವಿಕೆಟ್ ನಷ್ಟಕ್ಕೆ 158 ರನ್‌ಗಳ ಸವಾಲಿನ ಮೊತ್ತ ದಾಖಲಿಸಿತು. ಗುಜರಾತ್ ಪರ ಮೊಹಮ್ಮದ್ ಶಮಿ 3, ವರುಣ್ ಆರೋನ್ 2, ರಶೀದ್ ಖಾನ್ 1 ವಿಕೆಟ್ ಕಬಳಿಸಿದರು.

ಸವಾಲಿನ ಮೊತ್ತ ಬೆನ್ನತ್ತಿದ ಗುಜರಾತ್ ಆರಂಭ ಕೂಡ ಉತ್ತಮವಾಗಿರಲಿಲ್ಲ. ತಂಡದ ಮೊತ್ತ 15 ರನ್ ಆಗುವಷ್ಟರಲ್ಲೇ ಶುಭಮನ್ ಗಿಲ್ ಹಾಗೂ ವಿಜಯ್ ಶಂಕರ್ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಈ ವೇಳೆ ಒಂದಾದ ನಾಯಕ ಹಾರ್ದಿಕ್ ಪಾಂಡ್ಯ ಹಾಗೂ ಮ್ಯಾಥ್ಯೂ ವೇಡ್ ಅರ್ಧಶತಕದ ಜೊತೆಯಾಟದಲ್ಲಿ ಭಾಗಿಯಾದರು. ಆದರೆ ಉತ್ತಮವಾಗಿ ಆಡುತ್ತಿದ್ದ ಹಾರ್ದಿಕ್ 33 ರನ್ ಗಳಿಸಿ ಕೃಣಾಲ್ ಪಾಂಡ್ಯಗೆ ವಿಕೆಟ್ ಒಪ್ಪಿಸಿದರು. ಇವರ ಬೆನ್ನಲ್ಲೇ 30 ರನ್ ಗಳಿಸಿದ್ದ ಮ್ಯಾಥ್ಯೂ ವೇಡ್ ಕೂಡ ನಿರ್ಗಮಿಸಿದರು. ಕೊನೆಯ 5 ಓವರ್‌ಗಳಲ್ಲಿ ಗೆಲುವಿಗೆ 68 ರನ್‌ಗಳ ಅವಶ್ಯಕತೆ ಇತ್ತು. ಈ ಹಂತದಲ್ಲಿ 60 ರನ್‌ಗಳ ಜೊತೆಯಾಟವಾಡಿದ ಡೇವಿಡ್ ಮಿಲ್ಲರ್ ಹಾಗೂ ರಾಹುಲ್ ತೆವಾಟಿಯಾ ಪಂದ್ಯಕ್ಕೆ ತಿರುವು ನೀಡಿದರು. ಆದರೆ 30 ರನ್ ಗಳಿಸಿದ್ದ ಮಿಲ್ಲರ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ 24 ಎಸೆತಗಳಲ್ಲಿ ಅಜೇಯ 40 ರನ್ ಗಳಿಸಿದ ತೆವಾಟಿಯಾ ಗುಜರಾತ್‌ಗೆ ರೋಚಕ ಗೆಲುವು ಒದಗಿಸಿಕೊಡಲು ನೆರವಾದರು. ಅವರಿಗೆ ತಕ್ಕ ಸಾಥ್ ನೀಡಿದ ಅಭಿನವ್ ಮನೋಹರ್ 7 ಎಸೆತಗಳಲ್ಲಿ 15 ರನ್ ಗಳಿಸಿ ಔಟಾಗದೆ ಉಳಿದರು. ಈ ಮೂಲಕ ಗುಜರಾತ್ 19.4 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 161 ರನ್ ಗಳಿಸಿ ಗೆಲುವು ದಾಖಲಿಸಿತು. ಲಖನೌ ಸೂಪರ್ ಜೈಂಟ್ಸ್ ಪರ ಚಮೀರಾ 2, ಆವೇಶ್ ಖಾನ್, ಕೃನಾಲ್ ಪಾಂಡ್ಯ ಹಾಗೂ ದೀಪಕ್ ಹೂಡಾ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಮೊಹಮದ್ ಶಮಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.


ಶ್ರೀ ಚಾಮುಂಡೇಶ್ವರಿ ಕೃಪೆ
ಹೋಟೆಲ್ ದೇವಿಶ್ರೀ ಹಾಗೂ ಮಹಾರಾಜ ಗ್ರಾಂಡ್
ಹೋಟೆಲ್‌ನ ಮಾಲೀಕರಾದ
ಆರ್.ಅಶ್ವಥ್‌ನಾರಾಯಣ್
ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಮೊ: 9036709090